"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ವಿಧಾನ ಪರಿಷತ್ತು

5ನೇ ಫೆಬ್ರವರಿ 2021
ಶುಕ್ರವಾರ

## ವಿಷಯಾನುಕ್ರಮಣಿಕೆ


01. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**518** – ಗೋ ಹತ್ಯೆ  ನಿಷೇಧ ಕಾಯ್ದೆ ಕುರಿತು ಇರುವ ಗೊಂದಲದ ಬಗ್ಗೆ.
- ಶ್ರೀ ಸಿ.ಎಂ.ಇಬ್ರಾಹಿಂ
- ಶ್ರೀ ಪ್ರಭು ಬಿ.ಚವ್ಹಾಣ್ (ಪಶುಸಂಗೋಪನೆ ಸಚಿವರು)

**562** – ಪರಿಸರ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ವಿದ್ಯುತ್ ಚಾಲಿತ ಬಸ್ಸು ಬಳಸುವ ಬಗ್ಗೆ.
- ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿ, ಸಾರಿಗೆ ಇಲಾಖೆ)

**545** – ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಿತಿಗಳ ಬಗ್ಗೆ.
- ಶ್ರೀ ಕೆ.ಹರೀಶ್ ಕುಮಾರ್
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**555** – ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಬಗ್ಗೆ.
- ಶ್ರೀ ಆರ್.ಧರ್ಮಸೇನ
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**495** – ಪಶು ಆಸ್ಪತ್ರೆಗಳ ಬಗ್ಗೆ.
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಪ್ರಭು ಬಿ.ಚವ್ಹಾಣ್ (ಪಶುಸಂಗೋಪನೆ ಸಚಿವರು)

**574** – ಮೂಢನಂಬಿಕೆಯಿಂದ ಕೂಡಿದ ಬಾಲ್ಯ ವಿವಾಹಗಳ ಬಗ್ಗೆ.
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ (ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು)

**511** – ಕೊಡಗು ಜಿಲ್ಲೆಯಲ್ಲಿ ಸುಸಜ್ಜಿತ ಬಸ್ ನಿಲ್ದಾಣಗಳ ಬಗ್ಗೆ.
- ಶ್ರೀಮತಿ ಎಸ್.ವೀಣಾ ಅಚ್ಚಯ್ಯ
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿ, ಸಾರಿಗೆ ಇಲಾಖೆ)

**536** – ಪಂಚಾಯಿತಿಗಳಿಗೆ ಬಿಡುಗಡೆಯಾದ ಅನುದಾನದ ಬಗ್ಗೆ.
- ಡಾ: ವೈ.ಎ.ನಾರಾಯಣಸ್ವಾಮಿ
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)


"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**510** – ಬೆಂಗಳೂರು ನಗರದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಕೊರತೆ ಬಗ್ಗೆ

– ಶ್ರೀ ಯು.ಬಿ.ವೆಂಕಟೇಶ್

– ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ(ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು)

**526** – ಜವಳಿ ನಿಗಮಗಳ ಕಾರ್ಯನಿರ್ವಹಣೆ ಬಗ್ಗೆ.

– ಶ್ರೀಮತಿ ಭಾರತಿಶೆಟ್ಟಿ

– ಶ್ರೀಮಂತ ಬಾಳಾಸಾಹೇಬ ಪಾಟೀಲ್(ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

**528** – ಪಶುಸಂಗೋಪನೆ ಇಲಾಖೆಗೆ ಮಂಜೂರಾಗಿರುವ ಅನುದಾನದ ಬಗ್ಗೆ.

– ಶ್ರೀ ಎನ್.ಅಪ್ಪಾಜಿಗೌಡ

– ಶ್ರೀ ಪ್ರಭು ಬಿ.ಚವ್ಹಾಣ್ (ಪಶುಸಂಗೋಪನೆ ಸಚಿವರು)

**544** – ಅಂತ್ಯ ಸಂಸ್ಕಾರ ಸಹಾಯ ನಿಧಿ ಯೋಜನೆ ಬಗ್ಗೆ.

– ಶ್ರೀ ಸುನೀಲ್ ವಲ್ಯಾಪುರ್

– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**02.** ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಸದಸ್ಯರಿಗೆ ಹಿಂದಿನ ರಾತ್ರಿ ಅಜೆಂಡಾ ಜೊತೆಯಲ್ಲಿ ಲಿಖಿತ ಉತ್ತರವನ್ನು ಕಳುಹಿಸಿಕೊಡುವ ಬಗ್ಗೆ.

– ಹಂಗಾಮಿ ಸಭಾಪತಿಯವರು

– ಶ್ರೀ ಸಿ.ಎಂ.ಇಬ್ರಾಹಿಂ

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

**03.** ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**523** – ವಿಕಲಚೇತನರಿಗೆ ಜಾರಿಗೊಳಿಸಿರುವ ಯೋಜನೆಗಳ ಬಗ್ಗೆ.

– ಶ್ರೀ ಗೋವಿಂದ ರಾಜು

– ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ (ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು)

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳು

**04.** ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ 50% ಮಾತ್ರ ಉತ್ತರ ಬಂದಿರುವ ಬಗ್ಗೆ.

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

– ಶ್ರೀ ಸಿ.ಎಂ.ಇಬ್ರಾಹಿಂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**05.** ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) 2020–21ನೇ ಶೈಕ್ಷಣಿಕ ವರ್ಷಕ್ಕೆ ಹಿಂದಿನ ವರ್ಷದ ಶೇಕಡ 50ರಷ್ಟು ಮಾತ್ರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿರುವ ಬಗ್ಗೆ.
- ಶ್ರೀ ಮರಿತಿಬ್ಬೇಗೌಡ
- ಡಾ: ಸಿ.ಎನ್.ಅಶ್ವಥ್ ನಾರಾಯಣ್(ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಇಲಾಖೆ)

ಆ) ರಾಜ್ಯದ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಭ್ರಷ್ಟಾಚಾರ, ಮಧ್ಯವರ್ತಿಗಳ ಹಾವಳಿಯಿಂದ ಕಛೇರಿಗಳು ಪಾರದರ್ಶಕ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಎಂಬುದರ ಬಗ್ಗೆ.
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿ, ಸಾರಿಗೆ ಇಲಾಖೆ)

ಇ) ಮಂಡ್ಯದ ಮೈ ಷುಗರ್ ಸಕ್ಕರೆ ಕಂಪನಿಯ ನೌಕರರನ್ನು ಸ್ವಯಂ ನಿವೃತ್ತಿ ಯೋಜನೆಯ ಬದಲಿಗೆ ಯಾವುದಾದರೊಂದು ನಿಗಮದಲ್ಲಿ ಇವರುಗಳ ಸೇವೆಯನ್ನು ವಿಲೀನಗೊಳಿಸುವ ಬಗ್ಗೆ.
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಈ) ವಿದ್ಯಾರ್ಥಿಗಳ ಹಿತದೃಷ್ಟಿ ಹಾಗೂ ಶೈಕ್ಷಣಿಕ ಗುಣಮಟ್ಟದ ಅಭಿವೃದ್ಧಿಗೆ ರಾಜ್ಯದ 19 ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಬೋಧಕರು ಮತ್ತು ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ.
- ಶ್ರೀ ಎಸ್.ವ್ಹಿ.ಸಂಕನೂರ
- ಡಾ: ಸಿ.ಎನ್.ಅಶ್ವಥ್ ನಾರಾಯಣ್(ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಇಲಾಖೆ)

ಉ) 2020–21ನೇ ಸಾಲಿನ ಕ್ರಿಯಾ ಯೋಜನೆಯಿಂದ ಹಗರಿ ಕೃಷಿ ವಿಶ್ವವಿದ್ಯಾಲಯವನ್ನು ಉನ್ನತೀಕರಿಸಿ, ಕೃಷಿ ಡಿಪ್ಲೊಮಾ ಕಾಲೇಜನ್ನು ಕೃಷಿ ಪದವಿ ಕಾಲೇಜ್ ಆಗಿ ಮೇಲ್ದರ್ಜೆಗೇರಿಸುವ ಬಗ್ಗೆ.
- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**06.** ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ

ಅ) ಗದಗ ಜಿಲ್ಲೆಯ ಕಪ್ಪತಗುಡ್ಡಕ್ಕೆ ಬೆಂಕಿ ಬಿದ್ದ ಘಟನೆ ಬಗ್ಗೆ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ)

ಆ) ಅಮಾಯಕ ಯೋಧನ ಪತ್ನಿಯನ್ನು ವಂಚಿಸಿರುವ ಬಗ್ಗೆ.
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಗೃಹ ಸಚಿವರ ಪರವಾಗಿ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ) ತೊಗರಿ ಬೇಳೆಗೆ ಹಿಂದಿನಂತೆ ರೈತರಿಗೆ ರಾಜ್ಯ ಸರ್ಕಾರದಿಂದ ಪ್ರೋತ್ಸಾಹಧನ ಘೋಷಣೆಯಾಗಿರುವುದಿಲ್ಲ. ಕೂಡಲೇ ನಿಗಧಿಪಡಿಸಿದ ದರದ ಜೊತೆಗೆ ಸರ್ಕಾರವು 8,000 ರೂ.ಗಳ ಬೆಂಬಲ ಬೆಲೆ ನಿಗದಿ ಮಾಡಬೇಕು ಹಾಗೂ ತೊಗರಿ ಖರೀದಿ ಪ್ರಕ್ರಿಯೆಗೆ ಸಮಯ ನಿಗದಿ ಮಾಡಬಾರದು ಎನ್ನುವ ವಿಷಯದ ಬಗ್ಗೆ.

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಸಹಕಾರ ಸಚಿವರ ಪರವಾಗಿ)

ಈ) ಸರ್ಕಾರಿ ವಸತಿ ಶಾಲೆಗಳ ಶಿಕ್ಷಕರ ವೇತನವನ್ನು ಹೆಚ್ಚಿಸುವ ಬಗ್ಗೆ.

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಸಮಾಜ ಕಲ್ಯಾಣ ಸಚಿವರ ಪರವಾಗಿ)

ಉ) ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ.

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ)

ಊ) ಧಾರ್ಮಿಕ ಕೇಂದ್ರಗಳನ್ನು ನೋಂದಣಿ ಕಾರ್ಯದಡಿ ತರುವ ಬಗ್ಗೆ

- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯಿ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಋ) ಮೈಸೂರಿನ ಕೆ.ಆರ್.ಎಸ್.ರಸ್ತೆಯಲ್ಲಿರುವ ಇ.ಎಸ್.ಐ. ಆಸ್ಪತ್ರೆ ಕಟ್ಟಡ ಕಾಮಗಾರಿ ಪೂರ್ಣಗೊಳ್ಳದೆ ಸೂಕ್ತ ಚಿಕಿತ್ಸೆ ಇಲ್ಲದೆ ವಿಮಾದಾರರಿಗೆ ತೊಂದರೆಯಾಗಿರುವ ಬಗ್ಗೆ.

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕಾರ್ಮಿಕ ಸಚಿವರ ಪರವಾಗಿ)

**07.** ಪ್ರಕಟಣೆಗಳು

**08.** ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಬೆಂಗಳೂರು ನಗರದಲ್ಲಿ ಸಾರ್ವಜನಿಕರಿಗೆ ಸಂಚಾರ ದಟ್ಟಣೆಯ ಕಿರಿಕಿರಿ ನಿರಂತರವಾಗಿದ್ದು, ಜೊತೆಗೆ ದುಬಾರಿ ಪಾರ್ಕಿಂಗ್ ಶುಲ್ಕದ ಬಗ್ಗೆ.

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**09.** ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

**ಅ) ಸೈಂಟ್ ಜೋಸಫ್ ವಿಶ್ವವಿದ್ಯಾಲಯ ವಿಧೇಯಕ, 2021**

- ಡಾ: ಸಿ.ಎನ್.ಅಶ್ವಥ್ ನಾರಾಯಣ್(ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಇಲಾಖೆ)
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಪುಟ್ಟಣ್ಣ
- ಶ್ರೀ ಅಲ್ಲಂ ವೀರಭದ್ರಪ್ಪ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಎನ್.ಅಪ್ಪಾಜಿಗೌಡ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**10.** ಕಾರ್ಯದರ್ಶಿಯವರ ವರದಿ

**11.** ವರದಿಯನ್ನೊಪ್ಪಿಸುವುದು

**12.** ಶಾಸನ ರಚನೆ
ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಆ) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ 2020

– ಶ್ರೀ ಆರ್.ಶಂಕರ್(ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)
– ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಅಪ್ಪಾಜಿಗೌಡ
– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು)
– ಶ್ರೀ ಪಿ.ಆರ್.ರಮೇಶ್
– ಶ್ರೀ ಬಸವರಾಜ ಪಾಟೀಲ್ ಇಟಗಿ
– ಶ್ರೀ ಕೆ.ಟಿ. ಶ್ರೀಕಂಠೇಗೌಡ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಇ) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020

– ಶ್ರೀ ಅರಬೈಲ್ ಹೆಬ್ಬಾರ್ ಶಿವರಾಂ (ಕಾರ್ಮಿಕ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**13.** ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಂದುವರೆದ ಚರ್ಚೆ
– ಶ್ರೀ ಆಯನೂರು ಮಂಜುನಾಥ್

– – –

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(182) 5-2-2021/11.10/ಡಿಎಸ್-ಎಕೆ**

**ಕರ್ನಾಟಕ ವಿಧಾನ ಪರಿಷತ್ತು**

**ಶುಕ್ರವಾರ, 5ನೇ ಫೆಬ್ರವರಿ 2021**

**ಸದನವು ವಿಧಾನಸೌಧದ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.**

**ಹಂಗಾಮಿ ಸಭಾಪತಿ (ಶ್ರೀ ಎಂ.ಕೆ.ಪ್ರಾಣೇಶ್) ಯವರು ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**01. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 518**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಈ ಉತ್ತರ ನೋಡಿದರೆ ನನಗೆ ನಗಬೇಕೋ ಅಳಬೇಕೋ ಎಂಬುದು ಗೊತ್ತಿಲ್ಲ. ಈ ವಿಷಯದ ಬಗ್ಗೆ ವಿಧೇಯಕವನ್ನು ತಂದಿದ್ದಾರೆ. ಆದರೆ ಸರ್ಕಾರ ವತಿಯಿಂದ ಒಂದು ಗೋಶಾಲೆಯನ್ನು ನಡೆಸುತ್ತಿಲ್ಲ. ಸರ್ಕಾರಕ್ಕೂ ಅದಕ್ಕೂ ಸಂಬಂಧವೇ ಇಲ್ಲ. ಈ ಗೋಶಾಲೆಗಳು ಹೇಗೆ ನಡೆಯುತ್ತಿವೆ, ಗೋವುಗಳಿಗೆ ತಿನ್ನುವುದಕ್ಕೆ ಅನ್ನ ಕೊಡುತ್ತಿದ್ದಾರೆಯೇ, ರೋಗ ಬಂದರೆ ನೋಡುವುದಕ್ಕೆ ಇದ್ದಾರೆಯೇ, ರೋಗವನ್ನು ಬರದಿರುವಂತೆ ನಿಯಂತ್ರಣ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದಾರೆಯೇ, ಇದರ ಬಗ್ಗೆ ಮಾನ್ಯ ಸಚಿವರು ಉತ್ತರದಲ್ಲಿ ಏನು ಹೇಳಿಲ್ಲ. ಎರಡನೆಯ ಪ್ರಶ್ನೆ, ರಾಜ್ಯ ಸರ್ಕಾರದ ಗೋ ಹತ್ಯೆ ನಿಷೇಧ ಕಾಯ್ದೆ ಜಾರಿಯಿಂದ ರೈತರಿಗೆ ಏನು ಅನಾನುಕೂಲವಾಗಿಲ್ಲವೆಂದು ಉತ್ತರದಲ್ಲಿ ಮಾನ್ಯ ಸಚಿವರು ಹೇಳಿದ್ದಾರೆ. ಮಾನ್ಯ ಸಚಿವರೇ, ನಾನು 25,000 ರೂಪಾಯಿ ಕೊಟ್ಟು ನಾನು ಒಂದು ಹಸುವನ್ನು ತರುತ್ತೇನೆ. ಆ ಹಸು ಹಾಲು ಕೊಡುತ್ತದೆ, ನಾಲ್ಕು ವರ್ಷವಾದ ಮೇಲೆ ಹಾಲು ಕೊಡುವುದನ್ನು ನಿಲ್ಲಿಸಿಬಿಡುತ್ತದೆ. ಆ ಹಸುವನ್ನು ನಾನು ಏನು ಮಾಡಬೇಕು? ನಾನು ಅದನ್ನು ಮಾರಿ ಅರ್ಧ ಹಣ ಬಂದರೆ ಅದಕ್ಕೆ ಇನ್ನು ಅರ್ಧ ಹಣವನ್ನು ಹಾಕಿ ಬೇರೆ ಹಸುವನ್ನು ತರಬೇಕು. ಅದು ನನ್ನ ಜೀವನ. ಈ ಜೀವನೋಪಾಯಕ್ಕೆ ಮಣ್ಣು ಹಾಕಿಬಿಟ್ಟರು. ಇದರ ಬಗ್ಗೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ, ಇಲ್ಲ. ನಾವು ಬೇಸಾಯಕ್ಕೆ ಎತ್ತು ತರುತ್ತೇವೆ. ಮೂರ್ನಾಲ್ಕು ವರ್ಷ ಬೇಸಾಯ ಮಾಡಿದರೆ ಆ ಎತ್ತು ಐದನೇ ವರ್ಷಕ್ಕೆ ಯಾವ ಕೆಲಸಕ್ಕೂ ಬರುವುದಿಲ್ಲ. ಅದನ್ನು ಮಾರಬೇಕು, ಬೇರೆ ಎತ್ತು ತರಬೇಕು. ಅದನ್ನು ಮಾರುವುದಕ್ಕೆ ಇವತ್ತಿನ ದಿವಸ ಅವಕಾಶ ಇಲ್ಲ. ಜೆರ್ಸಿ ಹಸು ಗಂಡು ಆಕಳು ಹಾಕಿದರೆ ಅದು ಯಾವ ಕೆಲಸಕ್ಕೂ ಬರುವುದಿಲ್ಲ. ಅದು ಆಂಗ್ಲೋ ಇಂಡಿಯನ್ ತಾಯಿ. ಅದೇನು ಮಾಡಬೇಕು? ಎಮ್ಮೆ, ಕೋಣ 13 ವರ್ಷದವರಿಗೂ ಸಾಕಿ ಎಂದು ಹೇಳುತ್ತಾರೆ. ಇವತ್ತು ಹಾಲು ಕೊಡುವುದಾದರೆ ಸಾಕಬಹುದು. ಇವತ್ತು ಮನೆಯಲ್ಲಿ ಸ್ವಂತ ತಂದೆ-ತಾಯಿಯನ್ನು ಸಾಕುವುದಕ್ಕೆ ನಮ್ಮ ಹತ್ತಿರ ಹಣ ಇಲ್ಲ. ಇವತ್ತು ಈ ವ್ಯವಸ್ಥೆಯಲ್ಲಿ, ಮಾನ್ಯ ಸಚಿವರು ಈ ವಿಧೇಯಕವನ್ನು ತರುವುದಕ್ಕಿಂತ ಮುಂಚಿತವಾಗಿ, ವಾರಕ್ಕೆ ಒಂದು ಸಲ ರೈತರ ಸಂತೆಯಾಗುತ್ತದೆ. ಅನೇಕ ಜನ ರೈತರು ಇವತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಾಮಾಜಿಕ

ಜಾಲತಾಣದಲ್ಲಿ ವೈರಲ್ ಆಗಿ ಬಂದಿದೆ. ಹಾಲು ಕೊಡುವ ಹಸು ಹಾಲು ಕೊಡುವುದನ್ನು ನಿಲ್ಲಿಸಿದ ಮೇಲೆ ಗೋ ತಳಿಗಳನ್ನು ಕಡಿಯಲೇ ಬಾರದು. ಸರ್ಕಾರ ಇದಕ್ಕೆಂದೇ ಬಜೆಟ್‌ನಲ್ಲಿ ಹಣವನ್ನು ಇಡಬೇಕು. ತಿಂಗಳಿಗೆ ಎಷ್ಟು ಹಸು ಹೊರಗೆ ಬರುತ್ತವೆ ಎನ್ನುವ ಲೆಕ್ಕ ಸರ್ಕಾರಕ್ಕೆ ಸಿಕ್ಕಿದೆಯೇ? ಕರ್ನಾಟಕ ರಾಜ್ಯದಲ್ಲಿ ವರ್ಷಕ್ಕೆ ಗೋವು ಎಷ್ಟು ಉತ್ಪತ್ತಿಯಾಗುತ್ತಿದೆ ಎಂಬುದು ಲೆಕ್ಕ ಇದೆಯೇ? ಗೋ ಹತ್ಯೆ ನಿಷೇಧ ಮಾಡಿದ ಮೇಲೆ ಮಹಾರಾಷ್ಟ್ರದಲ್ಲಿ ಗೋ ಸಂಖ್ಯೆ ಜಾಸ್ತಿಯಾಗಿದೆಯೋ, ಕಡಿಮೆಯಾಗಿದೆಯೋ ಎಂಬ ಮಾಹಿತಿಯನ್ನು ಅಲ್ಲಿಂದ ತರಿಸಿಕೊಂಡಿದ್ದಾರೆಯೇ? ಉತ್ತರ ಪ್ರದೇಶದ ಹಳ್ಳಿಗಳಲ್ಲಿ ಇವತ್ತು ಯಾವ ಶಾಲೆಗಳು ನಡೆಯುತ್ತಿಲ್ಲ. ಎಲ್ಲಾ ಶಾಲೆಗಳೂ ಇವತ್ತು ಗೋಶಾಲೆಗಳಾಗಿಬಿಟ್ಟಿವೆ. ಇವತ್ತಿನ ದಿವಸ ಎಲ್ಲಾ ಹಸುಗಳನ್ನು ತೆಗೆದುಕೊಂಡು ಹೋಗಿ ಅಲ್ಲಿ ಕಟ್ಟಿ ಹಾಕಿಬಿಟ್ಟಿದ್ದಾರೆ. ಈ ಗೋವು ಸತ್ತರೆ ಹೂಳಬೇಕು. ಮನುಷ್ಯರಿಗೆ ಹೂಳುವುದಕ್ಕೆ ಜಾಗವಿಲ್ಲ. ಇದಕ್ಕೆ ಹೂಳುವುದಕ್ಕೆ ಜಾಗದ ವ್ಯವಸ್ಥೆಯನ್ನು ಏನು ಮಾಡುತ್ತಾರೆ? ಸರ್ಕಾರದವರು ಒಂದು ವಿಧೇಯಕವನ್ನು ತರಬೇಕಾದರೆ ರೈತ ಸಂಘದವರನ್ನು ಕರೆಸಿಕೊಂಡು, ಪಶು ವೈದ್ಯರನ್ನು ಕರೆಸಿಕೊಂಡು ಇದರ ಬಗ್ಗೆ ಚರ್ಚೆ ಮಾಡಿ ನಿರ್ಧಾರಕ್ಕೆ ಬರಬೇಕಾಗಿತ್ತು. ಆದರೆ ಆತುರಾತುರವಾಗಿ ಅಜ್ಮೀರ್‌ನಲ್ಲಿ ಸಾಬರ ಕಲರ್ ಹಾಕಿಕೊಂಡು ಬಂದು ಮಾಡಿಬಿಟ್ಟರಿ. ಬಹಳ ಸಂತೋಷ, ಅದು ನಮ್ಮ ಬಣ್ಣವಾಗಿದೆ. ನಮಗೂ ಒಂದು ಕೊಟ್ಟಿದ್ದರೆ ನಾವು ಹಾಕಿಕೊಳ್ಳುತ್ತಿದ್ದೆವು. ಅವತ್ತು ಒಂದೇ ದಿವಸ ಅವರು ಹಾಕಿಕೊಂಡು ಬಿಟ್ಟುಬಿಟ್ಟರು. ಇವತ್ತು ನಾನು ಮಾನ್ಯ ಸ್ಪೀಕರ್‌ರಿಗೆ ಪ್ರಾರ್ಥನೆ ಮಾಡುತ್ತೇನೆ, ಇದನ್ನು ಮಾರುವಂಥದಕ್ಕೆ ಖರೀದಿ ವ್ಯವಸ್ಥೆ ಮಾಡುವುದಂಥದಕ್ಕೆ ತಾಲ್ಲೂಕುಗಳಲ್ಲಿ ವ್ಯವಸ್ಥೆ ಮಾಡಬೇಕು. ಇವತ್ತು ಮಾನ್ಯ ಬಸವರಾಜ ಹೊರಟ್ಟಿಯವರು ಒಂದು ಆರ್ಟಿಕಲ್‌ನ್ನು ಬರೆದಿದ್ದಾರೆ. ಇದರಲ್ಲಿ ಗೋ ಹತ್ಯೆ ಸೆಂಟಿಮೆಂಟ್ ಇದೆ. ಕುರಿಯೂ ದೇವರೇ. ಪಶಯಜ್ಞ. ಕುರಿ ಪಾರ್ವತಿಯ ತಂದೆ. ಕೋಳಿಯೂ ದೇವರೇ. ಅದು ಸುಬ್ರಮಣ್ಯ.

**(ಮುಂದು)**

**(183)05-02-2021/11.20/ಬಿ.ಕೆ.ಪಿ-ಆರ್‌ಎನ್**

**ಶ್ರೀ ಸಿ.ಎಂ.ಇಬ್ರಾಹಿಂ (ಮುಂದು):**

**"ಮತ್ಸ್ಯಾಕಾರ ಶರೀರ ನಮೋ, ಹರಿಭಕ್ತಾಮ್ ತೇ ಪರಿಪಾಲಯಮಾಮ್",** ವಿಷ್ಣುವಿನ ಅವತಾರ ಮೀನು. ಇವತ್ತು ಮೀನನ್ನು ನೀವು ಮುಟ್ಟುತ್ತಿಲ್ಲ, ಅದನ್ನು ಬ್ರಾಹ್ಮಣ ಹವ್ಯಕರು ತಿನ್ನುತ್ತಾರೆಂದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ :–** ಮಾನ್ಯ ಇಬ್ರಾಹಿಂ ಸಾಹೇಬರೇ ಈ ರೀತಿ ಹೇಳಿದರೆ, ಇದಕ್ಕೆ ಏನು ಹೇಳಬೇಕು ಅನ್ನುವುದೇ ತಿಳಿಯುತ್ತಿಲ್ಲ. ತಾವು ಪ್ರಶ್ನೆ ಕೇಳಿದಿರಿ, ಸರಿ. ಈ ರೀತಿ ವಚನ ಎಲ್ಲವನ್ನು ಹೇಳುತ್ತಿದ್ದರೆ ಸಚಿವರು ನೀವು ಹೇಳುತ್ತಿರುವುದೆಲ್ಲಾ ಸರಿ ಎಂದು ಸುಮ್ಮನೆ ಕುಳಿತುಬಿಡುತ್ತಾರೆ ಅಷ್ಟೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಈಗ ಸಚಿವರು ಮಾಡಬೇಕಿರುವುದೇನೆಂದರೆ, ಈ ವಿಚಾರಗಳನ್ನೆಲ್ಲಾ ಬದಿಗೊತ್ತಿ ನಮ್ಮನ್ನು ಕರೆಯಿರಿ, ರೈತ ಸಂಘದವರನ್ನು ಕರೆಯಿರಿ, ವಿರೋಧ ಪಕ್ಷದ ನಾಯಕರನ್ನು ಕರೆಯಿರಿ. ಈ ವಿಚಾರದ ಬಗ್ಗೆ ಯಾವ ಒಂದು sentiment ಕಾಪಾಡಬೇಕು ಎನ್ನುವ ಬಗ್ಗೆ ನಾವು ನೀವೆಲ್ಲಾ ಕುಳಿತು ಒಂದು ಮಾರ್ಗೋಪಾಯವನ್ನು ಕಂಡುಕೊಳ್ಳೋಣ. ಯಾರನ್ನು ಮೆಚ್ಚಿಸಲು ಇದನ್ನು ತರಾತುರಿಯಲ್ಲಿ ತಂದಿದ್ದೀರಿ. ಇದರಿಂದ ಯಾರಿಗೂ ಸಂತೋಷವಿಲ್ಲ. ಎಲ್ಲದಕ್ಕೂ ಮೊದಲು ಇದು ಚರ್ಮಕ್ಕೆ ಸಂಬಂಧಿಸಿದ್ದು ಚಮ್ಮಗಾರ ಅರಳಯ್ಯ, ಮಾದಾರ ಚನ್ನಯ್ಯ ಅವರೆಲ್ಲಾ ಎಲ್ಲಿಗೆ ಹೋಗಬೇಕು. ಇದರಿಂದ ಸುಮಾರು 25 ಲಕ್ಷ ಜನ ನಿರುದ್ಯೋಗಿಗಳಾಗುತ್ತಿದ್ದಾರೆ. ದಯವಿಟ್ಟು ಉತ್ತರ ಕೊಡಿ. ನಂತರ ಮತ್ತೆ ಕೇಳುತ್ತೇನೆ.

**ಶ್ರೀ ಪ್ರಭು ಬಿ. ಚವ್ಹಾಣ್:** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸಿ.ಎಂ.ಇಬ್ರಾಹಿಂರವರು ಹಲವಾರು ವಿಚಾರಗಳನ್ನು ಸವಿಸ್ತಾರವಾಗಿ ಸಲಹೆ ಮತ್ತು ಸೂಚನೆ ರೀತಿಯಲ್ಲಿ ನಮಗೆ ಹೇಳುತ್ತಿದ್ದಾರೆ. ಗೋಶಾಲೆಗಳ ಬಗ್ಗೆ ಹೇಳಿದ್ದಾರೆ. ಗೋಹತ್ಯೆ ವಿಧೇಯಕದ ಬಗ್ಗೆ ಹೇಳುತ್ತಿದ್ದಾರೆ. ಕಾಯ್ದೆ ತಂದಿದ್ದೀರಿ ಮುಂದೆ ಅದರ ಮಾಸ್ಟರ್ ಪ್ಲಾನ್ ಏನು ಯೋಜನೆ ಏನೆಂದು ಕೇಳುತ್ತಿದ್ದಾರೆ. ನಮ್ಮಲ್ಲಿ ಎಲ್ಲಾ ರೀತಿಯ ಮಾಸ್ಟರ್ ಪ್ಲಾನ್, ಯೋಜನೆ ಎಲ್ಲಾ ಇದೆ. ಈ ವಿಧೇಯಕ ಪಾಸ್ ಆದನಂತರ ಹಂತ ಹಂತವಾಗಿ ಗೋ–ಹತ್ಯೆ ನಿಷೇಧವನ್ನು ಜಾರಿ ಮಾಡುತ್ತೇವೆ. ಗೋವುಗಳನ್ನು ಸಾಕುವ ಜವಾಬ್ದಾರಿ ನಮ್ಮದೆ. ನಮ್ಮದೇ ಖಾಸಗಿ ಗೋಶಾಲೆ ಇದೆ. ಸಂಸ್ಥೆಗಳು, ಮಠಗಳು ಎಲ್ಲರೂ ಗೋವುಗಳನ್ನು ಸಾಕಲು ಮುಂದೆ ಬರುತ್ತಿದ್ದಾರೆ. ನಾವು ಎಲ್ಲರನ್ನೂ ಮಾಡಿ ಮಾಡುತ್ತಿದ್ದೇವೆ. ಜಿಲ್ಲಾಪಂಚಾಯತ್‌ನಿಂದಲೂ ಈ ಒಂದು ಕೆಲಸವನ್ನು ಕೈಗೊಳ್ಳುತ್ತೇವೆ. ಉತ್ತರ ಪ್ರದೇಶಕ್ಕೆ ಹೋದಾಗ ನಾವು ಗಮನಿಸಿದ್ದೇವೆ. ಅಲ್ಲಿ ಒಂದು ಸಾವಿರ ಗೋಶಾಲೆಗಳಿವೆ. ಅಲ್ಲಿ ಸರ್ಕಾರವಷ್ಟೇ ನಿರ್ವಹಿಸುತ್ತಿಲ್ಲ. ಎಲ್ಲಾ ಸಂಘ–ಸಂಸ್ಥೆಗಳು ಈ ಒಂದು ಕೆಲಸದಲ್ಲಿ ನಿರತರಾಗಿದ್ದಾರೆ. ನಮ್ಮಲ್ಲಿ ಮಂದಿರ, ಮಠಮಾನ್ಯಗಳಿಂದಲೂ ಈ ಕೆಲಸವನ್ನು ಬಹಳ ಒಳ್ಳೆಯ ರೀತಿಯಲ್ಲಿ ಮಾಡುತ್ತಿದ್ದಾರೆ. ನಮಗೆ ಜನರಿಂದ, ಸಂಸ್ಥೆ, ಮಠಮಾನ್ಯಗಳಿಂದ ಪತ್ರಗಳೂ ಸಹ ಬರುತ್ತಿವೆ. ಗೋರಕ್ಷಣೆಯ ಕೆಲಸವನ್ನು ನಾವು ಮಾಡುತ್ತೇವೆ. ಸರ್ಕಾರವು ಪ್ರಯತ್ನ ಮಾಡುತ್ತಿದೆ. ಅವುಗಳನ್ನು ಸಾಕಲು ನಮಗೆ ಅವಕಾಶ ಕೊಡಿ ಎಂದು ಪತ್ರ ಬರೆದು ನಾವು ನಿಮ್ಮ ಜೊತೆ ಇದ್ದೇವೆಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹೇಳುತ್ತಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಯಾರು ಚಿಂತಿಸುವ ಅಗತ್ಯವಿಲ್ಲ. ಬಹಳ ಚೆನ್ನಾಗಿ ನಡೆಯುತ್ತಿದೆ. ವಿಧೇಯಕ ಪಾಸ್ ಆದನಂತರ ನಾವು ತಮ್ಮೆಲ್ಲರನ್ನೂ ಕರೆದು, ರೈತರನ್ನೂ ಕರೆದು ತಮ್ಮೆಲ್ಲರ ಸಲಹೆ ಸೂಚನೆಗಳನ್ನು ತೆಗೆದುಕೊಂಡು ಮುಂದಿನ ಕೆಲಸವನ್ನು ಮಾಡುತ್ತೇವೆ.

**ಶ್ರೀ ಸಿ.ಎಂ.ಇಬ್ರಾಹಿಂ:-** ಈ ಬಿಲ್ ತರುವ ಮುಂಚೆ ಈ ಕೆಲಸ ಮಾಡಬೇಕಿತ್ತು. ನೀವು ಬಿಲ್ ತಂದಾದಮೇಲೆ ಸಂತೆಗಳಲ್ಲಿ ಹೊಡೆದಾಟ ಎದ್ದು, ರೈತರು ಇವತ್ತು ದನಗಳನ್ನು ಹಿಡಿದುಕೊಂಡು ಹೊರಗಡೆ ತಿರುಗಾಡುತ್ತಿದ್ದಾರೆ. ದನಗಳನ್ನು ಖರೀದಿ ಮಾಡುವವರಿಲ್ಲ. ರೈತರು ದೊಡ್ಡ conference ಮಾಡಿದ್ದಾರೆ. ಸಾಬರ ಬಗ್ಗೆ ಚಿಂತೆ ಬಿಟ್ಟುಬಿಡಿ. ಎಮ್ಮೆನೋ ಅಥವಾ ಕೋಣವನ್ನೋ ಇಟ್ಟಿದ್ದರೆ ಅದು ಬೇರೆ ಪ್ರಶ್ನೆ. We are not worried about that. ಇದಕ್ಕಾಗಿ ನೀವು ಬಜೆಟ್‌ನಲ್ಲಿ ಎಷ್ಟು ಹಣ ಇಡುತ್ತೀರಿ. ಹಣದ ಲಭ್ಯತೆ ಇದೆಯೇ? ಪ್ರತಿ ವರ್ಷ ಎಷ್ಟು ಗೋವುಗಳು, ದನ, ಎಮ್ಮೆಗಳು ನಿರುಪಯುಕ್ತವಾಗುತ್ತಿವೆ. ಅದರ ಅಂಕಿ- ಅಂಶ ಇದೆಯಾ ನಿಮ್ಮಲ್ಲಿ. ಅದರ ಲೆಕ್ಕವನ್ನು ಸಂಗ್ರಹಿಸಿದ್ದೀರಾ? ಅದನ್ನು ಸಂಗ್ರಹಿಸುವ ಮೊದಲು ಈ ವಿಧೇಯಕವನ್ನು abeyance ನಲ್ಲಿ ಇಡಿ. ಮೊದಲು ಚರ್ಚೆ ಆಗಲಿ. ನಂತರ ಜಾರಿಗೆ ತರುವುದನ್ನು ಮಾಡಿ. ಯುದ್ಧಕಾಲದಲ್ಲಿ ಸಿದ್ದತೆ ಎನ್ನುವ ರೀತಿ ಮಾಡುತ್ತಿದ್ದಾರೆ. ಸ್ವಲ್ಪ ಸಭಾನಾಯಕರು ಸಚಿವರಿಗೆ ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಜನತಾದಳ ಪಕ್ಷದ ಮಾನ್ಯ ಸದಸ್ಯರಾದ ಸಿ.ಎಂ. ಇಬ್ರಾಹಿಂರವರು ಸಾರ್ವಜನಿಕ ಜೀವನದ ಮತ್ತು ರಾಜಕಾರಣದ ಅನುಭವದ ಆಧಾರದ ಮೇಲೆ ಬಹಳ ಅದ್ಭುತವಾದ ಪ್ರಶ್ನೆಗಳನ್ನು ಕೇಳಿದ್ದಾರೆ ಮತ್ತು ವಿಚಾರಗಳನ್ನು ವರ್ಣನೆ ಮಾಡಿದ್ದಾರೆ. ಅವರು ಹೇಳಿರುವ ಎಲ್ಲಾ ಅಂಶಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಈ ಗೋಶಾಲೆ ನಿರ್ಮಾಣ ಮಾಡುವುದು ಸೇರಿದಂತೆ ರೈತರ ಸಮಸ್ಯೆಗಳನ್ನೂ ಗಮನದಲ್ಲಿಟ್ಟುಕೊಂಡು, ಮುಂದಿನ ಆಯವ್ಯಯದಲ್ಲಿ ಅದಕ್ಕೆ ಹಣವನ್ನು ಅಳವಡಿಕೊಳ್ಳುವ ಬಗ್ಗೆ ಯೋಚನೆಯನ್ನು ಮಾಡುತ್ತೇವೆ. ಏನಿವತ್ತು ಗೋವುಗಳು ಬೀಡಾಡಿಯಾಗುತ್ತಿವೆ ಮತ್ತು ರೈತರಿಂದ ಖರೀದಿಸುವವರಿಲ್ಲವೆನ್ನುವ ಬಗ್ಗೆ ಏನು ಹೇಳಿದ್ದಾರೆ ಮತ್ತು ರೈತರ ಸಮಸ್ಯೆಗಳನ್ನು ಸಹ ಗಮನದಲ್ಲಿಟ್ಟುಕೊಂಡು ಮುಂದಿನ ಆಯವ್ಯಯದಲ್ಲಿ ಇದಕ್ಕೆ ಹಣವನ್ನು ಅಳವಡಿಸಿಕೊಳ್ಳುವ ರೀತಿಯಲ್ಲಿ ಯೋಚನೆ ಮಾಡುತ್ತೇವೆ. ತಮ್ಮೆಲ್ಲರಲ್ಲಿ ನಮ್ಮ ವಿನಂತಿಯೇನೆಂದರೆ ಈಗಾಗಲೇ ಕೆಳಮನೆಯಲ್ಲಿ ವಿಧೇಯಕ ಪಾಸ್ ಆಗಿದೆ ಮತ್ತು ಇಂದು ಈ ಸದನದ ಮುಂದೆ ಬರುತ್ತಿದೆ. ಆದ್ದರಿಂದ ತಾವುಗಳು ಸಹ ಪಾಸ್ ಮಾಡಿಕೊಡಬೇಕು. ಈ ಬಗ್ಗೆ ಇರುವ ತಮ್ಮೆಲ್ಲರ ಸಮಸ್ಯೆ ಮತ್ತು ಗೊಂದಲಗಳನ್ನು ಪರಿಹರಿಸುತ್ತೇವೆಂದು ವಿನಂತಿ ಮಾಡುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಸಿ.ಎಂ.ಇಬ್ರಾಹಿಂ:–** ನಾವು ಈ ಬಗ್ಗೆ ಈಗಾಗಲೇ ಒಂದು Select Committee ಯನ್ನು ರಚನೆ ಮಾಡಿ ಎಂದು ಹೇಳಿದ್ದೇವೆ. 1964ರ ವಿಧೇಯಕ ಇದೆ. ಈ ವಿಧೇಯಕದ ಬಗ್ಗೆ ಆ ಸಮಿತಿಯಲ್ಲಿ ನಾವೆಲ್ಲ ಸವಿಸ್ತಾರವಾಗಿ ಚರ್ಚೆ ಮಾಡೋಣ. ಒಂದು ತೀರ್ಮಾನಕ್ಕೆ ಬರೋಣ.

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಈಗಾಗಲೇ ಅವರು ಕೇಳಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಟ್ಟಿದ್ದೇವೆ. ಅವರ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆಯೂ ಹೇಳಿದ್ದೇವೆ. ಅವರ ಸಮಸ್ಯೆಗಳೆಲ್ಲಾ ಪರಿಹಾರವಾಗುತ್ತವೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು):–** ಮಾನ್ಯ ಇಬ್ರಾಹಿಂರವರೆ, ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಇಂದು ಯಾವ ವಿಧೇಯಕವನ್ನೂ ತೆಗೆದುಕೊಳ್ಳಬಾರದೆಂದು ಈಗಾಗಲೇ ತೀರ್ಮಾನವಾಗಿದೆ. ನೀವು ಹಾಜರಾಗಿದ್ದೀರಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೆ, ಯಾವ ವಿಧೇಯಕವನ್ನೂ ಇಂದು ತೆಗೆದುಕೊಳ್ಳಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 562**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:**-ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಸುಧೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಇತ್ತೀಚೆಗೆ ಡೀಸೆಲ್ ವಾಹನದ ಚಾಲನಾ ವೆಚ್ಚ ಹೆಚ್ಚಾಗಿ ಇಂತಹ ವಾಹನಗಳಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದ್ದು, ಇವೆರಡನ್ನೂ ನಿಯಂತ್ರಣಕ್ಕೆ ತರಲು ಸರ್ಕಾರ ಬದಲಿ ವ್ಯವಸ್ಥೆ ಕುರಿತು ನಾನು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಉತ್ತರವಾಗಿ ಪರಿಸರ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ Karnataka Electric Vehicle & Energy Storage Policy, 2017 ನ್ನು ಜಾರಿಗೆ ತರಲಾಗಿದೆ ಎನ್ನುವ ವಿಚಾರವನ್ನು ಸಹ ಹೇಳಲಾಗಿದೆ. ಅದರಲ್ಲಿ ಬ್ಯಾಟರಿ ಚಾಲಿತ ವಿದ್ಯುತ್ ಬಸ್ಸುಗಳನ್ನು ಖರೀದಿ ಮಾಡುವ ವಿಚಾರವನ್ನು ಹೇಳಿದೆ. ಈ ಒಂದು ಸರ್ಕಾರದ ನಿರ್ಣಯವನ್ನು ಸ್ವಾಗತಿಸುತ್ತಾ, ದೇಶದಲ್ಲಿ ಪರಿಸರ ಮಾಲಿನ್ಯವನ್ನು ಡೀಸೆಲ್ ವಾಹನಗಳಿಗೆ ಪರ್ಯಾಯವಾಗಿ ವಿದ್ಯುತ್ ಚಾಲಿತ ಬಸ್ಸುಗಳನ್ನು ತರುವುದು ಇವತ್ತು ಅನಿವಾರ್ಯವಾಗಿದ್ದು, ಪಾಶ್ಚಿಮಾತ್ಯ ದೇಶಗಳಲ್ಲಿ ವಿಶೇಷವಾಗಿ ಚೀನಾ ಮತ್ತು ಇತರ ದೇಶಗಳಲ್ಲಿ ಈ ರೀತಿಯ ವಿದ್ಯುತ್ ಚಾಲಿತ ಬಸ್ಸುಗಳನ್ನು ತರಲಾಗಿದೆ. ಈ ವಿಚಾರವಾಗಿ ಕೇಳಿರುವಂತಹ ಪ್ರಶ್ನೆಗೆ ಸುದೀರ್ಘವಾದಂತಹ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಹೀಗಾಗಿ ಈ ವ್ಯವಸ್ಥೆಯನ್ನು ಯಾವ ಒಂದು ಕಾಲಮಿತಿಯಲ್ಲಿ ಜಾರಿಗೆ ತರುತ್ತೀರಿ ಎನ್ನುವುದನ್ನು ತಿಳಿಸಬೇಕೆನ್ನುವ ಮನವಿಯನ್ನು ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ಮಾಡಲಿಕ್ಕೆ ಬಯಸುತ್ತೇನೆ.

ಇದರ ಬಗ್ಗೆ ಮುಂದುವರಿದು ಮಾತನಾಡುತ್ತಾ, ವಿದ್ಯುತ್ ಚಾಲಿತ ಬಸ್ಸುಗಳಿಗೆ ಬಸ್ಸಿನ ಪ್ರತಿ ಯೂನಿಟ್‌ಗೆ ಬೆಲೆ ಎಷ್ಟು? ಅಂದರೆ, ಡೀಸಲ್ ಬಸ್ಸುಗಳಿಗೆ ಆಗತಕ್ಕಂತಹ ವೆಚ್ಚಕ್ಕೂ ಮತ್ತು ಈ ವಿದ್ಯುತ್ ಚಾಲಿತ ಬಸ್ಸುಗಳಿಗೂ ಆಗುವಂತಹ ಯೂನಿಟ್ ವೆಚ್ಚ comparison ಅನ್ನು ಸರ್ಕಾರ ಇವತ್ತು ಮಾಡಿದೆಯೇ? ಇದರಲ್ಲಿ ಏನು ಸೇವಿಂಗ್ಸ್ ಮಾಡಲಿಕ್ಕೆ ಅವಕಾಶ ಇದೆ ಮತ್ತು ಪರಿಸರ ಮಾಲಿನ್ಯವನ್ನು ಯಾವ ರೀತಿ ತಡೆಗಟ್ಟುತ್ತೀರಿ ಎನ್ನುವ ವಿಚಾರವನ್ನು ಕೇಳಲಿಕ್ಕೆ ಬಯಸುತ್ತೇನೆ. ಮತ್ತೆ, ಪ್ರತಿ ಕಿ.ಮೀಟರ್‌ಗೆ ಆಗುವಂತಹ ನಿರ್ವಹಣ ವೆಚ್ಚ ಎಷ್ಟು? ಇನ್ನು ವಿದ್ಯುತ್ ಚಾಲಿತ ಬಸ್ಸುಗಳನ್ನು ತಾವು ಜಾರಿಗೆ ತಂದಿದ್ದಲ್ಲಿ ಖಾಸಗಿಯವರಿಗೆ ಈ ರೀತಿಯ ವಿದ್ಯುತ್ ಚಾಲಿತ ಬಸ್ಸುಗಳನ್ನು ಸಂಚರಿಸಲು ಅವಕಾಶ ಕೊಡಲಿಕ್ಕೆ ಸರ್ಕಾರ ಸಿದ್ಧವಿದೆಯೇ? ಮತ್ತು ಆ ಬಸ್ಸುಗಳಿಗೆ ಸಬ್ಸಿಡಿಯನ್ನು ಕೊಡತಕ್ಕಂತಹ ವಿಚಾರ ಸರ್ಕಾರದ ಮುಂದೆ ಇದೆಯೇ? ಮತ್ತೆ ಬಸ್ಸುಗಳಿಗೆ ಚಾರ್ಜಿಂಗ್ ಸ್ಟೇಷನ್ಸ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನ್ನು ಏನಾದರೂ ಸ್ಥಾಪನೆ ಮಾಡುವ ಉದ್ದೇಶ ಇದೆಯೇ? ಏಕೆಂದರೆ, ಈಗ ಪೆಟ್ರೋಲ್ ಮತ್ತು ಡೀಸೆಲ್ ಪಂಪ್ಸ್‌ಗಳಿವೆ. ಸರ್ಕಾರ ವಿದ್ಯುತ್ ಚಾಲಿತ ಬಸ್ಸುಗಳ ಸಂಚಾರವನ್ನು ಜಾರಿಗೆ ತಂದರೆ ಖಾಸಗಿ ಮತ್ತು ಸರ್ಕಾರಿ ಬಸ್ಸುಗಳಿಗೂ ಸಹಿತ ಚಾರ್ಜಿಂಗ್ ಸ್ಟೇಷನ್‌ಗಳನ್ನು ಆರಂಭಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೆ, ಗೌರವಾನ್ವಿತ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನರವರು ಪರಿಸರ ಮಾಲಿನ್ಯದ ಬಗ್ಗೆ ಅವಲೋಕನ ಆಗಬೇಕು, ಅದರ ಜೊತೆಗೆ ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಸಿ. ಬಸ್ಸುಗಳ ಮೇಲೆ ಆಗತಕ್ಕಂತಹ ವೆಚ್ಚದ ಬಗ್ಗೆಯೂ ಕೂಡ ಪರಾಮರ್ಶೆಯಾಗಬೇಕು ಮತ್ತು ಯಾವತ್ತಿನಿಂದ ಪ್ರಾರಂಭಿಸಲಾಗುತ್ತದೆ ಎನ್ನುವ ಬಗ್ಗೆ ಕೆಲವೊಂದು ಉಪ ಪ್ರಶ್ನೆಗಳನ್ನು ಕೇಳಲಾಗಿದೆ. ನಾವು ಮೊದಲನೆಯದಾಗಿ, ಸರ್ಕಾರ ಈ ಬಸ್ಸುಗಳನ್ನು ಈಗ ಖರೀದಿ ಮಾಡುವ ಪ್ರಸ್ತಾವನೆ ನಮ್ಮ ಮುಂದೆ ಇಲ್ಲ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕೆನ್ನುವ ಸಂದರ್ಭದಲ್ಲಿ ನಾವು ಇದ್ದೇವೆ. ಕೇಂದ್ರ ಸರ್ಕಾರ ದೇಶದಲ್ಲಿ ಈ ಮಾಲಿನ್ಯ ವಿಪರೀತವಾಗಿರುವಂತಹ ಅನೇಕ ನಗರಗಳನ್ನು ಗುರುತಿಸಿದೆ. ಅವುಗಳೆಂದರೆ, ಮುಂಬೈ, ಕಲ್ಕತ್ತಾ, ಬೆಂಗಳೂರು, ಚೆನ್ನೈ ಇರಬಹುದು, ಇಲ್ಲಿ ಬೆಂಗಳೂರಿನಲ್ಲಿ ಮಾಲಿನ್ಯ ನಿಯಂತ್ರಣ ಅಗಬೇಕೆನ್ನುವ ವಿಚಾರವನ್ನಿಟ್ಟುಕೊಂಡು ಕೇಂದ್ರ ಸರ್ಕಾರ ಒಂದು ಬಸ್ಸಿಗೆ ಸುಮಾರು 55 ಲಕ್ಷ ರೂಪಾಯಿಗಳ ಸಬ್ಸಿಡಿಯನ್ನು ನೀಡುತ್ತಿದೆ. ಕೇಂದ್ರ ಸರ್ಕಾರ ಏನು ಘೋಷಣೆ ಮಾಡಿದೆ ಎಂದರೆ ಯಾವ ಖಾಸಗಿಯವರು ಬಸ್ಸುಗಳನ್ನು ಖರೀದಿ ಮಾಡುತ್ತಾರೆ ಅಥವಾ ಕಂಪನಿಯವರು ಪ್ರಾಯೋಗಿಕವಾಗಿ ಬೆಂಗಳೂರು ನಗರಕ್ಕೆ 300 ಬಸ್ಸುಗಳನ್ನು ನಮಗೆ ಕೊಟ್ಟಿದ್ದಾರೆ.

**ಮುಂದು ..**

**(184) 05.02.2021 11.30 ಎಸ್‌ವಿ-ಆರ್‌ಎನ್**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಮುಂದು):-**

ಅದು ಟಾಟಾ ಕಂಪನಿ ಇರಬಹುದು, Ashok Leyland Company ಇರಬಹುದು ಅಥವಾ ಇನ್ನಿತರ ಯಾವುದೇ ಕಂಪನಿಗಳು ವಾಹನಗಳನ್ನು outsource ಮೇಲೆ ಓಡಿಸಲಿಕ್ಕೆ ನಮಗೆ ಕೊಡಬೇಕಾಗುತ್ತದೆ. ಕಿಲೋಮೀಟರ್ ನಿಗದಿ ಪಡಿಸುವುದಕ್ಕಾಗಿ ಈಗಾಗಲೇ ನಾವು ಟೆಂಡರ್ ಅನ್ನು ಕರೆದಿದ್ದೇವೆ. ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿದ್ದು, ಸುಮಾರು ಐದು ಬಾರಿ ಟೆಂಡರ್ ಅನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರೆಯಲಾಗಿದೆ. ಈಗ ಐದನೆಯ ಬಾರಿಗೆ ನಾವು ಟೆಂಡರ್ ಅನ್ನು ಕರೆದಿದ್ದೇವೆ. ನಾಲ್ಕು ಬಾರಿ ಟೆಂಡರ್ ಅನ್ನು ಕರೆದಿದ್ದಾಗಲೂ ಅವರಿಗೆ ಕಿಲೋಮೀಟರ್ ಅನ್ವಯ ಅವರಿಗೆ ಕೊಡಲಾಗುವುದು. ಸಾರ್ವಜನಿಕರಿಂದ ಬರುವ ಹಣ ಸರ್ಕಾರಕ್ಕೆ ಸೇರುತ್ತದೆ. ಕಿಲೋಮೀಟರ್ ಲೆಕ್ಕದಲ್ಲಿ ನಾವು 300 ಬಸ್‌ಗಳನ್ನು ತೆಗೆದುಕೊಳ್ಳುತ್ತೇವೆ. 300 ಬಸ್‌ಗಳನ್ನು ತೆಗೆದುಕೊಂಡ ಮೇಲೆ ಕಿಲೋಮೀಟರ್ ಕೊಡುವುದಕ್ಕಾಗಿ ಟೆಂಡರ್ ಕರೆದಿದ್ದು, ಟೆಂಡರ್‌ನಲ್ಲಿ ಬಹಳಷ್ಟು ಹೆಚ್ಚಿಗೆ ಹಾಕಿರುವುದರಿಂದ ನಾಲ್ಕು ಬಾರಿ ತಿರಸ್ಕರಿಸಿದ್ದೇವೆ. ಈಗ ಐದನೆಯ ಬಾರಿ ಪುನಃ ಟೆಂಡರ್ ಅನ್ನು ಕರೆದಿದ್ದೇವೆ. ಮೊದಲು ಕಿಲೋಮೀಟರ್‌ಗೆ ರೂ.90, ಎರಡನೆಯ ಬಾರಿ ರೂ.75, ಮೂರನೆಯ ಬಾರಿ ರೂ.68, ನಾಲ್ಕನೆಯ ಬಾರಿ ರೂ.62 ಈ ರೀತಿ ಕೇಳಿರುತ್ತಾರೆ. ಈಗಲೂ ಕೂಡ ಪುನಃ ನಾವು ತಿರಸ್ಕರಿಸಿದ್ದೇವೆ. ಮೊದಲು ಒಂದೇ ಕಂಪನಿಯವರು ಅರ್ಜಿ ಹಾಕಿದ್ದರು. ಎರಡನೆಯ ಬಾರಿಗೆ ಟೆಂಡರ್ ಅನ್ನು ಕರೆದಾಗ ಎರಡು ಕಂಪನಿಗಳು ಮುಂದೆ ಬಂದವು. ಈಗ ಸುಮಾರು ನಾಲ್ಕೈದು ಕಂಪನಿಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿವೆ. ದರ ಕಡಿಮೆಯಾಗಿ ಬರಬೇಕು ಎನ್ನುವಂತಹ ಆಲೋಚನೆಯನ್ನು ನಾವು ಮಾಡುತ್ತಿದ್ದೇವೆ. ರೂ.48-50 ಗಳಿಗೆ ಬಂದರೆ ನಮಗೆ ಹಾನಿಯಾಗುವುದಿಲ್ಲ. ಏಕೆಂದರೆ ಪ್ರಯಾಣಿಕರಿಂದ ನಾವು ಹಣವನ್ನು ಸಂಗ್ರಹ ಮಾಡಿ, ಅವರಿಗೆ ಕಿಲೋಮೀಟರ್ ಅನುಸಾರ ನೀಡಬೇಕಾದಾಗ ನಮಗೆ ಲಾಭವೂ ಇಲ್ಲ, ಹಾನಿಯೂ ಇಲ್ಲ ಎನ್ನುವಂತೆ ಇರುತ್ತದೆ. ಈ ತಿಂಗಳ ಅಂತ್ಯದಲ್ಲಿ ಅಥವಾ ಮುಂದಿನ ತಿಂಗಳ ಮಧ್ಯಭಾಗದೊಳಗೆ ಟೆಂಡರ್ ಪ್ರಕ್ರಿಯೆಯನ್ನು ಮುಕ್ತಾಯ ಮಾಡುತ್ತೇವೆ. 300 ಬಸ್‌ಗಳನ್ನು ತೆಗೆದುಕೊಳ್ಳಲಿದ್ದು, ಅನೇಕ ಕಂಪನಿಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಮುಂದೆ ಬಂದಿವೆ. ಅದರಲ್ಲಿ Jai Bharath Motors ಇರಬಹುದು, Putan ಇರಬಹುದು, ಟಾಟಾ ಇರಬಹುದು, Ashok Leyland ಇರಬಹುದು ಅಥವಾ Volvo truck ಕಂಪನಿಗಳು ಕೂಡ ಮುಂದೆ ಬಂದಿವೆ. ನಾವು 'Make in India' ಎನ್ನುವ ಪರಿಕಲ್ಪನೆಗೆ ಆದ್ಯತೆಯನ್ನು ನೀಡುತ್ತಿದ್ದು, ನಮ್ಮ ದೇಶದಲ್ಲಿಯೇ ಉತ್ಪಾದನೆಯಾಗಿರುವುದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕೆಂದು ಇದ್ದೇವೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವಾಗ ಅವರು ಕಡಿಮೆ ದರದಲ್ಲಿಯೂ ಬರಬೇಕಾಗುತ್ತದೆ. ಎಲ್-1 ಬಂದರೆ ಮಾತ್ರ ಅವರಿಗೆ ಕೊಡಲಿಕ್ಕಾಗುತ್ತದೆ. ಎಲ್-1 ಬರಲಿಲ್ಲ ಎಂದರೆ ಅವರಿಗೆ ಕೊಡುವುದಕ್ಕೂ ಆಗುವುದಿಲ್ಲ.

ಇದರ ಜೊತೆಯಲ್ಲಿ ಪರಿಸರ ಮಾಲಿನ್ಯ ನಿಯಂತ್ರಣದ ಬಗ್ಗೆ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಕೇಳಿದ್ದಾರೆ. ಸಾರಿಗೆ ಇಲಾಖೆ ಈಗಾಗಲೇ ಘೋಷಣೆ ಮಾಡಿದಂತೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಖಾಸಗಿಯವರು ಯಾರೇ ಕಾರ್ ಅಥವಾ ಬಸ್ ಅನ್ನು ಖರೀದಿ ಮಾಡಿದ್ದರೂ ಸಹಿತ ಅಂತಹವರಿಗೆ road tax ಅನ್ನು ಸಂಪೂರ್ಣವಾಗಿ ಮನ್ನಾ ಮಾಡಿದ್ದೇವೆ. Charging point ಗಳನ್ನು ಅಳವಡಿಸಲಿಕ್ಕೆ ಯಾರು ಮುಂದೆ ಬರುತ್ತಾರೆಯೋ ಅವರಿಗೆ ಸರ್ಕಾರದಿಂದ ಗರಿಷ್ಠ ರೂ.10 ಲಕ್ಷಗಳ ಅನುದಾನವನ್ನು ಕೊಡಬೇಕೆನ್ನುವ ಯೋಜನೆಯನ್ನು ಘೋಷಿಸಿದ್ದೇವೆ. ಅದು ಖಾಸಗಿಯವರಿಗಾಗಲೀ ಅಥವಾ ಇನ್ಯಾರಿಗಾದರೂ ಅದರಿಂದ ಉಪಯೋಗವಾಗಲಿ ಎನ್ನುವ ಸದುದ್ದೇಶದಿಂದ ನಾವು ಆಹ್ವಾನಿಸಿದ್ದೇವೆ. ಅದಕ್ಕೆ ಸಾರ್ವಜನಿಕರಿಂದಲೂ ಕೂಡ ಒಳ್ಳೆಯ ಪ್ರತಿಕ್ರಿಯೆ ಬರುತ್ತಿದೆ. ಪೆಟ್ರೋಲ್ ಬಂಕ್‌ಗಳಾಗಲೀ ಅಥವಾ ಇತರ ಸಂಸ್ಥೆಗಳವರಾಗಲೀ ಸ್ಥಳಾವಕಾಶವಿದ್ದರೆ ಅವರು ಕೂಡ Charging point ಅನ್ನು ಹಾಕಿಕೊಳ್ಳಬಹುದು. ರೂ.10 ಲಕ್ಷಗಳ ಸಬ್ಸಿಡಿಯನ್ನು ಅವರಿಗೆ ನೀಡಲಾಗುವುದು.

ಒಟ್ಟಾರೆ, ಬೆಂಗಳೂರು ನಗರ ಮಾಲಿನ್ಯ ಮುಕ್ತವಾಗಬೇಕು ಎನ್ನುವುದು ಸರ್ಕಾರದ ಉದ್ದೇಶ. ಪ್ರಾಯೋಗಿಕವಾಗಿ ಇದರಲ್ಲಿ ನಾವು ಯಶಸ್ವಿಯಾದರೆ ಮುಂದಿನ ದಿನಮಾನದಲ್ಲಿ ನಾಲ್ಕೂ ಸಾರಿಗೆ ನಿಗಮಗಳಲ್ಲಿ ಅಂತರಪಟ್ಟಣ ಸಂಚಾರ ತರುವುದಕ್ಕೆ ಆಲೋಚನೆಯನ್ನು ಮಾಡಿದ್ದೇವೆ. ಜೊತೆಯಲ್ಲಿ ಖಾಸಗಿ ಕಂಪನಿಯವರನ್ನು ಆಹ್ವಾನಿಸಿದ್ದೇವೆ. ಬೇರೆ ಯಾರಾದರೂ ಸಬ್ಸಿಡಿರಹಿತವಾದ ಬಸ್‌ಗಳನ್ನು ಕೊಡುವುದಕ್ಕೆ ಮುಂದೆ ಬಂದರೆ ಅಂತಹ ಬಸ್‌ಗಳನ್ನು ನಾವು ತೆಗೆದುಕೊಂಡು ಸಂಚಾರಕ್ಕೆ ಅನುವು ಮಾಡಿಕೊಡುತ್ತೇವೆಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ನಾನು ಹೇಳಬಯಸುವುದೇನೆಂದರೆ; 'The country spent an estimated ₹8.81 lakh crore (120 billion) to import 228.6 million tonnes of crude oil in 2018–19'. ವಿದೇಶದಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಂಡು ಪರಿಸರ ಮಾಲಿನ್ಯದೊಂದಿಗೆ ನಾವು ಸಾರಿಗೆ ವ್ಯವಸ್ಥೆಯನ್ನು ನಡೆಸುತ್ತಿದ್ದೇವೆ. ಇದನ್ನು ತಡೆಗಟ್ಟಲು ವಿದ್ಯುತ್ ಚಾಲಿತ ಸಾರಿಗೆ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ಮಾಡಬೇಕು. ಅದರಿಂದ ನಾವು ವಿದೇಶಿ ವಿನಿಮಯವನ್ನು ಉಳಿಸಿಕೊಂಡಂತಾಗುತ್ತದೆ. ಪರಿಸರ ಮಾಲಿನ್ಯವನ್ನು ಸಹಿತ ತಡೆಯಬಹುದು. ಇದಕ್ಕೆ ಸರ್ಕಾರ ಮುಂದಾಗಬೇಕು.

**ಹಂಗಾಮಿ ಸಭಾಪತಿಯವರು:–** ಎಲ್ಲಾ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಪ್ರಶ್ನೋತ್ತರ ವೇಳೆಯಲ್ಲಿ ಮಾನ್ಯ ಸದಸ್ಯರು 5 ರಿಂದ 6 ನಿಮಿಷಗಳೊಳಗೆ ತಮ್ಮ ಪ್ರಶ್ನೆಯನ್ನು ಕೇಳಬೇಕು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಯಮಾಡಿ ಮಾನ್ಯ ಸಚಿವರು 5 ರಿಂದ 6 ನಿಮಿಷಗಳೊಳಗೆ ತಮ್ಮ ಉತ್ತರವನ್ನು ಮುಗಿಸಬೇಕು. ನಿಯಮಾನುಸಾರ ಪ್ರಶ್ನೋತ್ತರ ವೇಳೆಗೆ ಒಂದು ಗಂಟೆ ಅವಧಿಯು ಇರುವುದರಿಂದ ಹಾಗೂ ಇನ್ನೂ ಹಲವಾರು ವಿಷಯಗಳು ಪ್ರಸ್ತಾಪವಾಗಬೇಕಾಗಿರುವುದರಿಂದ ದಯವಿಟ್ಟು ಎಲ್ಲರೂ ಸಹಕಾರ ನೀಡಬೇಕು. ಪ್ರಶ್ನೆ ಕೇಳಿದವರಿಗೆ ಮಾತ್ರ ಮತ್ತೊಮ್ಮೆ ಸಚಿವರೊಂದಿಗೆ ಮಾತನಾಡಲು ಅವಕಾಶವಿರುತ್ತದೆ. ಪ್ರಶ್ನೋತ್ತರ ಅವಧಿಯಲ್ಲಿ ಬೇರೆಯವರಿಗೆ ಆ ಅವಕಾಶಗಳು ಇರುವುದಿಲ್ಲ. ದಯವಿಟ್ಟು ಸಹಕರಿಸಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕವಟಗಿಮಠ ಅವರು ಕೇಳಿರುವ ಉಪಪ್ರಶ್ನೆಗೆ ನಮ್ಮ ರಾಜ್ಯದಲ್ಲಿ ಮಾಲಿನ್ಯ ನಿಯಂತ್ರಣ ಮಾಡುವುದಕ್ಕಾಗಿ ಹೆಚ್ಚು electrical ವಾಹನಗಳಿಗೆ ಹೆಚ್ಚು ಒತ್ತನ್ನು ಕೊಡಬೇಕಾಗಿದ್ದು, ಅದಕ್ಕೆ ಈಗಾಗಲೇ ಸರ್ಕಾರ ಯೋಜನೆಗಳನ್ನು ಘೋಷಣೆ ಮಾಡಿದೆ. ನಾವು import ಮಾಡಿಕೊಳ್ಳುತ್ತಿರುವ crude oil ಅನ್ನು ಕಡಿಮೆ ಮಾಡಬೇಕೆಂಬುದು ಸತ್ಯವಾದುದು. ಅದು ದೇಶಕ್ಕೂ ಒಳ್ಳೆಯದು ಹಾಗೂ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಅದು ಪೂರಕವಾದ ಕ್ರಮವಾಗಿದೆ. import ಮಾಡಿಕೊಳ್ಳುವುದನ್ನು ಕಡಿಮೆ ಮಾಡುವ ಸಲುವಾಗಿ ಅನೇಕ ಸಕ್ಕರೆ ಕಾರ್ಖಾನೆಗಳಲ್ಲಿ ethanol ಅನ್ನು ಉತ್ಪಾದಿಸಲು ಕೇಂದ್ರ ಸರ್ಕಾರ ಸಾಕಷ್ಟು ಯೋಜನೆಗಳನ್ನು ಘೋಷಿಸಿದೆ. Ethanol ಇಲ್ಲಿಯೇ ತಯಾರಾಗಬೇಕೆನ್ನುವ ಒಂದು ಭಾವನೆಯನ್ನು ಇಟ್ಟುಕೊಂಡು Ethanol Plant ಗಳನ್ನು ಹಾಕುವವರಿಗೆ ಕೇಂದ್ರ ಸರ್ಕಾರ ಶೇ.6 ಪ್ರತಿಶತ ಸಹಾಯಧನವನ್ನು ಐದು ವರ್ಷಗಳವರೆಗೆ ನೀಡುವ ಯೋಜನೆಯು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿರುವ ಅನೇಕ ಸಕ್ಕರೆ ಕಾರ್ಖಾನೆಗಳು ethanol ಅನ್ನು ಮಾಡಿಕೊಂಡು ಇಂಧನವನ್ನು ಆಮದು ಮಾಡಿಕೊಳ್ಳುವುದನ್ನು ಕಡಿಮೆ ಮಾಡಿಕೊಳ್ಳುವ ಕಾರ್ಯಕ್ರಮಗಳು ಪ್ರಾರಂಭವಾಗಿದೆ. ಇದರ ಜೊತೆಗೆ ನಾವು ಕೂಡ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. Tesla ಎನ್ನುವ ಕಾರ್ ಕಂಪನಿಯು ಕಳೆದ ಹತ್ತು ವರ್ಷಗಳಲ್ಲಿ ಅತ್ಯಂತ ಕೆಳಗಡೆ ಇದ್ದದ್ದು, ಪ್ರಸ್ತುತ ವಿದ್ಯುತ್ ಚಾಲಿತ ವಾಹನ ಉತ್ಪಾದನೆಯಲ್ಲಿ ಇಡೀ ವಿಶ್ವದಲ್ಲಿಯೇ ಪ್ರಥಮ ಸ್ಥಾನಕ್ಕೆ ಬಂದಿರುತ್ತದೆ. ಅವರು ಬೆಂಗಳೂರು ನಗರವನ್ನು ಆಯ್ಕೆ ಮಾಡಿಕೊಂಡು ಬ್ಯಾಟರಿಗಳನ್ನು ಇಲ್ಲಿಯೇ ಉತ್ಪಾದನೆ ಮಾಡುತ್ತೇವೆಂದು ಘೋಷಿಸಿದ್ದಾರೆ. ಇದರಿಂದಾಗಿ ಮುಂದಿನ ದಿನಮಾನಗಳಲ್ಲಿ ಕರ್ನಾಟಕಕ್ಕೆ ಬಹಳ ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 545**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಜಿಲ್ಲೆ ಮತ್ತು ತಾಲ್ಲೂಕು ವ್ಯಾಪ್ತಿಯಲ್ಲಿರುವ ಫಲಾನುಭವಿಗಳ ಆಯ್ಕೆಯ ಕುರಿತು ಪ್ರಶ್ನೆಯನ್ನು ಕೇಳಿದ್ದೆನು. ವೈಯಕ್ತಿಕ ಫಲಾನುಭವಿಗಳ ಆಯ್ಕೆಯನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 3-ಇ ರಂತೆ ಗ್ರಾಮ ಸಭೆಯಲ್ಲಿ ನಡೆಸಲಾಗುವುದು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಗ್ರಾಮಸಭೆಗಳಲ್ಲಿ ಫಲಾನುಭವಿಗಳ ಆಯ್ಕೆಯಾಗುತ್ತದೆ ಬೇರೆ. ವಿಧಾನ ಸಭೆ ಶಾಸಕರ ನೇತೃತ್ವದ ಅನೇಕ ಸಮಿತಿಗಳಿವೆ. ಬಹುಶಃ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅದು ಆಗುತ್ತದೆ ಎಂದು ನಾನು ಭಾವಿಸಿದ್ದೇನೆ. ಉದಾಹರಣೆಗೆ ಗಂಗಾ ಕಲ್ಯಾಣ ಇರಬಹುದು, ಪಶುಸಂಗೋಪನಾ ಇಲಾಖೆಯಲ್ಲಿದೆ, ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಇಲಾಖೆಯಲ್ಲಿದೆ, ಅಂಬೇಡ್ಕರ್ ನಿಗಮದಲ್ಲಿದೆ.. ಹೀಗೆ ಎಲ್ಲಾ ಇಲಾಖೆಗಳಲ್ಲಿಯೂ ಫಲಾನುಭವಿಗಳ ಆಯ್ಕೆ ಇದೆ. ಶಾಸಕರು ಅದಕ್ಕೆ ನೇತೃತ್ವವನ್ನು ವಹಿಸಿರುತ್ತಾರೆ. ವಿಧಾನ ಪರಿಷತ್ ಶಾಸಕರನ್ನು ಸಹ-ಅಧ್ಯಕ್ಷರನ್ನಾಗಿ ನೇಮಿಸುವುನ್ನೂ ಸಹ ನಾನು ನೋಡಿದ್ದೇನೆ. ಅಂತಹ ಫಲಾನುಭವಿಗಳ ಆಯ್ಕೆಯ ವಿಚಾರವನ್ನು ನಾನು ತಮ್ಮ ಗಮನಕ್ಕೆ ತಂದಿದ್ದು, ಉದ್ಭವಿಸುವುದಿಲ್ಲ ಎಂದು ಉತ್ತರವನ್ನು ನೀಡಿರುತ್ತಾರೆ. ಇದಕ್ಕೆ ನಾನು ಮಾನ್ಯ ಸಚಿವರಿಂದ ಸ್ಪಷ್ಟೀಕರಣವನ್ನು ಬಯಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಜಿಲ್ಲಾ ಮತ್ತು ತಾಲ್ಲೂಕು ವ್ಯಾಪ್ತಿಯಲ್ಲಿ ಯಾವುದೇ ಫಲಾನುಭವಿಗಳ ಆಯ್ಕೆ ಸಮಿತಿಯು ಇರುವುದಿಲ್ಲ, ಬೇರೆ ಬೇರೆ ಇಲಾಖೆಗಳಲ್ಲಿ ಸಮಿತಿಗಳಿದ್ದು, ಅವರು ಆಯ್ಕೆ ಮಾಡಿಕೊಳ್ಳುತ್ತಾರೆ. ನಾನು ಒಬ್ಬ ವಿಧಾನ ಸಭಾ ಸದಸ್ಯನಾಗಿರುವುದರಿಂದ ಪಶುಸಂಗೋಪನಾ ಇಲಾಖೆ, ಅಂಬೇಡ್ಕರ್ ಅಭಿವೃದ್ಧಿ ನಿಗಮ ಹೀಗೆ ಬೇರೆ ಬೇರೆ ಇಲಾಖೆಗಳಲ್ಲಿ ಸಮಿತಿಗಳಿರುವುದನ್ನು ತಿಳಿದಿದ್ದೇನೆ. ಆದರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಯಾವುದೇ ಸಮಿತಿಗಳಿಲ್ಲ. ವೈಯಕ್ತಿಕ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ ಗ್ರಾಮಸಭೆಗಳಲ್ಲಿ ಅವಕಾಶವಿದೆ. ಸಮಿತಿಗಳು ಎಲ್ಲಿಯೂ ಇಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 555**

**(ಉತ್ತರವನ್ನು ಲಗತ್ತಿಸಲಾಗಿದೆ)**

ಶ್ರೀ **ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಮೈಸೂರು ಹಾಗೂ ಚಾಮರಾಜನಗರ ಎರಡೂ ಜಿಲ್ಲೆಗಳಲ್ಲಿಯೂ ಸಾಕಷ್ಟು ಅನುದಾನಗಳು ಬಿಡುಗಡೆಯಾಗಬೇಕಾಗಿದೆ. ಸರ್ಕಾರ ಹಾಕಿಕೊಂಡಿರುವ ಕಾರ್ಯಸೂಚಿಯಲ್ಲಿ ಅರ್ಧಕ್ಕಿಂತ ಹೆಚ್ಚಿನ ಮೊತ್ತಗಳು ಬಾಕಿ ಇದೆ. ಅಲ್ಲಿ ಸ್ಥಳೀಯವಾಗಿ ಕೆಲಸ ಮಾಡಿರುವಂತಹ ಗುತ್ತಿಗೆದಾರರು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಹಣ ಬಿಡುಗಡೆಯಾಗುವುದಿಲ್ಲವೆಂದು ಮುಂಬರುವ ದಿನಗಳಲ್ಲಿ ಕೆಲಸ ಮಾಡುವುದಕ್ಕೆ ಮುಂದೆ ಬರುವುದಿಲ್ಲ. ಆ ಇಲಾಖೆಯಲ್ಲಿ ದುಡ್ಡು ಸಿಗುವುದಿಲ್ಲ, ಕಷ್ಟವಾಗುತ್ತದೆ ಎಂದು ಪರಿಗಣಿಸಿದರೆ ಭವಿಷ್ಯದ ದಿನಗಳಲ್ಲಿ ಗ್ರಾಮೀಣಾಭಿವೃದ್ಧಿಗೆ ಮಾರಕವಾಗುತ್ತದೆ. ಈ ಹಿನ್ನೆಲೆಯಲ್ಲಿ ಉಳಿಕೆ ಹಣವನ್ನು ದಯಮಾಡಿ ಬೇಗನೆ ಬಿಡುಗಡೆ ಮಾಡಬೇಕು.

**(...ಮುಂದು)**

**(185) 5–2–2021 11–40 ಕೆಜಿ:ಬಿಎನ್ಎಸ್**

**ಶ್ರೀ ಆರ್.ಧರ್ಮಸೇನ (ಮುಂದು.,):–**

ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. 2017ನೇ ಸಾಲಿನಲ್ಲಿ ರೂ.30 ಲಕ್ಷಗಳ ಒಂದು ವಿಶೇಷವಾದಂತಹ package ಇತ್ತು. ಆಗ ಡಾ||ಎನ್.ನಾಗಾಂಬಿಕಾದೇವಿಯವರು ಇದ್ದರು. ಅವರು ಆ ಸಂದರ್ಭದಲ್ಲಿ ರೂ.30 ಲಕ್ಷಗಳ ವಿಶೇಷ package ಅನ್ನು approval ಮಾಡಿಕೊಟ್ಟಿದ್ದರು. ಆದರೆ, ಅದು ಇದುವರೆವಿಗೂ ಕಾರ್ಯರೂಪಕ್ಕೆ ಬಂದಿಲ್ಲ. ಶ್ರೀ ಮಾದೇಶ್ವರನ ಬೆಟ್ಟಕ್ಕೆ ಹೋಗುವಂತಹ ದಾರಿಯಲ್ಲಿ ಡಾ||ರಾಜ್‌ಕುಮಾರ್‌ರವರ ಊರಾದ ಸಿಂಗನಲ್ಲೂರು ಎಂಬ ಗ್ರಾಮ ಸಿಗುತ್ತದೆ. ಶ್ರೀ ಮಾದೇಶ್ವರನ ಬೆಟ್ಟಕ್ಕೆ ಹೋಗುವಂತಹ ನಮ್ಮ ರಾಜ್ಯದ ಜನರು ಆ ಗ್ರಾಮದಲ್ಲಿ ತಂಗಿ ಮತ್ತೆ ಮುಂದಕ್ಕೆ ಹೋಗುವಂತಹ ಪ್ರತೀತಿ ಇದೆ. ಹಾಗಾಗಿ, ನಾನು ಸಹ ಮನವಿಯನ್ನು ಮಾಡಿದ್ದೆ. ಆ ಮನವಿಯ ಮೇರೆಗೆ 2017ನೇ ಸಾಲಿನಿಂದಲೂ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಇನ್ನೂ ಮಾಡಿಲ್ಲ. ಕಳೆದ ಎರಡು ವರ್ಷಗಳ ಹಿಂದೆ ನಾನು ಮಾನ್ಯ ಜಿಲ್ಲಾಧಿಕಾರಿಯವರ ಮುಂದೆ ಇದನ್ನು ಚರ್ಚೆ ಮಾಡಿ ಅವರ ಜೊತೆಗೆ ಒಂದು ಸಭೆಯನ್ನು ಸಹ ಮಾಡಿದ್ದೆ. ಆದರೆ, ಅದು ಇದುವರೆಗೂ ಆಗಿಲ್ಲ. ಆದ್ದರಿಂದ, ಮಾನ್ಯ ಸಚಿವರು ಈ ವಿಶೇಷ package

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣವನ್ನು ದಯಮಾಡಿ ಕೊಟ್ಟರೆ, ಸಾರ್ವಜನಿಕರಿಗೆ ಶ್ರೀ ಮಾದೇಶ್ವರನ ದೇವಸ್ಥಾನಕ್ಕೆ ಹೋಗುವಂತಹ ಭಕ್ತಾಧಿಗಳಿಗೆ ಸಹಾಯವಾಗುತ್ತದೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶ್ರೀ ಮಾದೇಶ್ವರನ ಬೆಟ್ಟದ ವಿಶೇಷ package ನ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ವಿಷಯವನ್ನು ಈಗ ನನ್ನ ಗಮನಕ್ಕೆ ತರುತ್ತಿದ್ದಾರೆ. ಈ ವಿಷಯ ನನ್ನ ಗಮನಕ್ಕೆ ಇದುವರೆವಿಗೂ ಬಂದಿರಲಿಲ್ಲ. ಇದನ್ನು ತಕ್ಷಣ ಮಾಡಿಸಿಕೊಡುತ್ತೇನೆ. ಮಾನ್ಯ ಸದಸ್ಯರಿಗೆ ಇದರಲ್ಲಿ ಯಾವುದೇ ಅನುಮಾನ ಬೇಡ. ನಾನು ಉಳಿದಂತಹ report ಗಳನ್ನು ನೋಡಿದ್ದೇನೆ. 2018 ರಿಂದ ಮಂಜೂರಾತಿ ಎಷ್ಟಾಗಿದೆ, ಎಷ್ಟು ಬಿಡುಗಡೆ ಆಗಿದೆ ಈ ಎರಡು ಜಿಲ್ಲೆಗಳ ವಿವರವನ್ನು ಕೊಟ್ಟಿದೆ. Major ಹಣವನ್ನು ಸಹ ಕೊಟ್ಟಿದೆ. ಈಗ ಕೊರೋನಾ ಸಮಸ್ಯೆ ಮತ್ತು ಬೇರೆ ಬೇರೆ ಸಮಸ್ಯೆಗಳು ಇರುವುದು ತಮಗೂ ಗೊತ್ತಿದೆ. ನಮ್ಮ ಇಲಾಖೆಯಲ್ಲಿ ಮಾತ್ರವಲ್ಲ. ಇಡೀ ನಮ್ಮ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿಯೂ ಬಾಕಿ ಇದೆ. ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ಅದನ್ನು ಆದಷ್ಟು ಬೇಗ ಹಂತ ಹಂತವಾಗಿ ಬಿಡುಗಡೆ ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ 495**
**(ಉತ್ತರ ಒದಗಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಈ ಇಲಾಖೆಯ ಬಗ್ಗೆ ಯಾವಾಗಲೂ ಒಂದು ಮಾತನ್ನು ಹೇಳುತ್ತಿರುತ್ತೇನೆ. ಮಾತು ಬಾರದ ನೋವು ನುಡಿಯದ ಮೂಕ ಪ್ರಾಣಿಗಳ ಜವಾಬ್ದಾರಿಯನ್ನು ಮಾನ್ಯ ಸಚಿವರು ಹೊತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಒಟ್ಟು 200 ಪಶುವೈದ್ಯಕೀಯ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡಗಳು ಇಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ನಾವು ಬೇರೆ ಇಲಾಖೆಗಳಿಗೆ ಕಟ್ಟಡಗಳಿಲ್ಲವೆಂದರೆ ಸಹಿಸಿಕೊಳ್ಳಬಹುದು. ಆದರೆ, ಪಶುವೈದ್ಯಕೀಯ ಆಸ್ಪತ್ರೆಗಳಿಗೆ ಕಟ್ಟಡಗಳಿಲ್ಲವೆಂದರೆ, justice ಕೊಡುವುದು ಕಷ್ಟವಾಗುತ್ತದೆ. ಮಾನ್ಯ ಸಚಿವರು 200 ಪಶುವೈದ್ಯಕೀಯ ಆಸ್ಪತ್ರೆಗಳಿಗೆ ಸ್ವಂತ ಕಟ್ಟಡಗಳನ್ನು ಯಾವಾಗ ಕಟ್ಟಿಕೊಡುತ್ತಾರೆ ಎನ್ನುವುದನ್ನು ಹೇಳಬೇಕು.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ಮಾನ್ಯ ಸಚಿವರು ಉತ್ತರದಲ್ಲಿ 3317 ಹುದ್ದೆಗಳು ಮಂಜೂರಾಗಿವೆಯೆಂದು ತಿಳಿಸಿದ್ದಾರೆ. ಈ ಮಾಹಿತಿಯ ಪ್ರಕಾರ, ಇನ್ನೂ 1240 ಹುದ್ದೆಗಳು ಮಂಜೂರಾಗಬೇಕಾಗಿದೆ. 4212 ಪಶುವೈದ್ಯಕೀಯ ಆಸ್ಪತ್ರೆಗಳನ್ನು ಮಾಡಿದ್ದಾರೆ. ಈಗ ಹಾಲಿ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಕೇವಲ 2077. ಈ ಬಾಬ್ತು ಹಿರಿಯ ಪಶು ವೈದ್ಯಾಧಿಕಾರಿಗಳ ಸಾವಿರ ಹುದ್ದೆಗಳ ಪೈಕಿ 553 ಹುದ್ದೆಗಳು ಮಾತ್ರ ಇವೆ. ಇನ್ನೂ 447 ಹಿರಿಯ ಪಶು ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಪಶು ವೈದ್ಯಾಧಿಕಾರಿಗಳ ಹುದ್ದೆಗಳು 1602 ಹುದ್ದೆಗಳು ಮಂಜೂರಾಗಿವೆ, ಅದರಲ್ಲಿ ಕೇವಲ 754 ಹುದ್ದೆಗಳು ಮಾತ್ರ ಭರ್ತಿಯಾಗಿವೆ. ಇನ್ನೂ 848 ಅಂದರೆ, ಭರ್ತಿಯಾಗಿರುವುದಕ್ಕಿಂತ, ಹೆಚ್ಚಿನ ಸಂಖ್ಯೆಯಲ್ಲಿ ಪಶು ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಇನ್ನೂ ಮಂಜೂರಾತಿಯಾಗಿರುವಂತಹ ಮೂರು ವೃಂದಗಳು ಸೇರಿ ಒಟ್ಟು 1240 ಹುದ್ದೆಗಳು ಖಾಲಿ ಇರುತ್ತವೆ. ಮಾನ್ಯ ಸಚಿವರು ಎಷ್ಟು ದಿವಸಗಳಲ್ಲಿ ಈ ಹುದ್ದೆಗಳಿಗೆ ಮಂಜೂರಾತಿ ತೆಗೆದುಕೊಳ್ಳುತ್ತಾರೆ ಮತ್ತು ಎಷ್ಟು ದಿವಸಗಳಲ್ಲಿ ಖಾಲಿ ಇರುವಂತಹ ಈ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುತ್ತಾರೆಂದು ದಯವಿಟ್ಟು ತಿಳಿಸಬೇಕು.

**ಶ್ರೀ ಪ್ರಭು ಬಿ.ಚವ್ಹಾಣ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಹಿಂದೆ ಇದೇ ಪ್ರಶ್ನೆಯನ್ನು ಕೇಳಿದ್ದರು. ಈಗಲೂ ಸಹ ಅದೇ ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಸದಸ್ಯರ ಎಲ್ಲಾ ಪ್ರಶ್ನೆಗಳಿಗೂ ಲಿಖಿತ ಉತ್ತರವನ್ನು ಮೂಲಕ ನೀಡಿದ್ದೇನೆ. Almost buildings ಆಗಿದೆ. ಇನ್ನೂ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

200 ಕಟ್ಟಡಗಳು ಮಾತ್ರ ಆಗಬೇಕಾಗಿದೆ. NABARD ಯೋಜನೆಯಲ್ಲಿ RIDF ನಲ್ಲಿ buildings ಆಗುತ್ತಿದೆ. ನಾನು ಸಚಿವನಾದ ನಂತರ minimum 100 building ಗಳಿಗೆ ಮಂಜೂರಾತಿ ನೀಡಿದ್ದೇನೆ. ಅದು proceed ಆಗುತ್ತಿದೆ. ಬಾಕಿ ಇರುವಂತಹ 200 ಕಟ್ಟಡಗಳನ್ನು two years limit ನಲ್ಲಿ ಮಾಡಿಕೊಡುತ್ತೇವೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ಮಾನ್ಯ ಸದಸ್ಯರು ಪಶು ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ ಎಂದು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಇಲಾಖೆಯಲ್ಲಿ ಬಹಳ ವರ್ಷಗಳಿಂದ ಹುದ್ದೆಗಳು ಖಾಲಿ ಇವೆ. ಇದರ ಬಗ್ಗೆ ಇರುವಂತಹ ಕಡತ ಆರ್ಥಿಕ ಇಲಾಖೆಯಲ್ಲಿದೆ. ನಾನು ಪದೇ ಪದೇ ಆ ಇಲಾಖೆಗೆ ಹೋಗಿ ಮಾತನಾಡುತ್ತಿದ್ದೇನೆ. Covid-19 ಬಂದ ಮೇಲೆ ಎಲ್ಲವೂ ಸಹ ಅಸ್ತವ್ಯಸ್ತವಾಗಿದೆ, ಇದು ತಮಗೂ ಗೊತ್ತಿದೆ. ನಾನು ಜಿಲ್ಲೆಗಳಿಗೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಈ ಬಗ್ಗೆ ಕೇಳುತ್ತಿರುತ್ತಾರೆ. ಅದಕ್ಕಾಗಿ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಬಳಿ ಮತ್ತು ಆರ್ಥಿಕ ಇಲಾಖೆಯವರ ಜೊತೆಗೆ ಚರ್ಚೆ ಮಾಡಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆಯೂ ಈ ಪರಿಸ್ಥಿತಿ ಇದೆ. ಅದಕ್ಕಾಗಿ, ನಾನು ಶೀಘ್ರದಲ್ಲಿಯೇ ಈ ಕೆಲಸವನ್ನು ಮಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಇರುವಂತಹ ಮಾಹಿತಿಯ ಪ್ರಕಾರ, ನಮ್ಮ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಪಶು ವೈದ್ಯಾಧಿಕಾರಿಗಳ ಕೊರತೆ ಇದೆ. ಪಶು ವೈದ್ಯಾಧಿಕಾರಿಗಳು ಆಸ್ಪತ್ರೆಗಳಿಗೆ ಮಾತ್ರವಲ್ಲ, ಅವರು dairy ಗಳಿಗೂ ಬೇಕು. ನಾವು ಇಲ್ಲಿ ಒಂದು ಮನವಿಯನ್ನು ಇಟ್ಟಿದ್ದೆವು. ಅದನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ. ಕೃಷಿ ಮತ್ತು Horticulture ಗಳಿಗೆ branch ಗಳನ್ನು ಕೊಟ್ಟಿದ್ದಾರೆ. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಮಂಡ್ಯದಲ್ಲಿ ಸಾವಿರಾರು ಎಕರೆಗಳ ಪ್ರದೇಶದಲ್ಲಿ ಒಂದು V.C. Farm ಅಂತ ಮಾಡಿದ್ದಾರೆ. ಅಲ್ಲಿಗೆ Agriculture College ಕೊಟ್ಟಿದ್ದಾರೆ. ಅದೇರೀತಿ ಅಲ್ಲಿಗೆ ಒಂದು Government ನ Veterinary Science College ಕೊಡುವುದಕ್ಕೆ ಕಷ್ಟ ಏನಿದೆ? ಒಂದು ಶಾಖೆಯನ್ನು ಅಲ್ಲಿಗೆ ಕೊಡಿ. ಪಶು ವೈದ್ಯರು ತಯಾರಾಗಿ ಮೂಕ ಪ್ರಾಣಿಗಳನ್ನು ರಕ್ಷಣೆ ಮಾಡಲಿ. ದಯಮಾಡಿ, ಮಾನ್ಯ ಸಚಿವರು ಸರ್ಕಾರದ ಕಡೆಯಿಂದ ಅಲ್ಲೊಂದು branch ಅನ್ನು ಮಾಡಿಸಲಿ. ನಮ್ಮ ರಾಜ್ಯದಲ್ಲಿ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಂಡ್ಯದ V.C. Farm ರಾಜ್ಯಕ್ಕೆ ಮಾದರಿಯಾಗಿದೆ. ಅಲ್ಲಿಗೆ ಎಲ್ಲವನ್ನು ಕೊಟ್ಟಿದ್ದಾರೆ. ಆದರೆ, Veterinary Science College ಅನ್ನು ಕೊಟ್ಟಿಲ್ಲ. ಅಲ್ಲಿಗೆ Veterinary Science College ಕೊಟ್ಟರೆ, ಬಹುಶಃ ಪಶುವೈದ್ಯರ ಕೊರತೆ ನೀಗುತ್ತದೆಂದು ಅನಿಸುತ್ತದೆ. ಅದಕ್ಕೆ ಮಾನ್ಯ ಸಚಿವರು ಇದರ ಬಗ್ಗೆ ಖಚಿತವಾದ ಉತ್ತರವನ್ನು ನೀಡಬೇಕು.

**ಶ್ರೀ ಪ್ರಭು ಬಿ.ಚವ್ಹಾಣ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಈ ಬಗ್ಗೆ ಪರಿಶೀಲನೆ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 574**
**(ಉತ್ತರ ಒದಗಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೆಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸವಿಸ್ತಾರವಾದ ಉತ್ತರವನ್ನು ಒದಗಿಸಿದ್ದಾರೆ. ಒಂದು ಸಂತೋಷದ ವಿಷಯ ಏನೆಂದರೆ, ಬಾಲ್ಯವಿವಾಹ tradition ನಲ್ಲಿ ವಿಜಯಪುರ, ರಾಯಚೂರು, ಕೊಪ್ಪಳ, ಕಲಬುರಗಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಹೆಚ್ಚಿಗೆ ಇತ್ತು. ಈಗ ಅಲ್ಲಿ ಕಡಿಮೆಯಾಗಿದೆ. Unfortunately, ಮಾನ್ಯ ಮರಿತಿಬ್ಬೇಗೌಡರವರೇ, ಮಂಡ್ಯ ಜಿಲ್ಲೆಯಲ್ಲಿ ಜಾಸ್ತಿಯಾಗಿದೆ. ರಾಮನಗರ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಹೆಚ್ಚಾಗಿದೆ. ಮಾನ್ಯ ಸಚಿವರು ಉತ್ತರದಲ್ಲಿ ಕೊರೋನ ಅವಧಿಯಲ್ಲಿ ಬಾಲ್ಯವಿವಾಹಗಳು ಹೆಚ್ಚಾಗಿವೆ ಎಂದು ತಿಳಿಸಿದ್ದಾರೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ರಾಜ್ಯದಲ್ಲಿ ಬಾಲ್ಯ ವಿವಾಹಗಳು ಯಾವ ವರ್ಗ/ಸಮುದಾಯಗಳಲ್ಲಿ ಸಂಪ್ರದಾಯಕವಾಗಿ ಉಳಿದಿದೆ ಎಂಬುದು ಗಣತಿ/ಸಮೀಕ್ಷೆಯಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ರಾಜ್ಯದಲ್ಲಿ ಬಾಲ್ಯ ವಿವಾಹಗಳು ಯಾವ ವರ್ಗ/ಸಮುದಾಯಗಳಲ್ಲಿ ಸಾಂಪ್ರದಾಯಿಕವಾಗಿ ಉಳಿದಿದೆ ಎಂಬುದರ ಬಗ್ಗೆ ಗಣತಿ/ಸಮೀಕ್ಷೆ ನಡೆಸಿರುವುದಿಲ್ಲವೆಂದು ತಿಳಿಸಿದ್ದಾರೆ. ಬಹುಶಃ ಮಾನ್ಯ ಸಚಿವರಿಗೆ ಗೊತ್ತಿರಬಹುದು, ದೇವದಾಸಿಗಳು ಮತ್ತು ಹಿಂದುಳಿದ ವರ್ಗಗಳಲ್ಲಿ, ಮತ್ತೆ SC/ST ಗಳಲ್ಲಿ ಇದು ಹೆಚ್ಚಿಗಿದೆ ಎಂದು ಮಾಹಿತಿ ಇದೆ. 'UN Women' Organization ಏನಿದೆ, ಅವರು Census ಮಾಡಿದ್ದಾರೆ. ಮಾನ್ಯ ಸಚಿವರು ದಯಮಾಡಿ ಅದರ ಬಗ್ಗೆ ನೋಡಬೇಕು. ಈ ಸಮುಯದಾಯಗಳ ಮೇಲೆ ಎಚ್ಚರ ಮತ್ತು ಕಣ್ಣು ಇಡಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ನನ್ನದೊಂದು ಸಲಹೆ ಏನೆಂದರೆ, the Registration of Births and Deaths Act ಕೆಳಗಡೆ ಜನನ ಮತ್ತು ಮರಣದ ನೋಂದಣಿಯನ್ನು ಕಡ್ಡಾಯ ಮಾಡಿದ್ದಾರೆ. ಇಲ್ಲೂ ಸಹ ವಿವಾಹಗಳನ್ನು Marriage Registration Act ನಡಿ ನೋಂದಣಿ ಮಾಡುವುದನ್ನು ಕಡ್ಡಾಯ ಮಾಡಿದರೆ, ಬಹುಶಃ ಆಗ ಬಾಲ್ಯ ವಿವಾಹಗಳು ಮತ್ತು ಒತ್ತಾಯದ ವಿವಾಹಗಳು ಕಡಿಮೆಯಾಗಬಹುದೆಂದು ನನ್ನ ಭಾವನೆ. ಅದು The Hindu Marriage Act ಇರಬಹುದು, Special Marriage Act ಅಥವಾ Islamic law ಅಡಿಯಲ್ಲಿ ವಿವಾಹವಾಗಬಹುದು ಅಥವಾ The Indian Christian Marriage Act ಇರುಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವುಗಳನ್ನು compulsory registration ಮಾಡುವುದು ಒಳ್ಳೆಯದು. ಈ ರೀತಿ ವಿವಾಹಗಳನ್ನು compulsory registration ಮಾಡಿದಾಗ, marriage registration ಅನ್ನು Sub-Registrar office ನಲ್ಲಿ ಮಾಡಿದರೆ ಒಳ್ಳೆಯದು ಎಂದು ನನ್ನ ಭಾವನೆ. ಏಕೆಂದರೆ, ಎಲ್ಲರೂ ಸಹ District Registrar of Marriages ಇವರ office ಗೆ ಬರುವುದಕ್ಕೆ ಆಗುವುದಿಲ್ಲ. ದಯಮಾಡಿ, ಮಾನ್ಯ ಸಚಿವರು ಇದನ್ನು ಆಲೋಚನೆ ಮಾಡಬೇಕೆಂದು ಸರ್ಕಾರದಲ್ಲಿ ಕೋರುತ್ತೇನೆ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಹೋದರ ಸದಸ್ಯರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾನು ಸಹ ಅದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಬಗ್ಗೆ ಒಂದು ಸಭೆಯನ್ನು ಕರೆದು ತಮ್ಮ ಜೊತೆಯಲ್ಲಿ ಇನ್ನೊಂದು ಬಾರಿ ಮಾತನಾಡಿ ಅದನ್ನು ಯಾವ ರೀತಿ ಮಾಡಬಹುದು ಎನ್ನುವುದರ ಬಗ್ಗೆ ಕ್ರಮವನ್ನು ವಹಿಸುತ್ತೇನೆ. ಮಾನ್ಯ ಸದಸ್ಯರು ಬಾಲ್ಯ ವಿವಾಹವಾಗುವುದಕ್ಕೆ ಕಾರಣಗಳು ಏನು ಮತ್ತು ಬಾಲ್ಯ ವಿವಾಹಗಳು ಆಗಲು ಆರ್ಥಿಕ ಪರಿಸ್ಥಿತಿಯ ಕಾರಣ ಇರಬಹುದು, ಮೂಢನಂಬಿಕೆಗಳ ಕಾರಣಗಳು ಇರಬಹುದು ಅಥವಾ ಹಿಂದುಳಿದ ವರ್ಗಗಳಲ್ಲಿ ಈ ರೀತಿ ಆಗುವಂತಹ ಸಾಧ್ಯತೆಗಳು ಇರುತ್ತವೆ. ಹಾಗಾಗಿ, ಇದನ್ನು ಸರ್ವೆ ಮಾಡಿದರೆ ತಿಳಿದು ಬರುತ್ತದೆ ಎಂಬ ಮಾತನ್ನು ಹೇಳಿದ್ದಾರೆ. ನಮ್ಮಲ್ಲಿ ISC activities ನಲ್ಲಿ ಎಲ್ಲಾ ಕಡೆಗೂ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಕೋವಿಡ್‌ನಲ್ಲಿ ಬಾಲ್ಯವಿವಾಹಗಳು ಹೆಚ್ಚಾಗುವಂತಹ ಪರಿಸ್ಥಿತಿ ಎಂದರೆ, ವಲಸೆ ಹೋದವರು ಎಲ್ಲರೂ ವಾಪಸ್ಸು ಬಂದರು. ಇದು ಕೇವಲ ನಮ್ಮ ಇಲಾಖೆಗೆ ಮಾತ್ರ ಸಂಬಂಧ ಬರುವುದಿಲ್ಲ. ಇದರಲ್ಲಿ ಗೃಹ ಇಲಾಖೆ, ನಮ್ಮ ಇಲಾಖೆ, RDPR ಇಲಾಖೆ ಮತ್ತು Health and Family Welfare Department ಇದೆ.

**(ಮುಂದು)**

**(186)05-02-2021(11-50)ಎಂವಿ-ಬಿಎನ್‌ಎಸ್**

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ (ಮುಂದು):–**

ಹೀಗಾಗಿ ಸುಮಾರು 58,400 ಅಧಿಕಾರಿಗಳು ಇದೆಲ್ಲವನ್ನು ನೋಡಿಕೊಳ್ಳುವಂಥದ್ದು ಇದೆ. ಇದರಲ್ಲಿ ನಮ್ಮ ಇಲಾಖೆ ಇದಕ್ಕೆ ಪ್ರಾಮುಖ್ಯತೆಯನ್ನು ವಹಿಸಿ, ಅದನ್ನು ತಡೆಗಟ್ಟುವಂಥದ್ದನ್ನು ಮಾಡುತ್ತಿದೆ. ನಾವು ಒಂದು ಒಳ್ಳೆಯ ರೀತಿಯಿಂದ ಕಾರ್ಯಕ್ರಮಗಳನ್ನು ನಿಯೋಜನೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರ ಸಲಹೆ ಏನಿದೆ, ಅದನ್ನು ಸಹ ಗಮನದಲ್ಲಿಟ್ಟುಕೊಂಡು, ಅದನ್ನು ಇನ್ನೊಂದು ಬಾರಿ ಪರಿಶೀಲನೆ ಮಾಡಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಮುಂದೆ ಬರತಕ್ಕಂತಹ ವರ್ಷಗಳಲ್ಲಿ ಬಾಲ್ಯವಿವಾಹಗಳು ಕಡಿಮೆಯಾಗುವಂತಹ ರೀತಿಯಲ್ಲಿ ಸಮರ್ಪಕವಾದ ಕಾರ್ಯವನ್ನು ಮಾಡುತ್ತೇನೆಂದು ಭರವಸೆ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 511**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಕೊಡಗು ಜಿಲ್ಲೆಯಲ್ಲಿ ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ, ಕುಶಾಲನಗರ ಮತ್ತು ಹೆಬ್ಬಾಲೆಗಳಲ್ಲಿ ಬಸ್ ನಿಲ್ದಾಣವಿದೆ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಿದ್ದೇವೆಂದು, ಮಾನ್ಯ ಸಚಿವರು ಒಂದು ಉತ್ತಮವಾದ ಉತ್ತರವನ್ನು ನೀಡಿದ್ದಾರೆ. ಇದೇ ರೀತಿ ವಿರಾಜಪೇಟೆ ತಾಲ್ಲೂಕಿನಲ್ಲಿ ಗೋಣಿಕೊಪ್ಪ ಎಂದು ಒಂದು ದೊಡ್ಡ ಪಟ್ಟಣವಿದೆ. ಆ ಪ್ರದೇಶದಲ್ಲಿ ಸುಮಾರು 60 ರಿಂದ 65 ಸಾವಿರ ಜನರು ವಾಸ ಮಾಡುತ್ತಾರೆ. ಅಲ್ಲಿ ವಾಹನಗಳನ್ನು ನಿಲ್ಲಿಸುವುದಕ್ಕೆ ಜಾಗವಿಲ್ಲವೆಂದು ವಾಹನಗಳನ್ನು ರಸ್ತೆ ಬದಿಗಳಲ್ಲಿ ನಿಲ್ಲಿಸುತ್ತಿದ್ದಾರೆ. ಜೊತೆಗೆ ಹತ್ತು ನಿಮಿಷಕ್ಕೆ ಒಂದರಂತೆ ಸರ್ಕಾರಿ ಬಸ್‌ಗಳು ಸಹ ಓಡಾಡುತ್ತಿವೆ. ಮೈಸೂರು-ವಿರಾಜಪೇಟೆಯ ಮಟ್ಟನೂರಿನಲ್ಲಿ ಏರ್‌ಪೋರ್ಟ್ ಆಗಿರುವುದರಿಂದ ಅಲ್ಲಿಗೆ ಅನೇಕ ಸರ್ಕಾರಿ ಬಸ್‌ಗಳು ಓಡಾಡುತ್ತಿವೆ. ಅಲ್ಲಿ ಒಂದು ಎಕರೆ ಜಾಗವಿದೆ. ಆ ಜಾಗ ಶಿಕ್ಷಣ ಇಲಾಖೆಯ ಸುಪರ್ಧಿಯಲ್ಲಿದೆ. ಆ ಜಾಗದಲ್ಲಿ ಕಾಡು ಬೆಳೆದುಕೊಂಡಿದೆ. ಬಸ್ ನಿಲ್ದಾಣಕ್ಕೆ ಅದು ಸೂಕ್ತ ಸ್ಥಳವೆಂದು ನನಗೆ ಅನಿಸುತ್ತಿದೆ. ದಯವಿಟ್ಟು ಅದರ ಬಗ್ಗೆ ಮಾನ್ಯ ಸಾರಿಗೆ ಸಚಿವರು ಮಾತನಾಡಿ, ಅಲ್ಲಿ ಬಸ್ ನಿಲ್ದಾಣವನ್ನು ನಿರ್ಮಾಣ ಮಾಡಬಹುದು. ಅದರಷ್ಟೇ ಒಂದು ಪಟ್ಟಣ ಮಡಿಕೇರಿ ತಾಲ್ಲೂಕಿನ ನಾಪೋಕ್ಲುನಲ್ಲಿದೆ. ಅಲ್ಲೂ ಕೂಡ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣ ಮತ್ತು ಯಾವುದೇ ರೀತಿಯ ನಿಲ್ದಾಣವಿಲ್ಲ. ಅಲ್ಲಿ ಏನಾಗಿದೆ ಎಂದರೆ, ನಾಪೋಕ್ಲುನಿಂದ ನೇರವಾಗಿ ಬೆಂಗಳೂರಿಗೆ ಬರುವ ಬಸ್ ಮೂರ್ನಾಡು, ವಿರಾಜಪೇಟೆ ಮತ್ತು ಗೋಣಿಕೊಪ್ಪಕ್ಕೆ ಹೋಗಿ ಬೆಂಗಳೂರಿಗೆ ಬರುತ್ತದೆ. ಅದು ಸ್ಲೀಪರ್ ಕೋಚ್. ಅವರೆಲ್ಲರೂ ಸಹ ವಾಹನಗಳನ್ನು ರಸ್ತೆ ಬದಿಗಳಲ್ಲಿ ನಿಲ್ಲಿಸುತ್ತಿದ್ದಾರೆ. ಆದರೆ, ನಾಪೋಕ್ಲುನಲ್ಲೂ ಕೂಡ ಜಾಗವಿದೆ. ದಯವಿಟ್ಟು ಈ ಎರಡು ನಿಲ್ದಾಣಗಳನ್ನು ಸರ್ಕಾರದ ವತಿಯಿಂದ ನಿರ್ಮಿಸಿಕೊಡಬೇಕು. ಅದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು, ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ಎರಡು ಸ್ಥಳಗಳಲ್ಲಿ ಬಸ್ ನಿಲ್ದಾಣಗಳ ಅವಶ್ಯಕತೆ ಇದೆ ಎಂದು ನನ್ನ ಗಮನಕ್ಕೆ ತಂದಿದ್ದಾರೆ. ಅಲ್ಲಿಗೆ ತುರ್ತಾಗಿ ನಮ್ಮ ಇಲಾಖೆಯ ಇಂಜಿನಿಯರ್‌ಗಳನ್ನು ಕಳುಹಿಸಿ, ಆ ಸ್ಥಳವನ್ನು ಪರಿಶೀಲನೆ ಮಾಡಿಸಿ, ಅದರ plan

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

and estimate ಅನ್ನು ready ಮಾಡಿಕೊಂಡು, ಮುಂದಿನ ದಿನಗಳಲ್ಲಿ ಆದ್ಯತೆಯ ಮೇರೆಗೆ ಅದರ ಬಗ್ಗೆ ಕ್ರಮ ಕೈಗೊಳ್ಳುವಂತಹ ಕೆಲಸವನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 536**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ವಿವರವಾಗಿ ಉತ್ತರವನ್ನು ನೀಡಿದ್ದಾರೆ. ಇಡೀ ಜಿಲ್ಲೆಯ ಪಂಚಾಯಿತಿವಾರು ಮತ್ತು ಎಲ್ಲಾ ಯೋಜನವಾರು ಮಾಹಿತಿಗಳನ್ನು ಚೆನ್ನಾಗಿ ಒದಗಿಸಿದ್ದಾರೆ. ನಾನು ಇದರ ಬಗ್ಗೆ ಹೆಚ್ಚು ವಿವರಕ್ಕೆ ಹೋಗುವುದಿಲ್ಲ. ಈಗ ನರೇಗಾ ಯೋಜನೆಯ ಹಣವನ್ನು ದುರುಪಯೋಗಪಡಿಸಿಕೊಂಡ ಪಂಚಾಯಿತಿಗಳು ಯಾವ್ಯಾವು? ಹಾಗೂ ಹಣ ದುರುಪಯೋಗಪಡಿಸಿಕೊಂಡ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಯಾರು ಎಂದು ಕೇಳಿದ್ದೇನೆ. ಅದಕ್ಕೂ ಉತ್ತರ ನೀಡಿದ್ದಾರೆ. ಆದರೆ, ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗು ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ಎಂಬುದರ ಬಗ್ಗೆ, ಬಹಳ ಒಂದು ಒಳ್ಳೆಯ ಕೆಲಸ ಏನು ಮಾಡಿದ್ದಾರೆಂದರೆ, ಕೋಲಾರ ಜಿಲ್ಲೆಯ ಸೀವಂಕಿ ಮತ್ತು ಲಕ್ಷ್ಮೀಪುರ ಪಂಚಾಯಿತಿಗಳಲ್ಲಿ 2015–16ನೇ ಇಸವಿಯಲ್ಲಿ, 1.45 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ. ಅದರ ಬಗ್ಗೆ ತನಿಖೆ ಮಾಡಿ, ಮೊನ್ನೆ ಅಂದರೆ, ದಿನಾಂಕ 02.12.2020ರಂದು ಈ ಪ್ರಕರಣವನ್ನು ಎಸಿಬಿ ಒಪ್ಪಿಸಿದ್ದಾರೆ. ಆದುದರಿಂದ ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಈ ಪಂಚಾಯಿತಿಗಳಲ್ಲಿ ಕೆಲಸ ಮಾಡಿದಂತಹ ಏನು ಹದಿನಾಲ್ಕು ಜನ ಅಧಿಕಾರಿಗಳಿದ್ದಾರೆ, ಅವರಲ್ಲಿ ಆರು ಜನರು ನಿವೃತ್ತಿ ಹೊಂದಿದ್ದಾರೆ. ಉಳಿದ ಇಬ್ಬರು ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಎಂಟು ಜನ ವಿವಿಧ ಅಧಿಕಾರಿಗಳು. ಇವರ ಮೇಲೆ ಏನು ಕ್ರಮ ಕೈಗೊಂಡಿದ್ದಾರೆ.

ಎರಡನೆಯದಾಗಿ, ಇಡೀ ಈ ವ್ಯವಸ್ಥೆಯಲ್ಲಿ cheque power ಇರುವುದು ಕೇವಲ ಪಂಚಾಯಿತಿ ಅಧ್ಯಕ್ಷರಿಗೆ ಮಾತ್ರ. ಅಂದರೆ, ಯಾವುದೇ ಎಂಎಲ್ಎ, ಎಂಎಲ್‌ಸಿ, ಎಂ.ಪಿ., ಮಾನ್ಯ ಮಂತ್ರಿ ಇವರ್ಯಾರಿಗೂ ಇಲ್ಲ. ಆದರೆ, ಪಂಚಾಯಿತಿಯ ಅಧ್ಯಕ್ಷರಿಗೆ ಮಾತ್ರ cheque power ಇದೆ. ಈ ಪ್ರಕರಣದಲ್ಲಿ ಪಂಚಾಯಿತಿಯ ಇಬ್ಬರು ಅಧ್ಯಕ್ಷರು ಭಾಗಿಯಾಗಿದ್ದಾರೆ. ಅವರ ಮೇಲೆ ಏನು ಕ್ರಮ ಕೈಗೊಂಡಿದ್ದಾರೆ.

ಮೂರನೆಯದಾಗಿ, ಶ್ರೀ ವಿಶ್ವನಾಥ್ ರೆಡ್ಡಿ ಎನ್ನುವಂತಹ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅವ್ಯವಹಾರವಾದಂತಹ ಲಕ್ಷ್ಮೀಪುರ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವರನ್ನು, ಪಕ್ಕದ ಗೌನ್‌ಪಲ್ಲಿ ಪಂಚಾಯಿತಿಯಲ್ಲಿ ಕೆಲಸ ಮಾಡುವುದಕ್ಕೆ ಬಿಟ್ಟಿದ್ದಾರೆ. ಇದುವರೆಗೆ ಈ ಅಧಿಕಾರಿಗಳ ಮೇಲೆ ಯಾವ ರೀತಿಯ ಕ್ರಮವನ್ನು ತೆಗೆದುಕೊಂಡಿದ್ದಾರೆಂದು ಸರ್ಕಾರ ಸ್ಪಷ್ಟಪಡಿಸಬೇಕೆಂದು ಕೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಈ ನರೇಗಾ ಯೋಜನೆ ಈ ದೇಶದ ಮಾನ್ಯ ಪ್ರಧಾನಿ ಮಂತ್ರಿಗಳಾದ ನರೇಂದ್ರ ಮೋದಿಯವರು ಯಾವ ಬಡವರು ಕೂಡ ಉಪವಾಸದಿಂದ ಸಾಯಬಾರದು ಎನ್ನುವಂತಹ ಕಾರಣಕ್ಕೆ ತಂದಿರುವಂತಹ ಒಂದು ವಿಶೇಷವಾದಂತಹ ಯೋಜನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಡಾ||ಮನಮೋಹನ್ ಸಿಂಗ್‌ರವರು ಈ ಯೋಜನೆಯನ್ನು ಜಾರಿಗೆ ತಂದರು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಇದು ಅವರ ಘೋಷಣೆ. ಆದರೆ, ಅವರು ಜಾರಿಗೆ ತಂದಿದ್ದಾರೆ. ಅವರು ಜಾರಿಗೆ ತಂದಿರುವುದಕ್ಕೆ ಅಲ್ಲಿ ಇರುವುದು. ಅವರು ಜಾರಿಗೆ ತಂದಿರುವುದರ ಬಗ್ಗೆ ನಮ್ಮದೇನು ಅಭಿಪ್ರಾಯವಿಲ್ಲ. ನಾವು ಅದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದೇವೆ. ಆದರೆ, ಡಾ||ವೈ.ಎ.ನಾರಾಯಣಸ್ವಾಮಿಯವರು ಎತ್ತಿರುವ ವಿಷಯ ಏನಿದೆ, ಆ ಭ್ರಷ್ಟಾಚಾರಗಳು ನಡೆದಿರುವುದು ಆಗಲೇ. ಈಗ ಕೂಲಿ ಕೆಲಸ ಮಾಡುವಂತಹ ವ್ಯಕ್ತಿಯ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಹೋಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ,...

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಯಾವಾಗಲೂ ಶಾಂತಿಯಿಂದ ಇರುತ್ತಾರೆ. ಆದರೆ, ಇವತ್ತು ಅವರು ಶಾಂತಿಯಿಂದ ಇಲ್ಲ ಏಕೆ?

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಇವತ್ತು ಮಾನ್ಯ ಸಚಿವರು ಶಾಂತಿಯುತವಾಗಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ ನಾನು ಶಾಂತಿಯುತವಾಗಿ ಇದ್ದೇನೆಯೇ? ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಶಾಂತಿಯಿಂದ ಇದ್ದೆ. ಈಗ ಡಾ||ವೈ.ಎ.ನಾರಾಯಣಸ್ವಾಮಿಯವರು ಕೇಳಿರುವ ಪ್ರಶ್ನೆಗಳಿಗೆ ಈಗಾಗಲೇ ಮಾಹಿತಿಗಳನ್ನು ನೀಡಿದ್ದೇನೆ. ಅಂದರೆ, ಯಾವ್ಯಾವ ಅಧಿಕಾರಿಗಳು ಏನೇನು ಮಾಡಿದ್ದಾರೆ ಮತ್ತು ಚುನಾಯಿತ ಪ್ರತಿನಿಧಿಗಳು ಏನೇನು ಮಾಡಿದ್ದಾರೆಂದು ತಿಳಿಯಲು, ಈ ಎಲ್ಲದಕ್ಕೂ ಕೂಡ ಅಂತಿಮ ವರದಿಗೆ ಕಾಯುತ್ತಿದ್ದೇವೆ. ಇಲ್ಲಿ ಯಾರನ್ನು ಕೂಡ ರಕ್ಷಣೆ ಮಾಡುವಂತಹ ಪ್ರಶ್ನೆ ಇಲ್ಲ. ಮಾನ್ಯ ಲೋಕಾಯುಕ್ತದಿಂದಾಗಲಿ ಅಥವಾ ಎಸಿಬಿಯಿಂದಾಗಲಿ ಏನು ವರದಿ ಬರುತ್ತದೆ. ಆ ವರದಿ ಬಂದ ತಕ್ಷಣ ಮಾನ್ಯ ಸದಸ್ಯರಾದ ಡಾ||ವೈ.ಎ.ನಾರಾಯಸ್ವಾಮಿಯವರಿಗೆ ತೃಪ್ತಿಯಾಗುವ ರೀತಿಯಲ್ಲಿ ತಪ್ಪತಸ್ಥರ ವಿರುದ್ಧ ಕ್ರಮಕೈಗೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಲ್ಲಿ ಅಕ್ರಮವಾಗಿರುವುದು 2015–16ನೇ ಸಾಲಿನಲ್ಲಿ. ಆದರೆ, ಈಗ ಎಸಿಬಿ ಕೊಟ್ಟಿದ್ದಾರೆ. ಈ ಐದು ವರ್ಷಗಳ ಕಾಲ Ombudsman ರವರು ಏನು ಮಾಡಿದ್ದಾರೆ. ಕನಿಷ್ಠಪಕ್ಷ ಅಧಿಕಾರಿಗಳಿಗೆ ಚಾಟಿ ಬೀಸಿ ಅವರನ್ನು suspend ಮಾಡದೇ ಇದ್ದರೆ, ಇಲಾಖೆಯಲ್ಲಿ ಸಚಿವರ ಮಾತನ್ನು ಯಾರು ಕೇಳುತ್ತಾರೆ. ದಯವಿಟ್ಟು ಆ ಕೆಲಸವನ್ನು ಮಾಡಬೇಕು. ಇನ್ನು ಎಂಟು ಜನರಿದ್ದಾರೆ. ಈಗಾಗಲೇ ಆರು ಜನ ನಿವೃತ್ತರಾಗಿ ಹೋಗಿದ್ದಾರೆ. ನಿವೃತ್ತರ ಅವರ ಮೇಲೆ ಇಲಾಖಾ ವಿಚಾರಣೆ ಮಾಡಿಕೊಳ್ಳಿ. ಆದರೆ, ಇರುವಂತಹ ಎಂಟು ಜನರ ಮೇಲೆ ಮತ್ತು ಇಬ್ಬರು ಪಂಚಾಯಿತಿ ಅಧ್ಯಕ್ಷರ ವಿರುದ್ಧ ಕ್ರಮ ಜರುಗಿಸಿ. ಆಮೇಲೆ ಎಸಿಬಿ ವರದಿ ಬಂದ ನಂತರ ಕ್ರಮ ಜರುಗಿಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಆ ಹದಿನೈದು ಜನರಲ್ಲಿ ಯಾರು ತಪ್ಪು ಮಾಡಿದ್ದಾರೆಂದು, ನಿರ್ದಿಷ್ಟವಾದ ವ್ಯಕ್ತಿಗಳ ಬಗ್ಗೆ ಇನ್ನು ವರದಿ ಬಂದಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಐದು ವರ್ಷ ಬೇಕೆ? ಹಾಗಾದರೆ ಇಲಾಖೆಯವರು ಏನು ಮಾಡುತ್ತಾರೆ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಇಲಾಖೆಗೆ ಸಚಿವನಾಗಿ ಬಂದು ಒಂದು ವರ್ಷವಾಗಿದೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರ ಬಗ್ಗೆ ಹೇಳುತ್ತಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಅದಕ್ಕೋಸ್ಕರ ನಮ್ಮ ಸರ್ಕಾರ ಈ ಪ್ರಕರಣದ ಬಗ್ಗೆ ತನಿಖೆ ಮಾಡುತ್ತಿದ್ದೇವೆ. ಇದನ್ನು ಲೋಕಾಯುಕ್ತಕ್ಕೆ ಕೊಟ್ಟಿದ್ದೇವೆ ಈಗ ಎಸಿಬಿ ಯವರಿಗೂ ಸಹ ಕೊಟ್ಟಿದ್ದೇವೆ. ನಾವು ಅವರಿಂದ ವರದಿ ಬರುವುದನ್ನು ಕಾಯುತಿದ್ದೇವೆ. ಅದರಲ್ಲಿ ಹದಿನೈದು ಜನರಿದ್ದಾರೆ. ಅದು ನಿಜ. ನಾನು ಇಲ್ಲವೆಂದು ಹೇಳುವುದಿಲ್ಲ. ಆ ಹದಿನೈದು ಜನರಲ್ಲಿ ಕೆಲವರು ನಿವೃತ್ತಿ ಹೊಂದಿರಬಹುದು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಕೆ.ಎಸ್.ಈಶ್ವರಪ್ಪನವರು powerful ಮಂತ್ರಿಗಳು. ಅವರು ಇಲಾಖೆಗೆ ಈಗ ಬಂದಿರಬಹುದು. ಆದರೆ, ಇಲಾಖೆಯ ಅಧಿಕಾರಿಗಳು ಎಷ್ಟು ವರ್ಷದಿಂದ ಇದ್ದಾರೆ. ದಯವಿಟ್ಟು ಅವರ ವಿರುದ್ಧ ಕ್ರಮ ಜರುಗಿಸಿ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ತಾವು ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈ ಪಂಚಾಯಿತಿ ವ್ಯವಸ್ಥೆ ಗಟ್ಟಿಯಾಗಬೇಕು ಎಂದರೆ, ದಯವಿಟ್ಟು ಅವರ ವಿರುದ್ಧ ಕ್ರಮ ಜರುಗಿಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಹೌದು ಸ್ವಾಮಿ, ನಾನು ಅದಕ್ಕೋಸ್ಕರ ಹೇಳುತ್ತಿರುವುದು.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರ ಹೇಳಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಇಬ್ಬರಿಗೂ ಸೇರಿ ಉತ್ತರ ನೀಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಡಾ॥ವೈ.ಎ.ನಾರಾಯಣಸ್ವಾಮಿಯವರಿಗೆ ಹೇಳಲಿ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ಪ್ರಶ್ನೆ ನನ್ನದು ಅದಕ್ಕೆ ನನಗೆ ಉತ್ತರ ಬೇಕು.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಯಾರ ಅಪ್ಪನದು ಕೂಡ ಅಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ನನ್ನ ಜೊತೆ ವಿತಂಡವಾದಕ್ಕೆ ಬರುವುದು ಬೇಡ. ಇದು ನನ್ನ ಪ್ರಶ್ನೆ ಅದಕ್ಕೆ ಉತ್ತರ ಕೇಳುತ್ತಿದ್ದೇನೆ. ಇದು ಅವರ ಪ್ರಶ್ನೆ ಅಲ್ಲ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ಇದು ಡಾ॥ವೈ.ಎ. ನಾರಾಯಣಸ್ವಾಮಿಯವರು ಕೇಳಿರುವ ಪ್ರಶ್ನೆ ಅದಕ್ಕೆ ಅವರು ಉತ್ತರ ಕೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಡಾ|| ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, what is his right? It is my question. (Interruption)

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ವಿಧಾನ ಪರಿಷತ್ತಿನ ಸದಸ್ಯರು ಅವರು ಈ ರೀತಿಯ ಪದಗಳನ್ನು ಬಳಸಬಾರದು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಡಾ||ವೈ.ಎ.ನಾರಾಯಣಸ್ವಾಮಿಯವರು ತಮ್ಮ ಪ್ರಶ್ನೆ ಎಂದು ಹೇಳುತ್ತಿದ್ದಾರೆ.

**ಡಾ|| ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೌದು, ಇದು ನನ್ನ ಪ್ರಶ್ನೆ. ನನಗೆ ಉತ್ತರ ಬೇಕಾಗಿರುವುದು. ಮಾನ್ಯ ಮರಿತಿಬ್ಬೇಗೌಡರಿಗೆ ಅಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇದು ಸಾರ್ವಜನಿಕರ ಪ್ರಶ್ನೆ. ನನಗೂ ಅದರ ಬಗ್ಗೆ ಮಾತನಾಡುವುದಕ್ಕೆ ಹಕ್ಕಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರನ್ನು ಕುಳಿತುಕೊಳ್ಳುವಂತೆ ಹೇಳಿ. ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಹಕ್ಕಿದೆ ನಿಜ. ಅವರು ಒಬ್ಬ ಹಿರಿಯ ವಿಧಾನ ಪರಿಷತ್ತಿನ ಸದಸ್ಯರು. ಇದನ್ನು ಇಡೀ ರಾಜ್ಯ ನೋಡುತ್ತಿದೆ. ಇದು ಯಾರ ಅಪ್ಪನದು ಅಲ್ಲ ಎನ್ನುವ ಈ ರೀತಿಯ ಪದಗಳು ಸರಿಯಲ್ಲ. ಏಕೆಂದರೆ, ನಿನ್ನೆ ಅವರು ಮಾಡಿರುವುದನ್ನು ಇಡೀ ರಾಜ್ಯ ನೋಡಿದೆ. ಅವರು ಮತ್ತೆ ಇದನ್ನು ಮುಂದುವರೆಸುವುದು ಬೇಡ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಇಪ್ಪತ್ತೊಂದು ವರ್ಷದಿಂದ ಮಾಡುತ್ತಿರುವುದನ್ನು ಇಡೀ ರಾಜ್ಯ ನೋಡುತಿದೆ. ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಿ ಎಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಿದರೆ. ಮಾನ್ಯ ಕೆ.ಎಸ್.ಈಶ್ವರಪ್ಪನವರು ಇಲಾಖೆಗೆ ಈಗ ಬಂದಿದ್ದೇನೆಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರ ಕಾರ್ಯದಕ್ಷತೆಯ ಬಗ್ಗೆಯೂ ಸಹ ನಾಡಿನ ಜನರು ನೋಡುತ್ತಿದ್ದಾರೆ.

**(ಮುಂದು...)**

**(187) 05.02.2021 12.00 ಎಲ್‌ಎಲ್/ಜಿಆರ್**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನನ್ನ ಕಾರ್ಯದಕ್ಷತೆಯನ್ನು ನೋಡಿಯೇ ಜನ ನನ್ನನ್ನು ತಂದು ಇಲ್ಲಿ ಕೂರಿಸಿರುತ್ತಾರೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಹೌದು. ನಾವು ನೇರವಾಗಿಯೇ ಇಲ್ಲಿಗೆ ಬಂದು ಕುಳಿತಿರುತ್ತೇವೆ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ ತಾವು ದಯಮಾಡಿ ಕುಳಿತುಕೊಳ್ಳಿ. **(ಗೊಂದಲ)** ಅರ್ಥ ಮಾಡಿಕೊಳ್ಳಬೇಕು.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ಪ್ರತಿ ಬಾರಿ ತಾವು ಇದೇ ಕೆಲಸ ಮಾಡುತ್ತೀರಿ.

**ಶ್ರೀ ಮರಿತಿಬ್ಬೇಗೌಡ:–** ನೀವು ಇವೊತ್ತಿನ ದಿವಸ ಈ ರಾಜ್ಯದಲ್ಲಿ ಯಾವ ರೀತಿ ಅಧಿಕಾರ ನಡೆಸುತ್ತಿದ್ದೀರಿ, ಯಾವ ರೀತಿ ಅಧಿಕಾರಕ್ಕೆ ಬಂದಿದ್ದೀರೆನ್ನುವುದು ಇಡೀ ದೇಶಕ್ಕೆ ಗೊತ್ತಿದೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ನಿಮ್ಮ ಹಣೆಬರಹದಲ್ಲಿ ಇಲ್ಲಿ ಕುಳಿತುಕೊಳ್ಳುವ ಯೋಗ್ಯತೆ ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ,..

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ನಮ್ಮದಲ್ಲ ಹಣೆಬರಹ, ನಿಮ್ಮದು.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** ... ನೀವು ಮಾತನಾಡಬೇಡಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ...ಯೋಗ್ಯತೆಯೇ ಇಲ್ಲ. ನಿಮಗೆ ಯಾವುದೇ ಅಧಿಕಾರ ಇರುವುದಿಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ನೀವು ಅಧಿಕಾರಕ್ಕೆ ಯಾವ ರೀತಿ ಬಂದಿದ್ದೀರೆನ್ನುವುದು ಇಡೀ ದೇಶಕ್ಕೆ ಗೊತ್ತು. **(ಗೊಂದಲ)** ನೀವು ನನಗೆ ಏತಕ್ಕೆ ಹೇಳುತ್ತೀರಿ? **(ಗೊಂದಲ)** ಹೌದು.

**ಹಂಗಾಮಿ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ...

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಇವೆಲ್ಲವನ್ನೂ ಬಿಟ್ಟುಬಿಡಿ. ಆ ಕಾಲ ಹೊರಟು ಹೋಯಿತು.

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ಪ್ರತಿ ಸಂದರ್ಭದಲ್ಲಿಯೂ ತಾವು ಈ ರೀತಿಯ ಕೆಲಸ ಮಾಡುತ್ತಿದ್ದೀರಿ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ದಯಮಾಡಿ ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ನೀವು ಸೀನಿಯರ್ ಮಿನಿಸ್ಟರ್. ಮಂತ್ರಿಗಳ ಆಟ ನಡೆಯುವುದಿಲ್ಲವೆಂದು ಹೇಳಬಹುದು.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಸ್ವಾಮಿ ನಾನು ಹೇಳುವುದು ಕೇಳಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಸದನ ಚೆನ್ನಾಗಿ ನಡೆಯಬಾರದೆಂಬ ಉದ್ದೇಶ ಇದೆಯೇ ನಿಮಗೆ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ನೀವು ಸರಿಯಾಗಿ ಮಾತನಾಡುವುದು ತಿಳಿದುಕೊಳ್ಳಿ. ಗೊತ್ತಾಯಿತೇ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಅವರು ಒಳ್ಳೆಯ ಮಾತನ್ನು ಆಡಲಿ. **(ಗೊಂದಲ)** ...ಏನು ಪದ ಬಳಸಿದ್ದು?

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ...

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ನೀವು ಯಾವ ಮಾರ್ಗದಲ್ಲಿ ಅಧಿಕಾರಕ್ಕೆ ಬಂದಿದ್ದೀರೆಂದು ಇಡೀ ದೇಶಕ್ಕೆ ಗೊತ್ತಿದೆ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ದಯಮಾಡಿ ಕುಳಿತುಕೊಳ್ಳಿ. **(ಗೊಂದಲ)** ಮಾನ್ಯ ಅಪ್ಪಾಜಿಗೌಡರೇ ತಾವು ತಮ್ಮ ಸ್ಥಾನಕ್ಕೆ ಹೋಗಿ. **(ಗೊಂದಲ)** ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮರಿತಿಬ್ಬೇಗೌಡರೇ, ನೀವು ಸದನದೊಳಗೆ ಪ್ರತಿ ದಿನ ಈ ರೀತಿ ಮಾಡಿದರೆ ನಿಮ್ಮ ಹಿರಿತನಕ್ಕೆ ಏನು ಬೆಲೆ ಬರುತ್ತದೆ ಹೇಳಿ?

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, it has become habitual to him.

**ಹಂಗಾಮಿ ಸಭಾಪತಿಯವರು:–** ದಯಮಾಡಿ, ಸಚಿವರು ಮಾತನಾಡುವಾಗ ಅವರ ಮಾತನ್ನು ಕೇಳಿಸಿಕೊಳ್ಳಿ.

**(ಗೊಂದಲ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಎಲ್ಲಾ ಸಂದರ್ಭಗಳಲ್ಲಿಯೂ ಇದೇ ರೀತಿ ಮಾತನಾಡುವುದು.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇವರಿಗೆ ಸದನ ಚೆನ್ನಾಗಿ ನಡೆಯಬೇಕೆಂಬ ಉದ್ದೇಶ ಇರುವುದಿಲ್ಲ.

**(ಗೊಂದಲ)**

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮುಂದಿನ ಪ್ರಶ್ನೆ ಮಾನ್ಯ ಯು.ಬಿ. ವೆಂಕಟೇಶ್‌ರವರದ್ದು.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಲ್ಲ. ನಾನು ನನ್ನ ಪ್ರಶ್ನೆ ಕೇಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೇ, ಸಚಿವರು ತಮ್ಮ ಪ್ರಶ್ನೆಗೆ ಉತ್ತರ ನೀಡಿರುತ್ತಾರೆ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ಬೇಕು.

**ಹಂಗಾಮಿ ಸಭಾಪತಿಯವರು:–** ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನಿಮ್ಮಗೆ ಉತ್ತರ ಸಿಕ್ಕಿದೆ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಅವರು interfere ಮಾಡಿರುತ್ತಾರೆ. ತಾವು ಅವರಿಗೆ ಅನುಮತಿ ನೀಡಿದ್ದೀರಾ?

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ನೀವು ಪ್ರತಿ ದಿನ ಈ ರೀತಿ ಮಾಡುವುದು ಅಷ್ಟು ಒಳ್ಳೆಯದಲ್ಲ. ತಾವು ಹಿರಿಯರು ಸದಸ್ಯರಿದ್ದೀರಿ. ಸಭಾಪತಿಯವರಿಗೆ ಕಾರ್ಯನಿರ್ವಹಿಸುವುದಕ್ಕೆ ಅವಕಾಶ ನೀಡಿ. ನಿನ್ನೆಯ ದಿವಸ ಕೂಡ ನಾನು ಈ ಬಗ್ಗೆ ತಮಗೆ ಹೇಳಿದ್ದೇನೆ. ಈ ರೀತಿಯ ನಡವಳಿಕೆಗಳು ಸದನಕ್ಕೆ ನಿಜವಾಗಿಯೂ ಗೌರವ ತರುತ್ತದೆಯೇ? ನೀವೇ ಅರ್ಥ ಮಾಡಿಕೊಳ್ಳಿ. ಇಲ್ಲ, ತಾವು ಇದಕ್ಕೆಲ್ಲ ಉತ್ತರ ಕೊಡುವ ಅವಶ್ಯಕತೆ ಇರುವುದಿಲ್ಲ. ದಯಮಾಡಿ ತಾವು ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ...

**ಹಂಗಾಮಿ ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಯು.ಬಿ. ವೆಂಕಟೇಶ್‌ರವರೇ ತಮ್ಮ ಪ್ರಶ್ನೆ ಕೇಳಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಇವರಿಗೆ ಸದನ ಚೆನ್ನಾಗಿ ನಡೆಯಬೇಕೆಂಬ ಉದ್ದೇಶ ಇರುವುದಿಲ್ಲ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ನೀಡಿರುವುದಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇವರ ಪ್ರಶ್ನೆಗೆ ಉತ್ತರ ಕೊಟ್ಟುಬಿಡುತ್ತೇನೆ. ದಯಮಾಡಿ, ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಪ್ರತಿ ಪ್ರಶ್ನೆಗೂ ಇವರು interfere ಆಗುತ್ತಿದ್ದಾರೆ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ನಾರಾಯಣಸ್ವಾಮಿಯವರೇ, ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:-** ಈ ಸದನ ಅವರ ಅಪ್ಪನದ್ದಲ್ಲ. ಈ ಸದನ ಎಲ್ಲರ ಅಪ್ಪನಿಗೂ ಸೇರಿದ್ದು.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅವರಪ್ಪನದ್ದಲ್ಲ, ಇವರಪ್ಪನದ್ದಲ್ಲ ಎಂದು ಹೇಳಿರುವುದನ್ನು ಕಡತದಿಂದ ತೆಗೆದು ಹಾಕಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ. ಹರಿಪ್ರಸಾದ್:-** ಅವರು ನಿಮಗೆ ವ್ಯಕ್ತಿಗತವಾಗಿ ಹೇಳಿರುವುದಿಲ್ಲ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:-** ಹಾಗಾದರೆ, ಅವರು ಏನು ಹೇಳಿದರು? ಯಾರ ಅಪ್ಪನದಲ್ಲ ಎಂದು ಹೇಳಿದರು.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಅವರು ನಿಮಗೆ ವ್ಯಕ್ತಿಗತವಾಗಿ ಹೇಳಿರುವುದಿಲ್ಲ.

**ಡಾ: ವೈ.ಎ. ನಾರಾಯಣಸ್ವಾಮಿ:-** ನೀವು ಇಲ್ಲಿ ಪಂಚಾಯ್ತಿಗೆ ಬರಬೇಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅವರು ನಿಮಗೆ ವ್ಯಕ್ತಿಗತವಾಗಿ ಹೇಳಿರುವುದಿಲ್ಲ. ಅದು ಅವರ ಬಯಲುಸೀಮೆ ಭಾಷೆ. **(ಗೊಂದಲ)** ನೀವು ವ್ಯಕ್ತಿಗತವಾಗಿ ಮಾತನಾಡಬೇಡಿ.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ:-** ಈ ಪಾಳೇಗಾರಿಕೆ ನಡೆಯುವುದಿಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ನಾರಾಯಣಸ್ವಾಮಿಯವರೇ, ನನಗೂ ಕೂಡ ರೈಟ್ಸ್ ಇದೆ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ ಕುಳಿತುಕೊಳ್ಳಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಈ ಸದನದಲ್ಲಿ ಯಾವುದೇ ವಿಷಯದ ಬಗ್ಗೆ ಮಾತನಾಡಲು ನನಗೂ ಸಹ ಹಕ್ಕಿದೆ. **(ಗೊಂದಲ)** ಸದನದ ಸಮಯ ಹಾಳು ಮಾಡುತ್ತಿರುವವರು ಇವರುಗಳಾ ಅಥವಾ ನಾವುಗಳಾ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಮರಿತಿಬ್ಬೇಗೌಡರೇ, ದಯಮಾಡಿ ಕುಳಿತುಕೊಳ್ಳಿ. **(ಗೊಂದಲ)** ಮಾನ್ಯ ಸಚಿವರೇ ತಾವು ಉತ್ತರ ನೀಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಸ್ಪಷ್ಟವಾಗಿ ಹೇಳುತ್ತೇನೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ಲೋಕಾಯುಕ್ತ ಇಲಾಖೆಯಿಂದ ಮತ್ತು ಎ.ಸಿ.ಬಿ., ಯಿಂದ ವರದಿ ತರಿಸಿಕೊಳ್ಳುತ್ತಿದ್ದೇವೆ. ಇದರಲ್ಲಿ ಎಷ್ಟೇ ಪ್ರಭಾವಿ ವ್ಯಕ್ತಿಗಳಿದ್ದರೂ ಸಹ, ಯಾವುದೇ ಚುನಾಯಿತ ಪ್ರತಿನಿಧಿ ಇದ್ದರೂ ಸಹ ಅಥವಾ ಇದರಲ್ಲಿ ಯಾವುದೇ ಅಧಿಕಾರಿಗಳು ಭಾಗಿಯಾಗಿದ್ದರೂ ಸಹ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ:510**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಸರಿಯಾದ ಉತ್ತರವನ್ನು ಕೊಟ್ಟಿರುವುದಿಲ್ಲ. ಏಕೆಂದರೆ, ಬೆಂಗಳೂರಿನಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ಕಾಲದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆಶಾ ಕಾರ್ಯಕರ್ತೆಯರು ಮನೆ ಮನೆಗೆ ತಿರುಗಿ ಕೆಲಸ ಮಾಡಿದರು. ಅವರ ಮೇಲೆ ಬೇಕಾದಷ್ಟು ಹಲ್ಲೆಗಳು ಕೂಡ ಆಗಿರುತ್ತವೆ. ಇದರಿಂದಾಗಿ, ಈ ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಕೆಲಸ ಆಯಿತು. ಉತ್ತರದಲ್ಲಿ, "ಬೆಂಗಳೂರಿನಲ್ಲಿ 2420 ಅಂಗನವಾಡಿ ಕೇಂದ್ರಗಳಿವೆ" ಎಂದು ತಿಳಿಸಿರುತ್ತಾರೆ. ಆದರೆ, ಇಲ್ಲಿರುವ ಮಕ್ಕಳ ಸಂಖ್ಯೆ 1 ಲಕ್ಷ 95 ಸಾವಿರ ಇದೆ. ಅದರಲ್ಲಿ 1 ಲಕ್ಷ 73 ಸಾವಿರ ಮಕ್ಕಳು ಇಲ್ಲಿ ಬರುತ್ತಾರೆಂದು ಹೇಳುತ್ತಾರೆ. ಈ ಉತ್ತರ ತಪ್ಪು. ಬೆಂಗಳೂರಿನಲ್ಲಿ ಸುಮಾರು 9 ಲಕ್ಷದ 16 ಸಾವಿರ ಮಕ್ಕಳು ಇರುತ್ತಾರೆ. ಅದರಲ್ಲಿ ಗಂಡು ಮಕ್ಕಳು 4 ಲಕ್ಷದ 70 ಸಾವಿರ ಮತ್ತು ಹೆಣ್ಣು ಮಕ್ಕಳು 4 ಲಕ್ಷದ 40 ಸಾವಿರ ಇರುತ್ತಾರೆ. ಈಗ 2420 ಅಂಗನವಾಡಿ ಕೇಂದ್ರಗಳಲ್ಲಿ 1 ಲಕ್ಷ 70 ಸಾವಿರ ಮಕ್ಕಳು ಇರುತ್ತಾರೆ. ಇನ್ನೂ 10 ಲಕ್ಷ ಮಕ್ಕಳು ಇದ್ದರೆ ಎಷ್ಟು ಅಂಗನವಾಡಿ ಕೇಂದ್ರಗಳು ಬೇಕು. ಈ ಬಗ್ಗೆ ಮಾನ್ಯ ಸಚಿವರಲ್ಲಿ ಸರಿಯಾದ ಅಂಕಿ-ಸಂಖ್ಯೆಗಳು ಇರುವುದಿಲ್ಲ. ಯಾವುದೋ ಅಧಿಕಾರಿಗಳು ಕೊಟ್ಟಂತಹ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡುತ್ತಿದ್ದಾರೆ. ಎರಡನೆಯದಾಗಿ, ಆಶಾ ಕಾರ್ಯಕರ್ತೆಯರಿಗೆ 10 ಸಾವಿರ ಮತ್ತು ಸಹಾಯಕರಿಗೆ 5 ಸಾವಿರ ರೂಪಾಯಿ ಗೌರವಧನ ಕೊಡುತ್ತಾರೆ. ರಾಜ್ಯದಲ್ಲಿ ಎಲ್ಲಾ ಕಡೆ ಒಂದೇ ದರ ಇರುತ್ತದೆ. ಆದರೆ, ಬೆಂಗಳೂರಿನವರಿಗೆ ಸ್ವಲ್ಪ ಜಾಸ್ತಿ ಗೌರವಧನ ಕೊಡಬೇಕಲ್ಲವೇ? ಏಕೆಂದರೆ, ಬೆಂಗಳೂರಿನಲ್ಲಿ ಬಾಡಿಗೆ ಹಾಗೂ ಇತರ ಅಗತ್ಯ ವಸ್ತುಗಳು ಜಾಸ್ತಿ ಇರುತ್ತದೆ. ಇದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅದೇ ರೀತಿ ಅಂಗನವಾಡಿ ಕೇಂದ್ರಗಳು ಸ್ವಲ್ಪ ಅಪ್‌ಗ್ರೇಡ್ ಆಗಬೇಕು. ಇದಕ್ಕೆ ಸಂಬಂಧಪಟ್ಟಂತೆ, ಮಾನ್ಯ ಸಚಿವರು ಸ್ವಲ್ಪ ಬಿಡುವು ಮಾಡಿಕೊಂಡು, ನಮ್ಮನ್ನು ಆಹ್ವಾನಿಸಿದರೆ, ನಾವು ಕೂಡ ಬರುತ್ತೇವೆ. ಆಡಳಿತ ಪಕ್ಷದವರು ಸಹ ಬರಲಿ. ಅಂಗನವಾಡಿ ಕೇಂದ್ರಗಳಿಗೆ ಎಲ್ಲರೂ ಜೊತೆಯಲ್ಲಿ ಭೇಟಿ ನೀಡೋಣ. ಏಕೆಂದರೆ, ಅಂಗನವಾಡಿ ಕೇಂದ್ರಗಳು ಯಾವ ರೀತಿ ಇವೆ, ಅಲ್ಲಿನ ಅವ್ಯವಸ್ಥೆಗಳೇನು ಎಂಬುದನ್ನು ನೋಡಬೇಕು. ಒಂದು ಪ್ಲೇ ಹೋಮ್ ಯಾವ ರೀತಿ ಇರುತ್ತವೆ, ಆ ರೀತಿ ವ್ಯವಸ್ಥೆ ಕಲ್ಪಿಸಬೇಕಲ್ಲದೇ 10 ಲಕ್ಷ ಮಕ್ಕಳಿಗೆ ಅನುಗುಣವಾಗಿ ಅಂಗನವಾಡಿಗಳನ್ನು ಹೆಚ್ಚಿಗೆ ಮಾಡಬೇಕು.

ಬೆಂಗಳೂರಿನಲ್ಲಿರುವಂತಹ ಅಂಗನವಾಡಿ ಕಾರ್ಯಕರ್ತೆಯರಿಗೆ ಸ್ವಲ್ಪ ಜಾಸ್ತಿ ವೇತನ ನೀಡಬೇಕು. ಏಕೆಂದರೆ, ಇಲ್ಲಿ ಸಂಸಾರ ಮಾಡುವುದು ಬಹಳ ಕಷ್ಟ. ಅದೇ ರೀತಿ ಅಂಗನವಾಡಿ ಕೇಂದ್ರಗಳನ್ನು ಅಪ್‌ಗ್ರೇಡ್ ಮಾಡಬೇಕು ಹಾಗೂ ಅಧಿಕಾರಿಗಳು ಕೊಟ್ಟಂತಹ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಡಬಾರದೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕ ಸಹೋದರರು ಯಾವ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ, ಅದರ ಬಗ್ಗೆ ನಾನು ಸಹ ಅದೇ ಕಳಕಳಿ ಹೊಂದಿದ್ದು, ಆ ವಿಚಾರದಲ್ಲಿ ಏನು ಮಾಡಬೇಕೆಂಬ ಬಗ್ಗೆ ಅವರ ಜೊತೆ ಕೂಡ ಚರ್ಚೆ ಮಾಡುತ್ತೇನೆ. ಆದರೆ, ಈ ಪ್ರಶ್ನೆಯಲ್ಲಿ ಆಶಾ ಕಾರ್ಯಕರ್ತೆಯರ ಬಗ್ಗೆ ಅವರು ಪ್ರಶ್ನೆ ಕೇಳಿದ್ದಾರೆ. ಆಶಾ ಕಾರ್ಯಕರ್ತೆಯರು ಆರೋಗ್ಯ ಕೇಂದ್ರದಡಿಯಲ್ಲಿ ಬರುತ್ತಾರೆ. ಅಂಗನವಾಡಿ ಕಾರ್ಯಕರ್ತೆಯರು ನಮ್ಮ ಇಲಾಖೆಯ ವ್ಯಾಪ್ತಿಗೆ ಬರುತ್ತಾರೆ. ಸುಮಾರು 2420 ಅಂಗನವಾಡಿ ಕೇಂದ್ರಗಳಿಗೆ 6 ಯೋಜನೆಗಳಲ್ಲಿ ನಾವು ಬೇರೆ ಬೇರೆ ಸೌಲಭ್ಯಗಳನ್ನು ಕಲ್ಪಿಸಿ ಕೊಡುತ್ತಿದ್ದೇವೆ. ಅಂಗನವಾಡಿ ಕಾರ್ಯಕರ್ತೆಯರ 55 ಹುದ್ದೆಗಳು ಖಾಲಿ ಇರುವುದು ನಿಜ. ಅದೇ ರೀತಿ 209 ಅಂಗನವಾಡಿ ಸಹಾಯಕಿ ಹುದ್ದೆಗಳು ಕೂಡ ಖಾಲಿ ಇರುತ್ತವೆ. ಆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇರುತ್ತದೆ. ಸದರಿ ಹುದ್ದೆ ಭರ್ತಿಗಾಗಿ ಈಗಾಗಲೇ ನಾವು ನಿಯಮಾನುಸಾರ ಅರ್ಜಿ ಕರೆದಿದ್ದೇವೆ. ಅದರಂತೆ, ಅರ್ಜಿಗಳು ಬಂದಿದ್ದು, ಜಿಲ್ಲಾಧಿಕಾರಿಯವರು ಒಂದು ದಿನಾಂಕ ನಿಗದಿಪಡಿಸಿದ ನಂತರ ಆ ಹುದ್ದೆಗಳನ್ನು ಭರ್ತಿ ಮಾಡುವಂತಹ ಕೆಲಸ ಮಾಡುತ್ತೇವೆ. ಇದರ ಜೊತೆಗೆ, ನಗರ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ಅಂಗನವಾಡಿ ಕಾರ್ಯಕರ್ತೆಯರಿಗೆ ಕೊಡುವಂತಹ ಗೌರವಧನ ಕಡಿಮೆಯಾಗುತ್ತಿದೆ ಎಂದು ಹೇಳಿರುತ್ತಾರೆ. ಆದರೆ, ಕೆಲವೊಂದು ಸಮಸ್ಯೆಗಳು ಇದರಲ್ಲಿರುತ್ತವೆ. ಅಂದರೆ, ಲಿಮಿಟೆಡ್ ಏರಿಯಾದಲ್ಲಿ ಅಂಗನವಾಡಿ ಕಾರ್ಯಕರ್ತೆಯರನ್ನು ತೆಗೆದುಕೊಳ್ಳಬೇಕೆಂದು ನಿಯಮ ಇದೆ. ಈ ವಿಷಯ ನನ್ನ ಗಮನಕ್ಕೂ ಸಹ ಬಂದಿದ್ದು, ನಾನು ಇದನ್ನು ಪರಿಶೀಲನೆ ಮಾಡುತ್ತೇನೆ. ಅದರ ಜೊತೆಗೆ ಎಲ್ಲರ ಸಲಹೆ ಸೂಚನೆಗಳನ್ನು ಕೂಡ ತೆಗೆದುಕೊಂಡು, ನಗರ ಪ್ರದೇಶದ ಅಂಗನವಾಡಿ ಕಾರ್ಯಕರ್ತೆಯರಿಗೆ ವೇತನ ಹೆಚ್ಚು ಮಾಡುವುದಕ್ಕೆ ಏನು ಮಾಡಬೇಕೆಂಬ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಕೋವಿಡ್–19 ಸಂದರ್ಭದಲ್ಲಿ ನಮ್ಮ ಇಲಾಖೆಯ ಅಧಿಕಾರಿಗಳ ಜೊತೆಗೆ, ಆಶಾ ಕಾರ್ಯಕರ್ತೆಯರು ಮತ್ತು ಅದರಲ್ಲಿ ವಿಶೇಷವಾಗಿ ಅಂಗನವಾಡಿ ಕಾರ್ಯಕರ್ತೆಯರು ಮನೆ ಮನೆಗೆ ಹೋಗಿ ಸರ್ವೆ ಕೆಲಸ ಮಾಡಿ ಒಳ್ಳೆಯ ಸೇವೆ ಸಲ್ಲಿಸಿರುತ್ತಾರೆ. ಕೋವಿಡ್–19 ಸಾಂಕ್ರಾಮಿಕ ರೋಗದಿಂದ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಮಾರು 20 ಜನ ಅಂಗನವಾಡಿ ಕಾರ್ಯಕರ್ತೆಯರು ನಿಧನರಾಗಿರುತ್ತಾರೆ. ಅವರಿಗೆ ಪರಿಹಾರವಾಗಿ 30 ಲಕ್ಷ ರೂಪಾಯಿಗಳ ಪರಿಹಾರ ಹಣ ನೀಡುವ ಕಾರ್ಯ ನಡೆಯುತ್ತಿದೆ.

ಅಂಗನವಾಡಿ ಕೇಂದ್ರಗಳ ಅಪ್‌ಗ್ರೇಡ್ ಬಗ್ಗೆ ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆ ಕೊಟ್ಟಿರುತ್ತಾರೆ. ಈ ಕೆಲಸವನ್ನು ಕೇವಲ ಸರ್ಕಾರದಿಂದ ಮಾಡುವುದಕ್ಕಿಂತ, ನಾವು ಸಿ.ಎಸ್.ಆರ್. ಫಂಡ್‌ಗಳಿಗೆ ಮೋರೆ ಹೋಗುತ್ತಿದ್ದೇವೆ. ಅದರಂತೆ, ಅನೇಕ ಎನ್.ಜಿ.ಓ.ಗಳು ಸಹ ಇದರಲ್ಲಿ ಮುಂದೆ ಬರುತ್ತಿದ್ದಾರೆ. ಕೆಲವೊಂದು ಕಡೆ ಪೈಲೆಟ್ ಪ್ರಾಜೆಕ್ಟ್ ಆಗಿ ಅಂಗನವಾಡಿ ಕೇಂದ್ರಗಳು, ಬಾಲಸ್ನೇಹಿ ಕೇಂದ್ರಗಳಾಗಿರಬೇಕೆಂದು ಕೆಲವರು ಟಿ.ವಿ.ಗಳನ್ನು ಕೊಡುಗೆಯಾಗಿ ಕೊಟ್ಟಿರುತ್ತಾರೆ. ಇದರಿಂದಾಗಿ, ದೂರದರ್ಶನದ ಕಾರ್ಯಕ್ರಮಗಳ ಮುಖಾಂತರ ಮಕ್ಕಳಿಗೆ ಕಲಿಸುವಂತಹ ಪ್ರಯತ್ನ ಮಾಡುತ್ತಿದ್ದೇವೆ. ಕೆಲವೊಂದು ಸಂಸ್ಥೆಯವರು, ಕೆಲವು ಶಾಸಕರು, ಕೆಲವು ಎಂ.ಪಿ.ಗಳು ಸುಂದರವಾದಂತಹ ಬೆಂಚುಗಳು ಮತ್ತು ಚೇರ್‌ಗಳನ್ನು ಕೊಟ್ಟಿರುತ್ತಾರೆ. ಇನ್ನು ಕೆಲವು ಕಡೆ ಸ್ಥಳೀಯವಾಗಿ ಕಾಯಿ-ಪಲ್ಯೆಗಳನ್ನು ಬೆಳೆಯುವಂತಹ ಕೃಷಿಕರು 'ಅಕ್ಷಯ ಪಾತ್ರೆ' ಎಂದು ಪ್ರತಿದಿನ ಅಂಗನವಾಡಿ ಕೇಂದ್ರಗಳಿಗೆ ಕಾಯಿ-ಪಲ್ಯೆಗಳನ್ನು ತಂದುಕೊಡುತ್ತಿದ್ದಾರೆ. ಇದರ ಜೊತೆಗೆ, ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಅಂಗನವಾಡಿ ಕಟ್ಟಡಗಳು ಇರಬಹುದು ಅಥವಾ ಅಲ್ಲಿರುವಂತಹ ವ್ಯವಸ್ಥೆ ಇರಬಹುದು. ಅವುಗಳನ್ನು ನಾವು ಎಲ್ಲಾ ಕಡೆಯಿಂದಲೂ ಪ್ರಯತ್ನ ಮಾಡಿ, ಅದನ್ನು ಅಪ್‌ಗ್ರೇಡ್ ಮಾಡುವಂತಹ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕಾಗಿ, ಬಹಳಷ್ಟು ಸಂಘ-ಸಂಸ್ಥೆಗಳು ನಮ್ಮ ಜೊತೆ ಕೈಜೋಡಿಸುತ್ತಿವೆ. ಈ ಕೋವಿಡ್-19 ಪರಿಸ್ಥಿತಿಯಲ್ಲಿ ಈ ಕೆಲಸಕ್ಕೆ ಸ್ವಲ್ಪ ಹಿನ್ನೆಡೆಯಾಗಿದೆ. ಆದಾಗ್ಯೂ, ಆ ಕೆಲಸವನ್ನು ಪೂರ್ಣಗೊಳಿಸುವ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅಂಗನವಾಡಿ ಕೇಂದ್ರಗಳ ಸಂಖ್ಯೆಗಳನ್ನು ಜಾಸ್ತಿ ಮಾಡುವ ಬಗ್ಗೆ ಉತ್ತರ ನೀಡಿರುವುದಿಲ್ಲ. ಏಕೆಂದರೆ, ಪ್ರಸ್ತುತ 2420 ಅಂಗನವಾಡಿ ಕೇಂದ್ರಗಳಲ್ಲಿ ಸುಮಾರು 1 ಲಕ್ಷದ 70 ಸಾವಿರ ಮಕ್ಕಳಿದ್ದಾರೆ ಎಂದು ಸರ್ಕಾರ ಮಾಹಿತಿ ಕೊಡುತ್ತದೆ. ಆದರೆ, ನಮ್ಮ ರಾಜ್ಯದಲ್ಲಿ 9 ಲಕ್ಷ ಮಕ್ಕಳಿದ್ದಾರೆ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:-** ಮಾನ್ಯ ಸಭಾಪತಿಯವರೇ, ಅಂಗನವಾಡಿ ಕೇಂದ್ರಗಳನ್ನು ಹೆಚ್ಚು ಮಾಡುವುದಕ್ಕೆ ಸೂಕ್ತ ಕ್ರಮ ಕೂಡ ತೆಗೆದುಕೊಂಡಿದ್ದೇವೆ. ಈಗಾಗಲೇ ನಗರ ಪ್ರದೇಶದಲ್ಲಿ ಸುಮಾರು 2 ಸಾವಿರ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭ ಮಾಡಬೇಕೆಂದು ಹೇಳಿ ಕೇಂದ್ರಕ್ಕೆ; ಏಕೆಂದರೆ, ಇದು ಕೇಂದ್ರ ಸರ್ಕಾರದ ಯೋಜನೆಯಾಗಿರುವುದರಿಂದ, ಪ್ರಸ್ತಾವನೆಯನ್ನು ಕೇಂದ್ರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸರ್ಕಾರಕ್ಕೆ ಕಳುಹಿಸಿದ್ದೇವೆ. ಜೊತೆಗೆ, ಅದರ ಫಾಲೋಅಪ್ ಕೂಡ ಮಾಡುತ್ತಿದ್ದೇವೆ. ಆದಷ್ಟು ಬೇಗ ಮಂಜೂರಾತಿ ಪಡೆದು ಅಂಗನವಾಡಿ ಕೇಂದ್ರಗಳನ್ನು ಹೆಚ್ಚು ಮಾಡುತ್ತೇವೆ.

**(ಮುಂದು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(188) 05.02.2021 12.10 ವೈಎಲ್–ಜಿಆರ್**

**ಪ್ರಶ್ನೆ ಸಂಖ್ಯೆ: 526**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಬಹಳ ಸವಿಸ್ತಾರವಾದ ಉತ್ತರವು ಇಲಾಖೆಯಿಂದ ಬಂದಿದ್ದೆ. ನಿನ್ನೆ ದಿವಸ ಈ ವಿಚಾರಕ್ಕೆ ಸಂಬಂಧಿಸಿದಂತೆ ಗಮನ ಸೆಳೆಯುವುದರಲ್ಲಿ ಸಹ ಉಲ್ಲೇಖ ಮಾಡಿದ್ದೆನು. ಆದರೆ, ಸಮಯಾವಕಾಶ ಕೇಳಿದ್ದರಿಂದ ಉತ್ತರ ಬಂದಿರಲಿಲ್ಲ. ನನ್ನ ವಿನಂತಿಯೇನೆಂದರೆ, ನಮ್ಮ ರಾಜ್ಯದಲ್ಲಿ 60 ರಿಂದ 70 ಲಕ್ಷ ನೇಕಾರರಿದ್ದಾರೆ. ಕುಲಕಸುಬು ಮಾಡುವಂಥವರೇ ಸುಮಾರು ಒಂದೂವರೆ ಲಕ್ಷದಷ್ಟು ನೇಕಾರಿರಬಹುದು. ಮಾನ್ಯ ಸಚಿವರು ಒದಗಿಸಿರುವ ಉತ್ತರದಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯಡಿ ಬರುವಂಥ ಎರಡು ನಿಗಮಗಳನ್ನು ಉಲ್ಲೇಖಿಸಿದ್ದಾರೆ. ಈ ಹಿಂದೆ ಅಂದರೆ, 25, 30 ವರ್ಷಗಳ ಹಿಂದೆ ಆ ಉದ್ಯೋಗವನ್ನು ಮಾಡಿದ್ದರಿಂದ ಸ್ವತಃ ನಾವೇ ಕೈಮಗ್ಗದಿಂದ ತಯಾರಾದಂಥ ಬಟ್ಟೆಗಳನ್ನು ರಫ್ತು ಮಾಡುತ್ತಿದ್ದೆವು. ಆದರೆ, ಇವತ್ತಿನ ದಿವಸ ನೇಕಾರರ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ, ಕರ್ನಾಟಕ ಜವಳಿ ಅಭಿವೃದ್ಧಿ ನಿಗಮದ ಅಡಿಯಲ್ಲಿ ಸುಮಾರು 30 ಸಾವಿರದಷ್ಟು ವಿದ್ಯುತ್ ಮಗ್ಗಗಳ ನೋಂದಣಿಯಾಗಿದೆ. ಅವರು ಪಾಲಿಯಸ್ಟರ್ ಸೀರೆಗಳನ್ನು ಉತ್ಪತ್ತಿ ಮಾಡುತ್ತಾರೆ. ಆದರೆ, ಅದನ್ನು ಮಾರಾಟ ಮಾಡುವುದಕ್ಕೆ ವರ್ಷವೀಡಿ ಸಮಯ ಬೇಕಾಗುತ್ತದೆ. ಅದಕ್ಕೆ ಸಂಬಂಧಿಸಿದಂತೆ ಮಾನ್ಯ ಸಚಿವರು 'ವಿಭಿನ್ನ ವಿನ್ಯಾಸಗಳನ್ನು ಹೊಂದಿರುವ ಸೀರೆ ಹಾಗೂ ಇತರೆ ಜವಳಿ ವಸ್ತ್ರಗಳು ಮಾರುಕಟ್ಟೆಯಲ್ಲಿ ಕಡಿಮೆ ದರ ಲಭ್ಯವಿರುವ ಕಾರಣ ಕೈಮಗ್ಗದ ಸೀರೆ ಹಾಗೂ ಜವಳಿ ವಸ್ತುಗಳಿಗೆ ಅವಕಾಶ ಕಡಿಮೆಯಾಗುತ್ತಿದೆ' ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಜೊತೆಗೆ ಶಾಲಾ ಮಕ್ಕಳಿಗೆ ಸಮವಸ್ತ್ರ ನೀಡುವುದನ್ನು ಜವಳಿ ಇಲಾಖೆಯ ಎರಡು ನಿಗಮಕ್ಕೆ ನೀಡಿದ್ದೇವೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ನಮ್ಮ ಸರ್ಕಾರದಿಂದ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪೌರಾಡಳಿತ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಅಗ್ನಿಶಾಮಕ ದಳ ಮತ್ತು ವಿದ್ಯುತ್ ಈ ರೀತಿಯಾಗಿ ಸರ್ಕಾರದ ಅನೇಕ ಇಲಾಖೆಗಳಿಗೆ ಸಮವಸ್ತ್ರಕ್ಕಾಗಿ ಸುಮಾರು ರೂ.03 ಕೋಟಿಗಿಂತ ಹೆಚ್ಚು ಮೀಟರ್ ಬಟ್ಟೆಗಳ ಅವಶ್ಯಕತೆ ಇದೆ. ನಮ್ಮಲ್ಲಿ ಒಂದು ಗಾದೆ ಮಾತಿದೆ. ಅದೇನೆಂದರೆ, 'ಕಂಕುಳಲ್ಲಿ ಮಗುವನ್ನು ಇಟ್ಟುಕೊಂಡು ಊರೆಲ್ಲಾ ಹುಡುಕಿದರು' ಎಂದು ಮಾತನಾಡುತ್ತಾರೆ. ಹಾಗೆಯೇ ಇಲಾಖೆಯು ಇವತ್ತು ಸಮವಸ್ತ್ರವನ್ನು ಒದಗಿಸಿದ್ದೇವೆ ಎಂದು ಉತ್ತರದಲ್ಲಿ ಉಲ್ಲೇಖ ಮಾಡಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಲಾ ಮಕ್ಕಳ ಸಮವಸ್ತ್ರಕ್ಕೆ ಒಂದೂವರೆ ಕೋಟಿ ಮೀಟರ್‌ನಷ್ಟು ಬಟ್ಟೆಯ ಅವಶ್ಯಕತೆ ಇದೆ. ಆದರೆ, 1997–98ನೇ ಸಾಲಿನಲ್ಲಿ ಸುಮ್ಮನೆ ನಾಲ್ಕು ಕೋಟಿ ಎಪ್ಪತ್ತೊಂಬತ್ತು ಸಾವಿರ ಮೀಟರ್‌ನಷ್ಟು ಬಟ್ಟೆ ಒದಗಿಸಲು ಈ ಇಲಾಖೆಗೆ ಅವಕಾಶ ಕಲ್ಪಿಸಲಾಗಿದೆ. ಆನಂತರ ಎಲ್ಲಾ ಅಂಕಿ–ಅಂಶಗಳನ್ನು ನೀಡಿದ್ದಾರೆ. 2004–2005ನೇ ಸಾಲಿನಲ್ಲಿ ಅರವತ್ತು ಲಕ್ಷದಷ್ಟು ನೀಡಿದ್ದಾರೆ. ನಂತರ ಎಲ್ಲವೂ ಇಳಿಮುಖಗೊಂಡಿದೆ. ಅದರಲ್ಲಿಯು 2019–20ನೇ ಸಾಲಿನಲ್ಲಿ ಹನ್ನೊಂದು ಲಕ್ಷದ ಎಪ್ಪತ್ತೆರಡು ಸಾವಿರ ಮೀಟರ್‌ಗಳಷ್ಟು ಆರ್ಡರ್‌ರನ್ನು ಈ ಇಲಾಖೆಗೆ ನೀಡಿದ್ದಾರೆ. ನನ್ನ ವಿನಂತಿಯೇನೆಂದರೆ, ಇಲ್ಲಿಯ ನೇಕಾರರು ಬದುಕಬೇಕು. ಹಾಗಾಗಿ ಇಲ್ಲಿಯ ನೇಕಾರರಿಗೆ ಒಳ್ಳೆಯದಾಗಬೇಕೆಂದರೆ, ಟೆಂಡರ್ ಕರೆದು ಮಹಾರಾಷ್ಟ್ರ, ಗುಜರಾತಿನಿಂದ ಬಟ್ಟೆಗಳನ್ನು ತರಿಸಿಕೊಳ್ಳುವ ಬದಲು, ನಮ್ಮ ನೇಕಾರರಿಗೆ ಅನುಕೂಲವಾಗಬೇಕೆಂದರೆ, ಈ ಹಲವಾರು ನಿಗಮ ಮಂಡಳಿಗೆ ಅವಶ್ಯಕವಾಗಿರುವ ಮೂರು ಕೋಟಿ ಮೀಟರ್‌ನಷ್ಟು ಬಟ್ಟೆಗಳನ್ನು ತಯಾರಿಸಲು ನಮ್ಮ ಸರ್ಕಾರ ನೇಕಾರರಿಗೆ ಆರ್ಡರ್ ಕೊಡಬೇಕು. ನಮ್ಮ ನೇಕಾರರಿಗೂ ತಯಾರಿಸುವಂತಹ ಸಾಮರ್ಥ್ಯ ಇದೆ. ಈಗಾಗಲೇ ತಿಳಿಸಿರುವ ಇಲಾಖೆಗೆ ಆ ಅವಕಾಶವನ್ನು ಕಲ್ಪಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಲಿಚ್ಛಿಸುತ್ತೇನೆ.

**ಶ್ರೀ ಶ್ರೀಮಂತ ಬಾಳಾಸಾಹೇಬ ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ನೀಡಿರುವ ಸೂಚನೆಯನ್ನು ಆರ್ಥಿಕವಾಗಿ ಸ್ವಾಗತಿಸುತ್ತೇನೆ. ಈ ಜವಳಿ ಉದ್ಯೋಗ ಅತೀ ಕಷ್ಟದ ಪರಿಸ್ಥಿತಿಯಲ್ಲಿದ್ದು, profit margin ಬಹಳ ಕಡಿಮೆ ಇದೆ. Thin margin ನಡೆಯುವಂಥ ಉದ್ಯೋಗ ಇದಾಗಿದೆ. ಅದರಲ್ಲಿಯು ಈ ಉದ್ಯೋಗವನ್ನು ಅವಲಂಭಿಸಿರತಕ್ಕಂಥ ನಮ್ಮ ನೌಕರರು ಕೋವಿಡ್–19 ನಿಂದಾಗಿ ಸಂಪೂರ್ಣವಾಗಿ ಹಾಳಾಗಿದ್ದಾರೆ. ರಾಜ್ಯ ಸರ್ಕಾರದಿಂದ ಈ ಉದ್ಯೋಗಕ್ಕೆ ಹೆಚ್ಚಿನ ಆರ್ಥಿಕ ನೆರವು ನೀಡಬೇಕಾಗಿದೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿ 'ವಿದ್ಯಾ ವಿಕಾಸ ಯೋಜನೆ' ಅಡಿ ಸುಮಾರು 20 ವರ್ಷಗಳಿಂದ ನಮ್ಮ ಇಲಾಖೆ ವತಿಯಿಂದ Handlooms Board ಆಗಲಿ ಅಥವಾ ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮದಿಂದಾಗಲಿ ಸುಮಾರು 60 ರಿಂದ 70 ಲಕ್ಷದಷ್ಟು ಮೀಟರ್ ಬಟ್ಟೆಗಳನ್ನು ಖರೀದಿ ಮಾಡಿ, ಸಮವಸ್ತ್ರವನ್ನು ಪೂರೈಕೆ ಮಾಡುತ್ತಿದ್ದೇವೆ. ಆದರೂ, ಇದರಿಂದ ಸಮಧಾನಕರವಾಗಿಲ್ಲ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ಚರ್ಚೆ ಮಾಡಿ, ನಮ್ಮ ರಾಜ್ಯಕ್ಕೆ ಬೇರೆ–ಬೇರೆ ರಾಜ್ಯದ ಇಲಾಖೆಯವರು ಪೂರೈಸುವ ಸಮವಸ್ತ್ರಗಳೇನಿವೆ, ಆ ಎಲ್ಲಾ ಸಮವಸ್ತ್ರಗಳನ್ನು ನಮ್ಮ Department of Handlooms and Textiles ವತಿಯಿಂದ ಖರೀದಿಸಿ, ನಮ್ಮ ರಾಜ್ಯದಲ್ಲಿರುವ ಗೃಹ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೈಗಾರಿಕೆಗಳ ಮೂಲಕವೇ ಜವಳಿ ಉತ್ಪನ್ನವನ್ನು ಮಾಡಿ ಸಮವಸ್ತ್ರವನ್ನು ಒದಗಿಸಿದರೆ, ಸುಮಾರು 3 ತಿಂಗಳುಗಳಿಗೆ ಆಗುವಷ್ಟು ಕೆಲಸವನ್ನು ನಮ್ಮ ನೇಕಾರರಿಗೆ ಕಲ್ಪಿಸುವಂಥದಾಗುತ್ತದೆ. ಆ ನಿಟ್ಟಿನಲ್ಲಿ ಎಲ್ಲವನ್ನೂ ವಿಚಾರ ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ಪರಿಶೀಲನೆ ಮಾಡಲು ಒಪ್ಪಿಗೆ ನೀಡಿದ್ದಾರೆ. ಅದಕ್ಕೆ ಅನುಗುಣವಾಗಿ ನಾವು ಬೇರೆ ರಾಜ್ಯಗಳಲ್ಲಿ ಯಾವ ರೀತಿ ಸಮವಸ್ತ್ರಗಳನ್ನು ತಯಾರಿಸುತ್ತಾರೆ ಎಂಬುದನ್ನು ನೋಡುವುದಕ್ಕಾಗಿ ಜವಳಿ ಆಯುಕ್ತರ ನೇತೃತ್ವದಲ್ಲಿ ಒಂದು ತಂಡವನ್ನು ತಮಿಳುನಾಡಿಗೆ ಕಳುಹಿಸಿದ್ದೆವು. ಅವರು ಎಲ್ಲವನ್ನೂ ಸರ್ವೇ ಮಾಡಿ, ಈಗಾಗಲೇ ವಾಪಸ್ಸು ಬಂದಿದ್ದು, 2–3 ದಿವಸಗಳಲ್ಲಿ ವರದಿ ನೀಡಬಹುದು. ಅದೇ ರೀತಿ ಗುಜರಾಜ್, ಮಹಾರಾಷ್ಟ್ರ, ಎಲ್ಲಾ ರಾಜ್ಯಗಳಲ್ಲಿ ಯಾವ ರೀತಿ ಸಮವಸ್ತ್ರ ಪೂರೈಕೆ ಮಾಡುತ್ತಾರೆ ಎಂಬುದನ್ನು ನೋಡಿ ಮಾಡುತ್ತೇವೆ. ಈ ಯೋಜನೆಗೆ ಸುಮಾರು 3 ರಿಂದ 4 ಕೋಟಿ ಮೀಟರ್‌ನಷ್ಟು ಸಮವಸ್ತ್ರ ಅವಶ್ಯಕತೆ ಇದೆ. ಬೇರೆ–ಬೇರೆ ನಿಗಮಗಳಿಂದ ಬಟ್ಟೆಗಳನ್ನು ಖರೀದಿಸಿ, ನಮ್ಮ ಇಲಾಖೆಗೆ ಒದಗಿಸಿದರೆ ಬಹಳ ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡಿದಂತಾಗುತ್ತದೆ. ಆ ನಿಟ್ಟಿನಲ್ಲಿ ನಾವು ಕರ್ತವ್ಯ ನಿರ್ವಹಿಸುತ್ತಿದ್ದೇವೆ. ಹಾಗೆಯೇ ಮಾನ್ಯ ಸದಸ್ಯರು ನೀಡಿರುವ ಸೂಚನೆ ಪ್ರಕಾರ ನಾವು ಕರ್ತವ್ಯ ನಿರ್ವಹಿಸುತ್ತೇವೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಳ್ಳೆಯ ಉತ್ತರವನ್ನು ನೀಡಿದ್ದಾರೆ, ಧನ್ಯವಾದಗಳು. ಆದರೆ, ತಮಿಳುನಾಡಿನಲ್ಲಿ ಸರ್ಕಾರವು ಅವಶ್ಯಕತೆ ಇರುವ ಎಲ್ಲಾ ಸಮವಸ್ತ್ರಗಳನ್ನು ಇಲಾಖೆಯಿಂದ ತರಿಸಿಕೊಳ್ಳುತ್ತಿದೆ. ಆದರೆ, ನಮ್ಮ ರಾಜ್ಯದಲ್ಲಿ ಟೆಂಡರ್ ಕರೆಯುತ್ತಾರೆ, ಮಹಾರಾಷ್ಟ್ರ ಹಾಗೂ ಬೇರೆ–ಬೇರೆ ರಾಜ್ಯಗಳಿಂದ ಸಮವಸ್ತ್ರಗಳನ್ನು ಖರೀದಿಸುತ್ತಾರೆ. ಇದರಿಂದಾಗಿ ನಮ್ಮ ನೇಕಾರರಿಗೆ ಲಾಭವಾಗುತ್ತಿಲ್ಲ.

**ಶ್ರೀ ಶ್ರೀಮಂತ ಬಾಳಾಸಾಹೇಬ ಪಾಟೀಲ್:–** ಮಾನ್ಯ ಸಭಾಪತಿಯವರೇ, ಬೇರೆ ರಾಜ್ಯಗಳಿಂದ ಸಮವಸ್ತ್ರಗಳನ್ನು ಖರೀದಿಸಿ, ನಮ್ಮ ರಾಜ್ಯಕ್ಕೆ ತಂದು ಪೂರೈಕೆ ಮಾಡುತ್ತಾರೆಯೋ ಅದು ಬಹಳ ದೊಡ್ಡ ತಪ್ಪಾಗಿದ್ದು, ಅದನ್ನು ಬಂದ್ ಮಾಡುತ್ತಿದ್ದೇವೆ. ಮುಂದಿನ ವರ್ಷದಿಂದ ಬೇರೆ ರಾಜ್ಯಗಳಿಂದ ಖರೀದಿಸುವುದನ್ನು ಬಿಟ್ಟು, ನಮ್ಮ ರಾಜ್ಯದ ಉದ್ಯೋಗದಾತರಿಂದಲೇ ಸಮವಸ್ತ್ರವನ್ನು ಖರೀದಿಸಿ ಒದಗಿಸುವಂಥ ಕೆಲಸ ಮಾಡುತ್ತೇವೆ. ಅದರಲ್ಲಿ ಯಾವುದೇ ಸಂಶಯ ಬೇಡ. ಈ ವರ್ಷದಿಂದ ಅದರ ಕಡೆ ಗಮನಹರಿಸುತ್ತೇವೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇದರಿಂದಾಗಿ ಲಕ್ಷಾಂತರ ನೇಕಾರರಿಗೆ ಉದ್ಯೋಗ ಕಲ್ಪಿಸಿದಂತಾಗುತ್ತದೆ. ಈ ಕೆಲಸ ಖಂಡಿತವಾಗಿ ಆಗಲೇಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬೇರೆ ರಾಜ್ಯಗಳಿಂದ ಸಮವಸ್ತ್ರಗಳನ್ನು ಖರೀದಿಸುವುದನ್ನು ನಿಲ್ಲಿಸುತ್ತೇವೆ ಎಂದು ಹೇಳಿದ್ದಾರೆ. ಆದರೆ, ಶೇ.90 ರಷ್ಟು ಸಮವಸ್ತ್ರಗಳು ಬೇರೆ ರಾಜ್ಯದಿಂದಲೇ ಬರುತ್ತಿದೆ. ಸಾಕಷ್ಟು ಸಂಖ್ಯೆ ನೇಕಾರರು ನಮ್ಮ ರಾಜ್ಯದಲ್ಲಿದ್ದಾರೆ. ಪಾಪ ಅವರಿಗೆ ಉದ್ಯೋಗವಿಲ್ಲ, ಕಚ್ಚಾಮಾಲು ಇಲ್ಲ. ಅವರಿಗೆ ಮಜೂರಿ ಸಿಗುತ್ತಿಲ್ಲ. ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿದ್ದಾರೆ. ನಮ್ಮ ರಾಜ್ಯದಲ್ಲಿಯೇ 3 ನಿಗಮಗಳಿದ್ದು, ಮಾನ್ಯ ಸಚಿವರು ಮನಸ್ಸು ಮಾಡಿ, ನಮ್ಮ ರಾಜ್ಯದ ನೇಕಾರರಿಗೆ ಅಲ್ಲಿ ಉದ್ಯೋಗ ಕಲ್ಪಿಸಿದರೆ, ಬಹಳ ದೊಡ್ಡ ಉಪಕಾರ ಮಾಡಿದಂತಾಗುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಅಂಗನವಾಡಿ ಕಾರ್ಯಕರ್ತರಿಗೆ ಸೀರೆಗಳು ಬೇಕಾಗಿದ್ದು, ಅದೆಲ್ಲವನ್ನೂ ಅವರ ಹತ್ತಿರ ಖರೀದಿಸಬಹುದು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಏನು ಆಶ್ವಾಸನೆ ನೀಡಿದ್ದಾರೆ, ಅದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕೆಂಬುದಷ್ಟೇ ನಮ್ಮ ಮನವಿ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ (ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ):–** ಮಾನ್ಯ ಸಭಾಪತಿಯವರೇ, ಮಾನ್ಯ ಭಾರತಿ ಅಕ್ಕನವರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದು, ಈಗಾಗಲೇ ಸಹೋದರರಾದಂಥ ಮಾನ್ಯ ಸಚಿವರು ಸಾಕಷ್ಟು ಉತ್ತರವನ್ನು ನೀಡಿದ್ದಾರೆ. ಈ ಸಲ ನಮ್ಮ ಅಂಗನವಾಡಿ ಕಾರ್ಯಕರ್ತೆಯರಿಗೆ ಸಮವಸ್ತ್ರಗಳನ್ನು ಸರಬರಾಜು ಮಾಡುತ್ತಿದ್ದೇವೆ, ಅದಕ್ಕೆ ಸಂಬಂಧಿಸಿದಂತೆ ಸುಮಾರು ಎರಡೂವರೆ ಲಕ್ಷದಷ್ಟು ಸೀರೆಗಳನ್ನು ಖರೀದಿಸುತ್ತಿದ್ದೇವೆ. ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ನೇಕಾರರಿಂದಲೇ ಖರೀದಿಸಬೇಕೆಂದು ತಿಳಿಸಲಾಗಿದೆ. ಮೊದಲು pilot project ಆಗಿ ಈ ವರ್ಷ ಮಾಡುತ್ತೇವೆ. ಏಕೆಂದರೆ, ನಮಗೆ ಬೇಕಾಗಿರುವಂಥ ಸೀರೆಗಳು ಒಂದೇ ಬಣ್ಣದಾಗಿರಬೇಕು, ಒಂದೇ ರೀತಿ ಇರಬೇಕಾಗಿರುವುದರಿಂದ ಸಣ್ಣ–ಸಣ್ಣ ನೇಕಾರರಿಗೆ ಆ ರೀತಿ ತಯಾರಿಸಲು ಸಾಧ್ಯವಾಗುತ್ತದೆಯೇ ಎಂಬುದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಅದನ್ನು ಈ ಸಲ pilot project ಗಾಗಿ ತೆಗೆದುಕೊಳ್ಳಲಾಗುವುದು. ಅದು ಯಶಸ್ವಿಯಾದರೆ, ಮುಂದೆ ಎಲ್ಲಾ ಕಡೆಯಿಂದ ಖರೀದಿಸುವಂತಾಗುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ನೇಕಾರರಿಗೆ ನೀಡುವುದಾದರೆ ಜವಳಿ ಇಲಾಖೆಯಿಂದ ಒದಗಿಸುವಂಥ ಕೆಲಸವಾಗಬೇಕು. ಇಲ್ಲದಿದ್ದರೆ ಯಾರೋ ಒಬ್ಬರು ಟೆಂಡರ್

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ತೆಗೆದುಕೊಳ್ಳುವುದರಿಂದ ಯಾರಿಗೂ ಉದ್ಯೋಗ ಸಿಗುವುದಿಲ್ಲ. ಯಾವ ನೇಕಾರರು ಇಲಾಖೆಯಡಿ ನೋಂದಣಿಯಾಗಿರುತ್ತಾರೆಯೋ, ಅವರಿಗೆ ಅನುಕೂಲವಾಗುತ್ತದೆ. ಈ ನೇಕಾರರಿಗೆ ಒದಗಿಸುತ್ತೇವೆ ಎಂದು ಏನು ಹೇಳುತ್ತಾರೆಯೋ, ಅದು ಹೊರ ರಾಜ್ಯಕ್ಕೆ ಹೋಗುತ್ತದೆ. ಆದ್ದರಿಂದ ಟೆಂಡರ್ ಕರೆಯುವುದಲ್ಲ, ಇಲಾಖೆಗೆ ನೀಡಬೇಕು. ಇಲಾಖೆಯಿಂದ ನಮ್ಮ ನೇಕಾರರಿಗೆ ಮಾಡಿಕೊಡುವಂಥ ಕೆಲಸ ಮಾಡಬೇಕು. ಆ ಮೇಲೆ ವರ್ಷದ ಅಂತ್ಯದಲ್ಲಿ ಅಂದರೆ, ಡಿಸೆಂಬರ್ ಮಾಹೆಯಲ್ಲಿ ಒದಗಿಸಿ, ಫೆಬ್ರವರಿಗೆ ನೀಡಿ ಎಂದು ಒತ್ತಡ ಹಾಕುವಂಥ ಕೆಲಸ ಆಗಬಾರದು. ಆ ಮಗ್ಗಕ್ಕೆ ಅಚ್ಚು ಬದಲಾವಣೆ ಮಾಡಬೇಕು. ಹಾಗಾಗಿ ಪೂರ್ವ ಸಿದ್ಧತೆ ಮಾಡಿಕೊಳ್ಳುವ ಮೊದಲೇ ಈ ವಿಷಯವನ್ನು ನೇಕಾರರಿಗೆ ತಿಳಿಸಬೇಕು. ಆಗ ಮಾತ್ರ ಇದು ಯಶಸ್ವಿ ಹೊಂದಲು ಸಾಧ್ಯ.

**ಹಂಗಾಮಿ ಸಭಾಪತಿಯವರು:-** ಮಾನ್ಯ ಶಶೀಲ್ ಜಿ ನಮೋಶಿ ಹಾಗೂ ಮಾನ್ಯ ರಘುನಾಥ ರಾವ್ ಮಲ್ಕಾಪೂರೆಯವರ ಪ್ರಶ್ನೆ 87(585+552) ಕ್ಕೆ ಮಾನ್ಯ ಸಚಿವರು ಎರಡೂವರೆ ವಾರಗಳ ಕಾಲ ಕಾಲಾವಕಾಶ ಕೋರಿದ್ದಾರೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಪ್ರಶ್ನೆಗೆ ಕಾಲಾವಕಾಶ ಕೋರಿದ್ದಾರೆ, ಅದಕ್ಕೆ ನನ್ನ ಅಭ್ಯಂತರವೇನಿಲ್ಲ. ಆದರೆ,...

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಸಂಬಂಧಿಸಿದಂತೆ ಬಹಳ ವರ್ಷಗಳಿಂದ ಈ ಸದನದಲ್ಲಿ ಚರ್ಚೆಯಾಗುತ್ತಿದೆ. ಪ್ರಾರಂಭದಿಂದ ಇಲ್ಲಿಯವರೆಗೂ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ಮಾಣವಾಗಿದೆ ಎಂಬುದರ ಬಗ್ಗೆ ವರ್ಷಾವಾರು, ಜಿಲ್ಲಾವಾರು ಮಾಹಿತಿ ಕೇಳಲಾಗಿದ್ದು, ಅದಕ್ಕೆ ಸಮಯವನ್ನು ಕೇಳಿರುತ್ತೇನೆ. ಅದೇ ರೀತಿ ಬಿಡುಗಡೆಯಾಗಿರುವ ಹಣ ಎಷ್ಟು ಎಂಬುದನ್ನು ಕೇಳಿದ್ದು, ಅದಕ್ಕೂ ಸ್ವಲ್ಪ ಸಮಯಬೇಕಾಗಿದೆ. ಆದರೆ, ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸುವುದರಲ್ಲಿ ಅವ್ಯವಹಾರ ನಡೆದಿದ್ದರೂ, ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ.

**(ಮುಂದು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(189)05.02.2021/12.20/ಎಸ್‌ಕೆ-ಎಂ.ಡಿ.

**ಶ್ರೀ. ಕೆ.ಎಸ್. ಈಶ್ವರಪ್ಪ (ಮುಂದು);-**

ಎರಡನೆಯದಾಗಿ, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಕಾರ್ಯಾರಂಭ ಮಾಡದಿರುವುದು ಹಾಗೂ ದುರುಸ್ಥಿಗಾಗಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮೂರನೆಯದಾಗಿ, ಸಾವಿರಾರು ಕೋಟಿ ಹಣ ವೆಚ್ಚ ಮಾಡಿ ನಿರ್ಮಾಣ ಮಾಡಿದಾಗ್ಯೂ ಅವುಗಳನ್ನು ಅಧಿಕಾರಿ/ಸಿಬ್ಬಂದಿಗಳು ಸರಿಯಾಗಿ ನಿರ್ವಹಣೆ ಮಾಡದೇ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎನ್ನುವಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಈ ಮೂರು ಅಂಶಗಳ ಬಗ್ಗೆ ಸಾಕಷ್ಟು ಚರ್ಚೆ ಮಾಡಿ, ಶುದ್ಧ ಕುಡಿಯುವ ನೀರಿನ ಘಟಕದಲ್ಲಿ ಅವ್ಯವಹಾರವಾಗಿರುವ ಬಗ್ಗೆ ಜಂಟಿ ಸದನ ಸಮಿತಿ ಮಾಡಬೇಕೆಂದು ಈಗಾಗಲೇ ನಾವು ತೀರ್ಮಾನಕ್ಕೆ ಬಂದಿದ್ದೇವೆ. ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ವಿಧಾನಸಭೆಯಲ್ಲಿ ಜಂಟಿ ಸದನ ಸಮಿತಿ ಮಾಡುವುದಕ್ಕೆ ಈಗಾಗಲೇ ಘೋಷಣೆ ಮಾಡಿದ್ದಾರೆ. ನಾನು ಕೂಡ ಇಲ್ಲಿ ಘೋಷಣೆ ಮಾಡುತ್ತಿದ್ದೇನೆ. ಆದಷ್ಟು ಬೇಗ ಕೆಳಮನೆಯಲ್ಲಿರುವಂತಹ ಶಾಸಕರು ಮತ್ತು ಮೇಲ್ಮನೆಯ ಶಾಸಕರ ಒಂದು ಸಮಿತಿಯನ್ನು ಮಾಡಿ, ಅದರ ಮುಖಾಂತರ ಪೂರ್ತಿ ತನಿಖೆ ಮಾಡಿ, ಇದರಲ್ಲಿ ಎಷ್ಟೆಷ್ಟು ಅವ್ಯವಹಾರವಾಗಿದೆ? ಇದರಲ್ಲಿ ಯಾರ್‍ಯಾರು ಅಧಿಕಾರಿಗಳು ಪಾಲ್ಗೊಂಡಿದ್ದಾರೆ ಹಾಗೂ ಯಾರ್‍ಯಾರು contractor ಗಳಿದ್ದಾರೋ, ಅದಕ್ಕೆ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 528**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, 2016–17ನೇ ಸಾಲಿನಿಂದ ಇಲ್ಲಿಯವರೆಗೆ ಪಶುಸಂಗೋಪನೆ ಇಲಾಖೆಗೆ ಮಂಜೂರಾಗಿರುವ ಅನುದಾನ ಎಷ್ಟು ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ಈಗಾಗಲೇ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

ಎರಡನೆ ಪ್ರಶ್ನೆ ಏನೆಂದರೆ, ಮಂಜೂರಾದ ಅನುದಾನವನ್ನು ಸಂಪೂರ್ಣವಾಗಿ ಉಪಯೋಗಿಸಿದೆಯೇ; ಉಪಯೋಗಿಸದಿದ್ದಲ್ಲಿ, ಇದಕ್ಕೆ ಕಾರಣವೇನು ಎಂದು ನಾನು ಕೇಳಿದ್ದೆ. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಮಂಜೂರಾದ ಅನುದಾನವನ್ನು 23 ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಉಪಯೋಗಿಸಲಾಗಿರುತ್ತದೆ. ಅನುದಾನವನ್ನು ಸಂಪೂರ್ಣವಾಗಿ ಉಪಯೋಗಿಸದೇ ಇರುವ ಕಾರಣ ಏಳು ಜಿಲ್ಲೆಗಳ ಮಾಹಿತಿಯನ್ನು ಸಹಿತ ಅನುಬಂಧದಲ್ಲಿ ಕೊಟ್ಟಿದ್ದಾರೆ. ಇದರ ಮೂಲಭೂತ ಪ್ರಶ್ನೆ ಎಂದರೆ, ಸರ್ಕಾರದಿಂದ ಅನುದಾನ ಕೊಡುವುದೇ ಕಷ್ಟ. ಬಂದಂತಹ ಅನುದಾನವನ್ನು ಉಪಯೋಗಿಸದಿದ್ದಲ್ಲಿ, ಇಲಾಖೆಯ ಅಧಿಕಾರಿಗಳ ಮೇಲೆ ಮಾನ್ಯ ಸಚಿವರು ಏನು ಕ್ರಮ ಕೈಗೊಂಡಿದ್ದಾರೆ? ಮಾನ್ಯ ಸಚಿವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಆಯಾಯ ಜಿಲ್ಲೆಯ ಅಧಿಕಾರಿಗಳ ಮೇಲೆ ಯಾವುದೇ ವಿಧವಾದ ಕ್ರಮಗಳನ್ನು ಕೈಗೊಂಡಿಲ್ಲ ಮತ್ತು ನೋಟಿಸ್‌ನ್ನು ಕೊಟ್ಟಿಲ್ಲ. ಇದೊಂದು ಕಾರಣ. ಮಂಡ್ಯ ಜಿಲ್ಲೆಗೆ ಮಂಜೂರಾದ ಅನುದಾನದಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಎಂದು ಪ್ರಶ್ನೆ ಕೇಳಿದ್ದೆ. ಇದಕ್ಕೆ ತಾಲ್ಲೂಕುವಾರು ಕೊಟ್ಟಿದ್ದೀರಿ. ಇಲಾಖೆಯವರು ನೀಡಿರುವ ಉತ್ತರದ ಪ್ರತಿಯನ್ನು ಮಾನ್ಯ ಸಭಾಪತಿಯವರಿಗೆ ಕೊಡುತ್ತೇನೆ. ಇದನ್ನು ಯಾರಾದರೂ ಓದುವುದಕ್ಕಾಗುತ್ತದೆಯೇ? ಈ ಉತ್ತರವನ್ನು ಓದುಬಾರದೆಂಬ ಉದ್ದೇಶ ಮಾನ್ಯ ಸಚಿವರಿಗೆ ಇದೆಯೇ? ಇಲಾಖೆಯ ಅಧಿಕಾರಿಗಳು ತಮ್ಮನ್ನು ಮತ್ತು ನಮ್ಮನ್ನು ಕೂಡ ದಿಕ್ಕು ತಪ್ಪಿಸುತ್ತಿದ್ದಾರೆ. ತಮ್ಮ ಬಳಿ ಉತ್ತರವಿದೆ ಎಂದು ನಾನು ಭಾವನೆ ಮಾಡುತ್ತೇನೆ. ಇದನ್ನು ಯಾರಾದರೂ ಓದುವುದಕ್ಕಾಗುತ್ತದೆಯೇ ಸ್ವಾಮಿ. ಈ ಉತ್ತರವನ್ನು ಭೂತಗನ್ನಡಿಯನ್ನಿಟ್ಟುಕೊಂಡು ನೋಡಿದರೂ ಸಹಿತ ಓದುವುದಕ್ಕಾಗುವುದಿಲ್ಲ. ಮಾನ್ಯ ಸಚಿವರೇ, ಈ ತರಹ ಉತ್ತರ ಕೊಟ್ಟರೆ, ಏನಾದರೂ ಅರ್ಥವಿದೆಯಾ? ಇದರ ಉದ್ದೇಶವೇನು? ತಮ್ಮ ಇಲಾಖೆಯ ಅಧಿಕಾರಿಗಳ ಮುಖಾಂತರ ಈ ತರಹದ ಉತ್ತರದ ಪ್ರತಿಯನ್ನು ಕೊಡುತ್ತಾರೆಂದರೆ, ಇದರ ಅರ್ಥವೇನು? ಈ ಉತ್ತರದ ಪ್ರತಿಯನ್ನು ತಾವೇ ನೋಡಿ. ಮಾನ್ಯ ಸಭಾಪತಿಯವರೇ, ಈ ಉತ್ತರದ ಪ್ರತಿಯನ್ನು ಭೂತಗನ್ನಡಿಯನ್ನಿಟ್ಟು ನೋಡಿದರೂ ಸಹಿತ ಓದುವುದಕ್ಕಾಗುವುದಿಲ್ಲ. ಕೊನೆ ಘಳಿಗೆಯಲ್ಲಿ ಈ ತರಹ ಉತ್ತರದ ಪ್ರತಿಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತೀರಿ. ಇದನ್ನು ಯಾರಾದರೂ ಓದುವುದಕ್ಕಾಗುತ್ತದೆಯೇ? ಇಲಾಖೆಯ ಅಧಿಕಾರಿಗಳು ಉತ್ತರ ಪ್ರತಿಯನ್ನು ಒದಗಿಸಿರುವ ಬಗ್ಗೆ ತಾವು ಏನು ಕ್ರಮವನ್ನು ಜರುಗಿಸುತ್ತೀರಾ? ಮಾನ್ಯ ಸಚಿವರೇ, ಒಂದೇ ಒಂದು ಅಕ್ಷರವನ್ನು ಓದಿ.

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ದಿವಸ ಮುಂಚಿತವಾಗಿ ಉತ್ತರ ಬರುತ್ತದೆ. ಆ ಉತ್ತರವನ್ನು ಓದಿಕೊಂಡು, ಉಪ ಪ್ರಶ್ನೆಗಳನ್ನು ಕೇಳುವಂತಹದ್ದಕ್ಕೆ ಅವಕಾಶವಾಗುತ್ತದೆ. ಈ ಹಿಂದೆ ಕೂಡ ಆ ಪದ್ಧತಿ ಇತ್ತು. ಈಗ ಇಲಾಖೆಯವರು ಉತ್ತರ ಕೊಡುತ್ತಾರೆಂದರೆ, ಅದನ್ನು ತೆಗೆದುಕೊಂಡು ಬಂದು ಲಗತ್ತಿಸಿಬಿಡುತ್ತೀರಿ. ನಾವು ಏನು ಕೇಳುವುದು, ಬಿಡುವುದು?

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಅದರ ಉದ್ದೇಶವೇನು?

**ಶ್ರೀ ಸಿ.ಎಂ ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ತರಹ ಪದ್ಧತಿ ಯಾವಾಗ ಬದಲಾವಣೆಯಾಗುತ್ತದೆ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಈ ಮುಂಚೆ ಉತ್ತರವನ್ನು ಒದಗಿಸುತ್ತಿದ್ದರು.

**ಶ್ರೀ ಸಿ.ಎಂ ಇಬ್ರಾಹಿಂ (ವಿಧಾನಸಭಾ ಕ್ಷೇತ್ರ):–** ಈ ಮುಂಚೆ ಇಲಾಖೆಯಿಂದ ಬಂದಂತಹ ಉತ್ತರವನ್ನು ಓದುತ್ತಿದ್ದೆವು. ಉಪ ಪ್ರಶ್ನೆಯನ್ನು ತಯಾರು ಮಾಡಿಕೊಂಡು ಬಂದು, ಕೇಳುವುದಕ್ಕೆ ಅವಕಾಶವಾಗುತ್ತಿತ್ತು.

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಇಬ್ರಾಹಿಂ ಸಾಹೇಬರೇ, ಇಲಾಖೆಯವರು ನೀಡಿರುವ ಉತ್ತರದ ಜೊತೆಗೆ ಅನುಬಂಧವನ್ನು ಕೊಟ್ಟಿದ್ದಾರೆ. ಅದನ್ನು ಭೂತಗನ್ನಡಿಯಿಟ್ಟುಕೊಂಡು ನೋಡಿದರೂ ಸಹಿತ ಓದುವುದಕ್ಕಾಗುವುದಿಲ್ಲ.

**ಶ್ರೀ ಪ್ರಭು ಬಿ. ಚವ್ಹಾಣ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಅಪ್ಪಾಜಿಗೌಡರವರು ಏನೊಂದು ಉತ್ತರದ ಪ್ರತಿಯನ್ನು ತೋರಿಸುತ್ತಿದ್ದಾರೋ, ನಮಗೆ ಯಾವುದೇ ರೀತಿ ಉದ್ದೇಶವಿಲ್ಲ. ಜೆರಾಕ್ಸ್ ಪ್ರತಿ ಹೆಚ್ಚು ಕಡಿಮೆಯಾಗಿರಬಹುದು. ಈ ಬಗ್ಗೆ ನಾನು ಇಲಾಖೆಯ ಅಧಿಕಾರಿಗಳಿಗೆ ಕೇಳುತ್ತೇನೆ. ಮಾನ್ಯ ಸದಸ್ಯರು ಅನುದಾನದ ಬಗ್ಗೆ ಕೇಳಿದ್ದಾರೆ. ಅದರ ಬಗ್ಗೆ ವಿವರವನ್ನು ಕೊಟ್ಟಿದ್ದೇನೆ. ಏಳು ಜಿಲ್ಲೆಗಳು ಬಾಕಿಯಿದೆ ಎಂಬುದರ ಬಗ್ಗೆ ಕೂಡ ತನಿಖೆ ಮಾಡುತ್ತಿದ್ದೇವೆ. ನಿನ್ನೆ ಇಲಾಖಾಧಿಕಾರಿಗಳ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚರ್ಚೆಯನ್ನು ಮಾಡಿದ್ದೇನೆ. ಈಗ ಕೂಡ ಚರ್ಚೆ ಮಾಡುತ್ತೇನೆ. ಇನ್ನು ಮುಂದೆ ಯೋಜನೆಯ ಏಳು ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಹೆಚ್.ಎಂ. ರಮೇಶ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಚಿವರೇ, ತಾವು ಈ ರೀತಿಯಾಗಿ ಮಾತನಾಡುವುದು ಸರಿಯಲ್ಲ.

**ಹಂಗಾಮಿ ಸಭಾಪತಿಯವರು:–** ಮಾನ್ಯ ರಮೇಶ್‌ಗೌಡರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಹೆಚ್.ಎಂ. ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಈ ರೀತಿಯಾದ ಉತ್ತರವನ್ನು ಕೊಟ್ಟುಬಿಟ್ಟರೆ ತಪ್ಪಾಗುತ್ತದೆ ಎಂದು ಹೇಳಿಬಿಟ್ಟು, ಮಾನ್ಯ ಸಚಿವರೇ ಐ.ಎ.ಎಸ್. ಅಧಿಕಾರಿಗಳು ಇರುತ್ತಾರೆ. ಅವರು ಏನು ಮಾಡುತ್ತಿರುತ್ತಾರೆ?

**ಶ್ರೀ ಪ್ರಭು ಬಿ. ಚವ್ಹಾಣ್:–** ಮಾನ್ಯ ಸದಸ್ಯರೇ, ನಾನು ಸಹ ಹೇಳಿದ್ದೇನೆ.

**ಶ್ರೀ ಹೆಚ್.ಎಂ. ರಮೇಶ ಗೌಡ:–** ಮಾನ್ಯ ಸಚಿವರೇ ಅಧಿಕಾರಿಗಳಿಗೆ ಹೇಳಬೇಕಲ್ಲ. ನಾನು ಈಗಾಗಲೇ ಸಾಕಷ್ಟು ಬಾರಿ ಹೇಳಿದ್ದೇನೆ. ಇದುವರೆವಿಗೂ ಸರಿಪಡಿಸಲಿಲ್ಲ. ಆನಂತರ ನಾವು ಪ್ರಶ್ನೆಗಳಿಗೆ ಉತ್ತರ ಸರಿಯಾಗಿ ನೀಡುವುದಿಲ್ಲ. ಅವರು ಉತ್ತರವನ್ನು ಕೊಡಿಸುತ್ತೇನೆಂದು ಹೇಳುತ್ತಾರೆ. ಮುಂದಿನ ಸಾರಿ ಬರುತ್ತದೆ.

**ಶ್ರೀ ಪ್ರಭು ಬಿ. ಚವ್ಹಾಣ್:–** ಮಾನ್ಯ ಸಭಾಪತಿಯವರೇ, ನಮಗೆ ಯಾವುದೇ ರೀತಿಯ ಉದ್ದೇಶವಿರುವುದಿಲ್ಲ.

**ಶ್ರೀ ಆರ್. ಅಶೋಕ್:–** ಮಾನ್ಯ ಅಪ್ಪಾಜಿಗೌಡರೇ, ಜೆರಾಕ್ಸ್ ಪ್ರತಿಯೂ ತಪ್ಪಾಗಿದೆ. ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಇನ್ನು ಮುಂದೆ ಆ ತರಹ ಮಾಡದ ಹಾಗೇ ನೋಡಿಕೊಳ್ಳುತ್ತೇವೆ.

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸಚಿವರೇ ಒಂದು ನಿಮಿಷ. ತಾವು ಹಿರಿಯ ಸಚಿವರಿದ್ದೀರಿ.

**ಶ್ರೀ ಆರ್. ಅಶೋಕ್:–** ನಾನು ತಪ್ಪು ಎಂದು ಹೇಳುತ್ತಿದ್ದೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಚಿವರು ತಪ್ಪಾಗಿದೆ ಎಂದು ಹೇಳುತ್ತಿದ್ದೀರಲ್ಲ.

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸದಸ್ಯರೇ ಒಂದು ನಿಮಿಷ. ಇದನ್ನು ಓದುವುದು ಬೇಡವೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್. ಅಶೋಕ್:-** ಮಾನ್ಯ ಅಪ್ಪಾಜಿಗೌಡರೇ, ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಜೆರಾಕ್ಸ್ ತೆಗೆಯಬೇಕಾದರೆ ಸರಿಯಾಗಿ ಅದು ಓದುವುದಕ್ಕೆ ಅವಕಾಶವಿದೆಯಾ ಎನ್ನುವುದನ್ನು ನೋಡಬೇಕಾಗಿತ್ತು. ತಾವು ಹೇಳಿರುವ ಹಾಗೇ ಉತ್ತರವನ್ನು ಭೂತಗನ್ನಡಿಯನ್ನಿಟ್ಟುಕೊಂಡು ನೋಡಬೇಕೆಂದು ಹೇಳಿದ್ದೀರಾ.

**ಶ್ರೀ ಎನ್. ಅಪ್ಪಾಜಿಗೌಡ:-** ಇದನ್ನು ತಾವು ನೋಡಬೇಕು. ಮಾನ್ಯ ಸಭಾಪತಿಯವರಿಗೆ ಉತ್ತರದ ಪ್ರತಿಯನ್ನು ಕಳುಹಿಸಿಕೊಡುತ್ತೇನೆ.

**ಶ್ರೀ ಆರ್. ಅಶೋಕ್:-** ಈ ತರಹ ಮಾಡುವಂತಹ ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಡುತ್ತೇವೆ. ಇನ್ನು ಮುಂದೆ ಆ ತರಹವಾಗುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಯಾವುದೇ ಇಲಾಖೆಯ ಅಧಿಕಾರಿಗಳು ಇರಬಹುದು. ಈ ತರಹ ಓದುವುದಕ್ಕೆ ಆಗದೇ ಇರುವಂತಹ ಉತ್ತರದ ಪ್ರತಿಯನ್ನು ಕೊಡುವಂತಹದ್ದು ಸರಿಯಲ್ಲ. ಅದನ್ನು ನಾವು ಮಾಡುತ್ತೇವೆ. ತಾವು ಹೇಳಿರುವ ಹಾಗೇ ಉಳಿದಂತಹ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಏಳು ಜಿಲ್ಲೆಗಳಲ್ಲಿ ಅನುದಾನವನ್ನು ಉಪಯೋಗ ಮಾಡಿಲ್ಲ. ಏಕೆಂದರೆ ಅನುದಾನವನ್ನು ಕೊಡುವುದೇ ಕಡಿಮೆ. ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದರ ಬಗ್ಗೆ ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ.

**ಶ್ರೀ ಎನ್. ಅಪ್ಪಾಜಿಗೌಡ:-** ಮಾನ್ಯ ಇಬ್ರಾಹಿಂ ಸಾಹೇಬರು ಹೇಳಿದ ಹಾಗೇ, ಕನಿಷ್ಠ ಪಕ್ಷ ಉತ್ತರವನ್ನು ಒಂದು ದಿವಸ ಮುಂಚಿತವಾಗಿ ಕೊಡಿ. ಈ ಹಿಂದೆ ಉತ್ತರವನ್ನು ಮೊದಲೇ ಕೊಡುತ್ತಿದ್ದರು. ಕೊನೆ ಗಳಿಗೆಯಲ್ಲಿ ಉತ್ತರವನ್ನು ಕೊಡುತ್ತೀರಿ.

**ಹಂಗಾಮಿ ಸಭಾಪತಿಯವರು:-** ಮುಂಚಿತವಾಗಿ ಉತ್ತರವನ್ನು ಕೊಡುವುದಕ್ಕೆ ಮಾನ್ಯ ಸಚಿವರು ಪ್ರಯತ್ನವನ್ನು ಮಾಡಿಸಬೇಕು.

**ಶ್ರೀ ಸಿ.ಎಂ ಇಬ್ರಾಹಿಂ:-** ಪ್ರಯತ್ನವಲ್ಲ. ಅದು ಇಲ್ಲಿಂದ ಆಗಬೇಕು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಅದು ಪ್ರೋಸಿಜರ್.

**ಶ್ರೀ ಸಿ.ಎಂ ಇಬ್ರಾಹಿಂ:-** ತಮ್ಮ ಸಚಿವಾಲಯದಿಂದ ಆಗಬೇಕು. ಪ್ರಶ್ನೆಗಳನ್ನು ಪ್ರಿಂಟ್ ಮಾಡಲೇ ಬಾರದು. ಉತ್ತರ ಬರದೇ, ಪ್ರಶ್ನೆಗಳನ್ನು ಪ್ರಿಂಟ್ ಮಾಡಿದರೆ, ಅದು ಸರಿ ಹೋಗುವುದಿಲ್ಲ. ತಮ್ಮ ಕೈಯಲ್ಲಿ ಉತ್ತರ ಬಂದ ಮೇಲೆ, ಪ್ರಶ್ನೆಗಳನ್ನು ಪ್ರಿಂಟ್ ಮಾಡಿ. ಇಪ್ಪತ್ನಾಲ್ಕು ಗಂಟೆಗಳ ಮುಂಚಿತವಾಗಿ ಉತ್ತರವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳುಹಿಸಿದರೆ, ನಾವು ಸದನಕ್ಕೆ ಬರಬೇಕಾದರೆ, ಉತ್ತರವನ್ನು ಓದಿಕೊಂಡು ಮಾಡಿಕೊಂಡು, ಇಲ್ಲಿಗೆ ಬರುತ್ತೇವೆ.

**ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸದಸ್ಯರು ಕನಿಷ್ಠ ಪಕ್ಷ ಏನು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕಾದರೂ ಉತ್ತರ ಕೊಡಬೇಕು.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ತಾವು ಅದನ್ನು ಸಹಕಾರ ಮಾಡುತ್ತೇನೆ. ಉತ್ತರವನ್ನು ಮುಂಚಿತವಾಗಿ ಒದಗಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಸುನೀಲ್ ವಲ್ಯಾಪುರ್ ಬದಲಾಗಿ ಮಾನ್ಯ ಅರುಣಶಹಾಪುರವರು ಪ್ರಶ್ನೆಯನ್ನು ಕೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 544**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) ಶ್ರೀ ಸುನೀಲ್ ವಲ್ಯಾಪುರ್ ಪರವಾಗಿ (ವಿಧಾನಸಭೆ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅಂತ್ಯ ಸಂಸ್ಕಾರ ಯೋಜನೆಯನ್ನು ಸರ್ಕಾರ ಯಾವ ಕಾರಣಕ್ಕಾಗಿ ತಂದಿತು ಎಂದು ಎಲ್ಲೋ ಒಂದು ಕಡೆ ಅಧಿಕಾರಿಗಳು ಮರೆತಿದ್ದಾರೆ ಎನ್ನುವುದು ನನ್ನ ಭಾವನೆ. 2018–19ನೇ ಸಾಲಿನಲ್ಲಿ ಇನ್ನು 5140 ಅರ್ಜಿಗಳು ಬಾಕಿಯಿದೆ. 2019–20 ನೇ ಸಾಲಿನಲ್ಲಿ 2221 ಅರ್ಜಿಗಳು ಬಾಕಿಯಿದೆ. 2020–21ನೇ ಸಾಲಿನಲ್ಲಿ 4709 ಅರ್ಜಿಗಳು ಬಾಕಿಯಿದೆ. ತಾವು ಕೊಟ್ಟು ಕೊಡದಿರುವಂತಹ ಸ್ಥಿತಿ ನಿರ್ಮಾಣವಾಗುತ್ತಿದೆ. ಅಂತ್ಯ ಸಂಸ್ಕಾರದ ಹಣ ತಕ್ಷಣ ಬಂದರೆ, ಇದರ ಸದುಪಯೋಗವಾಗುತ್ತದೆ. ಮೂರ್‍ನಾಲ್ಕು ವರ್ಷಗಳ ನಂತರ ಹಣವನ್ನು ಕೊಟ್ಟರೆ, ಅದರ ಪ್ರಯೋಜನವೇನು? ಆ ಕಾರಣಕ್ಕಾಗಿ ತಕ್ಷಣ ಹಣವನ್ನು ಬಿಡುಗಡೆಗೊಳಿಸುವುದಕ್ಕೆ ಕ್ರಮವನ್ನು ವಹಿಸುತ್ತೀರಾ ಎನ್ನುವ ಪ್ರಶ್ನೆ ಎನ್ನುವುದೊಂದು. ನನಗೆ ಒಂದು ಗೊಂದಲದೇ ಸ್ಪಷ್ಟವಾಗಿರುವಂತಹದ್ದು. ತಾವು ಕೊಟ್ಟಿರುವಂತಹ ಪೂರಕ ಟಿಪ್ಪಣಿಯಲ್ಲಿ 2018–19 ನೇ ಸಾಲಿನಲ್ಲಿ 47,000 ಫಲಾನುಭವಿಗಳಿಗೆ ಕೊಟ್ಟಿದ್ದೇವೆಂದು ಹೇಳುತ್ತೀರಿ. 2019–20 ನೇ ಸಾಲಿನಲ್ಲಿ 1,49,980 ಎಂದು ಹೇಳುತ್ತಿದ್ದೀರಿ. ಆದರೆ ಆ ವರ್ಷದಲ್ಲಿ ಬೇಡಿಕೆ 73,677 ಇರುವುದು, ಇದರ ವ್ಯತ್ಯಾಸವೇನು ಎಂಬುದರ ಬಗ್ಗೆ ಮಾನ್ಯ ಸಚಿವರು ವಿವರಣೆಯನ್ನು ಕೊಡಬಹುದೆಂದು ಕೇಳುತ್ತೇನೆ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಯಲ್ಲಿ, ಬಡವರು ಸತ್ತಾಗ ಹಣ ಕೊಡತಕ್ಕಂತಹದ್ದು. ಅವರು ಯಾರದೋ ಮನೆಯ ಮುಂದೆ ನಿಲ್ಲಬಾರದು ಎನ್ನುವ ದೃಷ್ಟಿಯಿಂದ ಸರ್ಕಾರ ಈ ಯೋಜನೆಯನ್ನು ತಂದಿತ್ತು. ಈ ಮೊದಲು ಅಂದರೆ 2015–16 ಸಾಲಿನಲ್ಲಿ ಒಂದು ಸಾವಿರ ರೂಪಾಯಿ ಇದ್ದಿದ್ದನ್ನು ಅದನ್ನು ಐದು ಸಾವಿರ ರೂಪಾಯಿಗಳನ್ನು ಮಾಡಿದ್ದೇವೆ. ಈಗ ಅರ್ಜಿ ಕೊಡುವಂತಹ ಅರ್ಜಿಗಳು ಜಾಸ್ತಿಯಾಗಿವೆ. ಕಳೆದ ಬಾರಿ ಸುಮಾರು 2018–19 ಸಾಲಿನಲ್ಲಿ ಬಹಳ ಪೆಂಡಿಂಗ್ ಉಳಿದಿತ್ತು. ನಾನು ಹಣಕಾಸು ಇಲಾಖೆಯವರ ಜೊತೆ ಮಾತನಾಡಿ, ಅವರ ಜೊತೆಗೆ ಮನವಿ ಮಾಡಿದ ಮೇಲೆ ಸುಮಾರು 74 ಕೋಟಿ ರೂಪಾಯಿಗಳ ಅನುದಾನ ಅಂದರೆ ವಿಶೇಷವಾಗಿ ಅನುದಾನವನ್ನು ನಮಗೆ ಕೊಟ್ಟಿದ್ದಾರೆ. ಸುಮಾರು 74 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದರಿಂದ ಯಾವ್ಯಾವುದು ಪೆಂಡಿಂಗ್ ಇತ್ತು. ಈಗ ಅದನ್ನೆಲ್ಲಾ ಕ್ಲಿಯರ್ ಮಾಡಿಸಿದ್ದೇನೆ. ಈ ವರ್ಷದಲ್ಲಿ ಉಳಿದಂತಹದ್ದು ಏನಿದೆ? ಅದನ್ನು ಕೂಡ ಕ್ಲಿಯರ್ ಮಾಡುತ್ತೇನೆ. ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಿಂದೆ ನಾವೆಲ್ಲಾ ಅವರ ಕೈಗೆ ಚೆಕ್ ತೆಗೆದುಕೊಂಡು ಹೋಗಿಬಿಟ್ಟು, ಕೊಡುತ್ತಿದ್ದೇವು. ಈಗ ಆ ತರಹ ಕೊಡುವುದಕ್ಕೆ ಅವಕಾಶವಿಲ್ಲ. ಸರ್ಕಾರ ಕಾನೂನು ಮಾಡಿಬಿಟ್ಟಿದೆ. ಖಜಾನೆ-2 ಅದರಡಿಯಲ್ಲಿ ನಾವು ಕೊಡಬೇಕಾಗುತ್ತದೆ. ಚೆಕ್ ಮುಖಾಂತರ ಅಲ್ಲ. ಅದರ ಆರ್.ಟಿ.ಜಿ.ಎಸ್. ಮುಖಾಂತರವೇ ಅವರ ಅಕೌಂಟಿಗೆ ಕೊಡಬೇಕಾಗುತ್ತದೆ. ಅಕೌಂಟ್ ಕೊಡುವುದರಲ್ಲಿ ಸ್ವಲ್ಪ ತಡವಾಗುತ್ತಿದೆ. ಅದಕ್ಕೂ ಕೂಡ ಸರಳೀಕರಣ ಮಾಡುವುದಕ್ಕೆ, ಹಣಕಾಸು ಇಲಾಖೆಯ ಮುಖಾಂತರ ಮಾತನಾಡುತ್ತೇನೆ.

**(ಮುಂದು)**

**(190) 05.02.2021, 12.30, ಟಿಸಿಹೆಚ್-ಎಂಡಿ**

**ಶ್ರೀಆರ್.ಅಶೋಕ್(ಮುಂದು):-**

ಸತ್ತಾಗ 24 ಗಂಟೆ ಅಥವಾ 48 ಗಂಟೆಯಲ್ಲಿ ಕೊಡಬೇಕು. 2015ನೇ ಸಾಲಿನಿಂದಲೂ ಇದು ಪೆಂಡಿಂಗ್ ಇದೆ. ನಾನೇನು ಮಾಡಲಿ. ಬಹಳ ಪೆಂಡಿಂಗ್ ಇತ್ತು. ನಾನು ಸಚಿವನಾಗಿ ಬಂದ ನಂತರ, ಒಂದೇ ಬಾರಿಗೆ ಬಜೆಟ್‌ನಲ್ಲಿ ರೂ.29 ಕೋಟಿಗಳನ್ನು ಕೊಟ್ಟಿರುವುದು. ಮಾನ್ಯ ಸಿ.ಎಂ.ಇಬ್ರಾಹಿಂರವರೇ ತಾವೇ ಹೇಳಿ. ಪ್ರತಿ ವರ್ಷ ಅಷ್ಟೆ ಮೀಸಲಿಡುತ್ತಿರುವುದು. ಸಾಯತಕ್ಕಂಥವರ ಸಂಖ್ಯೆ ಹೆಚ್ಚಿಲ್ಲ. ಆದರೆ ಅರ್ಜಿ ಸಲ್ಲಿಸತಕ್ಕಂಥವರ ಸಂಖ್ಯೆ ಹೆಚ್ಚಾಗಿದೆ. 47,000 ದಿಂದ 1,00,000 ಅರ್ಜಿ ಸಲ್ಲಿಸತಕ್ಕಂಥವರ ಸಂಖ್ಯೆ ಒಂದೇ ಬಾರಿಗೆ ಏರಿಕೆಯಾಗಿದೆ. ನಾವು ರೂ.1000/-ಗಳು ಇರುವುದನ್ನು ರೂ.5000/-ಗಳಿಗೆ ಹೆಚ್ಚಿಗೆ ಮಾಡಿದ್ದೇವೆ. ಅದು ಯಾವುದೇ ಸರ್ಕಾರವಿರಲಿ ಉದ್ದೇಶ ಒಂದೇ. ಸರ್ಕಾರದ ಉದ್ದೇಶವೇನೆಂದರೆ, ಅವರ ಕುಟುಂಬ ಯಾರೋ ಒಬ್ಬ ಸಾಹುಕಾರನ ಮನೆ ಮುಂದೆ ನಿಂತುಕೊಳ್ಳಬಾರದು ಅಷ್ಟೇ. ಆ ದೃಷ್ಟಿಯಿಂದ ಈ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಮಾನ್ಯ ಸಿ.ಎಂ.ಇಬ್ರಾಹಿಂರವರೇ ನಿಜ. ತಪ್ಪನ್ನು ತಪ್ಪೆಂದು ಒಪ್ಪಿಕೊಳ್ಳುವುದಕ್ಕೆ ಇದರಲ್ಲೇನೂ ತೊಂದರೆಯಿಲ್ಲ. 24 ಗಂಟೆ 48 ಗಂಟೆಯೊಳಗಡೆ ಹಣ ಕೊಡಬೇಕು, ಕೊಡುತ್ತಿಲ್ಲ. ನಾನು ಸಚಿವನಾದ ಮೇಲೆ ಆರ್ಥಿಕ ಇಲಾಖೆಯವರ ಹತ್ತಿರ ಮಾತನಾಡಿ ಒಂದೇ ಬಾರಿಗೆ ರೂ.29 ಕೋಟಿಗಳನ್ನು ಕೊಡುತ್ತಿದ್ದನ್ನು ರೂ.74 ಕೋಟಿಗಳನ್ನು ತಂದು ಅವರಿಗೆ ಕೊಡುತ್ತಿದ್ದೇವೆ. ನಾನು ಇವತ್ತೂ ಕೂಡ ಈ ಸಂಬಂಧ ಆರ್ಥಿಕ ಇಲಾಖಾಧಿಕಾರಿಯವರ ಹತ್ತಿರ ಮಾತನಾಡಿದ್ದೇನೆ. ನಾವು immediately file move ಮಾಡಿಕೊಂಡು ಅದೇನು ಬಾಕಿ ಇದೆಯೋ, ಅದನ್ನು ಕ್ಲಿಯರ್ ಮಾಡುತ್ತೇವೆಂದು ಹೇಳಿದ್ದಾರೆ. ಶೇ.100 ಹಣವನ್ನು ಕೊಡುತ್ತೇನೆ. ಜರೂರು ಮಾಡಬೇಕಾದಂಥ ಕಾರ್ಯಗಳನ್ನು ನಾನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಟೇಬಲ್ ತಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ, ಅಧಿಕಾರಿಗಳು ಸರಿಯಾದ ಮಾಹಿತಿ ಕೊಡಬೇಕು. ಈಗ ತಾವೇ ನೋಡಿ; ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಮಾರ್ಚ್–2020ರಿಂದ ಮೇ 2020–ರವರೆಗೆ ಸಂಪೂರ್ಣ lockdown ಆಗಿತ್ತು. ಸೆಪ್ಟೆಂಬರ್ 2020ರವರೆಗೆ ಭಾಗಶಃ lockdown ಇದ್ದ ಕಾರಣಕ್ಕಾಗಿ, ಮಾಹಿತಿ ಸಂಗ್ರಹಿಸುವುದಕ್ಕೆ ಆಗಿಲ್ಲವೆಂದು ಅಧಿಕಾರಿಗಳು ಹೇಳಿರುವುದು ಒಂದು ಸಣ್ಣ ಪಿಳ್ಳೆ ನೆವ. ಇವರು ಇದೆಲ್ಲವನ್ನೂ ಹೇಳಬೇಕೆ? ಸತ್ತವರಿಗೆ ಜರೂರಾಗಿ ಹಣ ತಲುಪಬೇಕೆಂದು ಬಹಳ ಸದುದ್ದೇಶದಿಂದ ಒಳ್ಳೆಯ ಕೆಲಸ ಮಾಡಿ ಹಣವನ್ನು ಬಿಡುಗಡೆ ಮಾಡಿಸಿದ್ದೀರಿ. ಅವರ ಕುಟುಂಬಕ್ಕೆ ತಲುಪಿಸುವುದಕ್ಕೆ ಅಧಿಕಾರಿಗಳನ್ನು ನೀವು ಸರಿಪಡಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ತಮ್ಮ ಮುಖಾಂತರ ವಿಂತಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, 2019–20 ರವರೆಗೆ ಏನೇನು ಬಾಕಿ ಇತ್ತೋ ಅದನ್ನು ಕ್ಲಿಯರ್ ಮಾಡಿದ್ದೇವೆ. ಈ ವರ್ಷದ್ದು ಮಾತ್ರ ಪೆಂಡಿಂಗ್ ಇದೆ, ಅದನ್ನೂ ಕೂಡ ಕ್ಲಿಯರ್ ಮಾಡಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 02. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಸದಸ್ಯರಿಗೆ ಹಿಂದಿನ ದಿನ ಅಜೆಂಡಾ ಜೊತೆಯಲ್ಲಿ ಲಿಖಿತ ಉತ್ತರವನ್ನು ಕಳುಹಿಸಿಕೊಡುವ ಬಗ್ಗೆ

**ಹಂಗಾಮಿ ಸಭಾಪತಿಯವರು:–** ಮಾನ್ಯ ಸಿ.ಎಂ.ಇಬ್ರಾಹಿಂ ರವರು ಒಂದು ಆಕ್ಷೇಪವನ್ನು ಮಾಡಿದ್ದಾರೆ. ಆದರೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 57ರ ಪ್ರಕಾರ, ಪ್ರಶ್ನೆಗಳಿಗೆ ಉತ್ತರಗಳನ್ನು ಮುಂಚಿತವಾಗಿ ಪ್ರಕಟಿಸಕೂಡದು. "ಕೇಳಲಾದ ಪ್ರಶ್ನೆಗಳಿಗೆ ಸಚಿವರು ಪರಿಷತ್ತಿನಲ್ಲಿ ಕೊಡಲು ಉದ್ದೇಶಿಸಿರುವ ಉತ್ತರಗಳನ್ನು ಪರಿಷತ್ತಿನಲ್ಲಿ ವಾಸ್ತವವಾಗಿ ಕೊಟ್ಟ ಹೊರತು ಅಥವಾ ಮಂಡಿಸದ ಹೊರತು ಪ್ರಕಟಣೆಗಾಗಿ ಬಿಡುಗಡೆ ಮಾಡತಕ್ಕದ್ದಲ್ಲ" ಎಂದು ಹೇಳಲಾಗಿದೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು ಏಕೋ ತಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ಕಾಣುತ್ತಿದೆ. ನಾವೆಲ್ಲಾ ಹಳೆಯ ಸಿನೆಮಾವನ್ನು ನೋಡಿದ್ದೇವೆ. ಇದು ಹೊಸ ಪ್ರಿಂಟ್ ಅಷ್ಟೆ. ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಉತ್ತರ. . .

**ಹಂಗಾಮಿ ಸಭಾಪತಿಯವರು:–** ನಿಯಮದ ಪ್ರಕಾರ ಮುಂಚೆ ಕೊಡುವಂತಿಲ್ಲ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಇದೆ.

**ಹಂಗಾಮಿ ಸಭಾಪತಿಯವರು:–** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮದ ಪುಸ್ತಕದ ಪುಟ ಸಂಖ್ಯೆ.39ರಲ್ಲಿ ಹೇಳಲಾಗಿದೆ, ತಾವೇ ನೋಡಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರ್ತಿನ ಪ್ರಶ್ನೆ ಕೇಳಿದಂಥವರಿಗೆ ಉತ್ತರವನ್ನು ಮುಂಚೆಯೇ ಕೊಡುವುದಕ್ಕೆ ಅವಕಾಶವಿದೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೌದು. ಪ್ರಶ್ನೆ ಕೇಳಿದಂಥ ಸದಸ್ಯರಿಗೆ ಉತ್ತರವನ್ನು ಮುಂಚೆ ಕೊಡುವುದಕ್ಕೆ ಅವಕಾಶವಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಮ್ಮಲ್ಲಿ ಎರಡು ಮಾದರಿಯ ಪ್ರಶ್ನೆಗಳಿವೆ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ಒಂದು ನಿಮಿಷ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ತಾವು ಆಮೇಲೆ ಮಾತನಾಡಿ. ನಾವು ಕೇಳಿದ ರೂಲಿಂಗ್‌ನ್ನು ಕೊಡಿ. ನಮ್ಮಲ್ಲಿ. . .

**ಹಂಗಾಮಿ ಸಭಾಪತಿಯವರು:–** ಪ್ರಶ್ನೆ ಕೇಳಿದವರಿಗೆ, ಅರ್ಧಗಂಟೆ ಮುಂಚಿತವಾಗಿ ಕೊಡಬೇಕು ಎನ್ನುವುದು ಇದೆ. ನಿಮಗೆ ಹಿಂದಿನ ದಿವಸವೇ ಕೊಡಬೇಕೆಂದು ಎಲ್ಲೂ ಉಲ್ಲೇಖ ಆಗಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಚುಕ್ಕೆ ಗುರ್ತಿನ ಪ್ರಶ್ನೆಗಳು ಮತ್ತು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳು ಎಂದು ಎರಡು ಮಾದರಿಯ ಪ್ರಶ್ನೆಗಳಿವೆ. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಸರ್ಕಾರ ಮಂಡಿಸಿದ ನಂತರ ಉತ್ತರವನ್ನು ಕೊಡಬೇಕು. ಇದನ್ನು ನಾನು ಒಪ್ಪಿಕೊಳ್ಳುತ್ತೇವೆ. ಆದರೆ ನಾನು ಶಾಸಕನಾದ ಆರಂಭದ ವರ್ಷಗಳಲ್ಲಿ ಹಿಂದಿನ ದಿವಸವೇ ಚುಕ್ಕೆ ಗುರ್ತಿನ ಪ್ರಶ್ನೆಗೆ ಉತ್ತರವನ್ನು ಅಜೆಂಡಾ ಜೊತೆಗೆ ನಮ್ಮ ಕೊಠಡಿಗಳಿಗೆ ಕಳುಹಿಸಿಕೊಡುತ್ತಿದ್ದರು. ಆಗ ನಾವು ಕುಳಿತುಕೊಂಡು ಓದಿಕೊಂಡು ಬರುತ್ತಿದ್ದೆವು. ನಮಗೆ ಅನುಭವವಿದೆ. ದಯಮಾಡಿ ಪ್ರಸ್ತುತ ಇಲಾಖೆಗಳಲ್ಲಿ ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬೇಗನೆ ಉತ್ತರ ತರಿಸಿಕೊಂಡು ಹಿಂದಿನ ದಿವಸವೇ ಅಜೆಂಡಾ ಜೊತೆ ಕಳುಹಿಸುವಂತಹ ಪರಿಪಾಠವನ್ನು ಮುಂದುವರೆಸಬೇಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ಹೇಳುವುದು ಸರಿಯಿದೆ. ಹತ್ತು ವರ್ಷಗಳ ಹಿಂದೆ ಮುಂಚಿತವಾಗಿ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತಿದ್ದರು. ಅದನ್ನು ನೋಡಿಕೊಂಡು ಬರುವಂಥದ್ದು ಇತ್ತು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಹೌದು, ಈ ಹಿಂದೆ ಪದ್ಧತಿ ಇತ್ತು.

**(ಗೊಂದಲ)**

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ನಾನು ಸದಸ್ಯನಾಗಿ ಬಂದಾಗ ಕೂಡ ಆ ವ್ಯವಸ್ಥೆ ಇತ್ತು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:-** ನಾನು ನಿಯಮದಡಿಯಲ್ಲಿ ಇರುವುದನ್ನು ಹೇಳುತ್ತಿದ್ದೇನೆ. ಅದು ಬಿಟ್ಟರೆ, ಹಿಂದೆ ಏನಿತ್ತು ಎಂದು ಗೊತ್ತಿಲ್ಲ. ನಿಯಮದೊಳಗೆ ಇರುವಂಥದ್ದು ಕೇವಲ ಅರ್ಧಗಂಟೆ ಮುಂಚಿತವಾಗಿ ಟೇಬಲ್‌ನಲ್ಲಿ ಇರಬೇಕು ಎಂದು ಇದೆ.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, It is not a rigid rule. ಈ ಹಿಂದೆ ಈಗ ಏನು ಮಾನ್ಯ ಸಿ.ಎಂ.ಇಬ್ರಾಹಿಂರವರು ಕೇಳಿದ್ದಾರೋ ಆ ವ್ಯವಸ್ಥೆ ಇತ್ತು.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಆಮೇಲೆ ನೀವು ಕಾರ್ಯದರ್ಶಿಯವರ ಜೊತೆ ಚರ್ಚೆ ಮಾಡಿದ ನಂತರ ರೂಲಿಂಗ್ ಕೊಡಿ. ಜರೂರಾಗಿ ಆತುರಬಿದ್ದು ಕೊಡಬೇಡಿ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಮಾನ್ಯ ಸದಸ್ಯರಿಗೆ ಮುಂಚೆಯೇ ಉತ್ತರ ಕಳುಹಿಸಿದರೆ ಏನು ತಪ್ಪಿದೆ? ಈ ಹಿಂದೆ ಆ ವ್ಯವಸ್ಥೆ ಇತ್ತಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇತ್ತೀಚಿನ ವರ್ಷಗಳಲ್ಲಿ ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಇಲ್ಲಿಯವರೆಗೂ ಅರ್ಧ ಗಂಟೆ ಮೊದಲು ಉತ್ತರವನ್ನು ಮಂಡಿಸುತ್ತಿದ್ದರು. ಅದು ಬದಲಾವಣೆಯಾಗಬೇಕಾದರೆ, ನಾವು ನಿರ್ಣಯ ಮಾಡಬೇಕಾಗುತ್ತದೆ.

**(ಗೊಂದಲ)**

**Sri S.R.PATIL:-** Business Advisory Committee ಯಲ್ಲಿ. . .

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಈ ಹಿಂದೆಯೂ ಸಹ ಮುಂಚಿತವಾಗಿ ಉತ್ತರವನ್ನು ಕೊಡುತ್ತಿದ್ದರು. ಅರ್ಧಗಂಟೆ ಮುಂಚಿತವಾಗಿ ಉತ್ತರವನ್ನು ಕೊಡಬೇಕೆಂದು ಯಾವಾಗ ನಿರ್ಣಯ ಮಾಡಿದ್ದೀರಿ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:-** ಮಾನ್ಯ ಸಿ.ಎಂ.ಇಬ್ರಾಹಿಂರವರೇ, ಅದು practice ಅಷ್ಟೆ. ಕೊಡಬೇಕೆಂದೇನಿಲ್ಲ. Practice ಆಗಿರುವುದು ಬಿಟ್ಟರೆ, ಅರ್ಧಗಂಟೆ ಮುಂಚಿತವಾಗಿ ಕೊಡಬೇಕೆಂದು ಎಲ್ಲೂ ಹೇಳಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಈಗ ಮಾನ್ಯ ಸಿ.ಎಂ.ಇಬ್ರಾಹಿಂರವರು ಕೇಳಿದಂತಹ ವಿಚಾರಕ್ಕೆ, ನೀವು well in advance ಆಗಿ ಉತ್ತರ ಕೊಟ್ಟರೆ ಹೇಗೆ? ಮುಂಚಿತವಾಗಿ ಉತ್ತರ ಕೊಟ್ಟರೆ, ಮಾನ್ಯ ಸದಸ್ಯರುಗಳು ಓದಿಕೊಂಡು ಸಮರ್ಪಕವಾದಂತಹ ಪೂರಕ ಪ್ರಶ್ನೆಗಳನ್ನು ತಯಾರು ಮಾಡಿಕೊಂಡು ಬಂದಾಗ, ಸಮಯ ವ್ಯರ್ಥವಾಗುವುದಿಲ್ಲ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಹೇಳುವುದು ಸರಿಯಿದೆ. Practice ಮಾಡಿದ್ದಾರೆ. ಕಾನೂನಿನೊಳಗೆ ಅವಕಾಶ ಇಲ್ಲ. ಅದನ್ನು between understanding ನಲ್ಲಿ ಮಾಡಬಹುದಿತ್ತೇ ವಿನಃ, ಕಾನೂನಿನೊಳಗೆ ಇದನ್ನು ಕೊಡಬೇಕೆಂದು ತೋರಿಸಿಲ್ಲ. ಅದನ್ನು ಮುಂಚಿತವಾಗಿ ಕೊಡಬೇಕೆಂದು ಕೂಡ ತೋರಿಸಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ನಮ್ಮ ಕಾರ್ಯ ಕಲಾಪ ಸಮಿತಿಯಲ್ಲಿಟ್ಟುಕೊಂಡು ಅದನ್ನು ಮಾರ್ಪಾಡು ಮಾಡಿಕೊಳ್ಳೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅದನ್ನು ಏನಾದರೂ ಬದಲಾವಣೆ ಮಾಡಿಕೊಳ್ಳಬೇಕಾದರೆ, Rules Committee ಯಲ್ಲಿಟ್ಟು ಮಾಡಬೇಕಾಗುತ್ತದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:–** ಇದನ್ನು Rules Committee ಯಲ್ಲಿಟ್ಟು ಬದಲಾವಣೆ ಮಾಡಿಕೊಳ್ಳಬೇಕೆಂದು ತಾವು ಹೇಳುವ ಸಲಹೆ ಸರಿಯಾಗಿದೆ. ಆ Rules Committee ಯಲ್ಲಿಟ್ಟು ಅದಕ್ಕೆ ಅವಕಾಶ ಮಾಡುವಂಥ ಕೆಲಸಗಳನ್ನು ಮಾಡೋಣ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಾವು ಹೇಳುವುದು ಸರಿಯಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಕಾರ್ಯಕಲಾಪಗಳ ಸಮಿತಿಯಲ್ಲಿಟ್ಟು ಅದನ್ನು ಸರಿಮಾಡಿಕೊಳ್ಳೋಣ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನದೊಂದು ಸಲಹೆ ಇದೆ. ದಯಮಾಡಿ ಪಾರ್ಲಿಮೆಂಟರಿ. . .

**ಹಂಗಾಮಿ ಸಭಾಪತಿಯವರು:–** ಮಾನ್ಯ ತಿಪ್ಪೇಸ್ವಾಮಿಯವರೇ, ಕಾರ್ಯಕಲಾಪ ಸಮಿತಿಯಲ್ಲಿಟ್ಟು ಅದಕ್ಕೆ ಅವಕಾಶ ಮಾಡಿಕೊಳ್ಳೋಣವೆಂದು ಹೇಳಲಾಗಿದೆ. ಮತ್ತೆ ಅದರ ಬಗ್ಗೆ ಚರ್ಚೆ ಮಾಡುವುದು ಬೇಡ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, Please hear me. ಪಾರ್ಲಿಮೆಂಟ್‌ನಲ್ಲಿ ಏನು procedure ಇದೆ, ಅದನ್ನು ಫಾಲೋ ಮಾಡೋಣ. ಅದೇ ರೀತಿ ರೂಲ್‌ನ್ನು ತಿದ್ದುಪಡಿ ಮಾಡಿಕೊಂಡು adopt ಮಾಡಿಕೊಳ್ಳೋಣ.

**ಹಂಗಾಮಿ ಸಭಾಪತಿಯವರು:–** ಕಾರ್ಯ ಕಲಾಪ ಸಮಿತಿಯಲ್ಲಿಟ್ಟು ಅದಕ್ಕೆ ಅವಕಾಶ ಮಾಡೋಣವೆಂದು ಹೇಳುತ್ತಿರುವುದು. ಆಯಿತು. ನಿಮ್ಮ ಸಲಹೆಗಳನ್ನು ತೆಗೆದುಕೊಂಡು ಅದನ್ನು ಮುಂದಿನ ದಿವಸ ಮಾಡುವಂಥ ಪ್ರಯತ್ನಗಳನ್ನು ಮಾಡೋಣ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅದನ್ನು ಮಾಡೋಣವೆಂದು ಹೇಳಿ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಮಾಡೋಣ, ನೋಡೋಣವೆಂದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:-** ಮಾನ್ಯ ಸಿ.ಎಂ.ಇಬ್ರಾಹಿಂರವರೇ, ಕಾನೂನನ್ನು ಉಲ್ಲಂಘನೆ ಮಾಡುವುದಕ್ಕೆ ನಮಗೆ ಅವಕಾಶಗಳಿದೆಯೇ? ನೋಡಿ, ನಾವು ಸಂವಿಧಾನದೊಳಗೆ ಇರತಕ್ಕಂಥ ಕಾನೂನನ್ನು ಉಲ್ಲಂಘನೆ ಮಾಡುವುದಕ್ಕೆ ಸಾಧ್ಯವೇ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಿಮ್ಮನ್ನು ನಾವು ಉಲ್ಲಂಘನೆ ಮಾಡಿಯೆಂದು ಹೇಳುವುದಿಲ್ಲ.

**(ಗೊಂದಲ)**

**ಹಂಗಾಮಿ ಸಭಾಪತಿಯವರು:-** ಅದನ್ನೇ ನಾನು ಹೇಳುತ್ತಿರುವುದು. ಸರ್ಕಾರವನ್ನು ಕೇಳಿ, ಅದರಲ್ಲಿ ಪ್ರಸ್ತಾಪಿಸಿ ತಿದ್ದುಪಡಿ ಮಾಡುವಂಥ ಕೆಲಸವನ್ನು ಮಾಡೋಣ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ತಾವು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ಒಂದು ನಿಮಿಷ. . .

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಒಂದು ವಿಚಾರವನ್ನು ಹೇಳುತ್ತೇನೆ. ಇದಾದನಂತರ, ಈ ಹಿಂದೆ ಮಾನ್ಯ ಸದಸ್ಯರು ಕೇಳಲಾದ ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಮುಂಚಿತವಾಗಿ ಉತ್ತರವನ್ನು ಕೊಡುತ್ತಿದ್ದರು. ಈಗ ಏಕೆ ಕೊಡುತ್ತಿಲ್ಲವೆಂದು ಸಾಧಕ-ಬಾಧಕಗಳ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರೋಣ. ಈಗ ಸುಮ್ಮನೆ ಏಕೆ ಚರ್ಚೆ ಮಾಡುವುದು?

**ಹಂಗಾಮಿ ಸಭಾಪತಿಯವರು:-** ಹೌದು. ಈಗ ಅದರ ಬಗ್ಗೆ ಚರ್ಚೆ ಮಾಡುವುದು ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**03.ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ.523**
**(ಉತ್ತರ ಲಗತ್ತಿಸಿದೆ)**

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ 6 ಪ್ರಶ್ನೆಗಳಿಗೆ ಮಾನ್ಯ ಸಚಿವರು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಕಳೆದ 3 ವರ್ಷಗಳಲ್ಲಿ ವಿಕಲಚೇತನರಿಗೆ ಜಾರಿಗೊಳಿಸಿರುವ ಯೋಜನೆಗಳಾವುವು ಮಾಹಿತಿ ನೀಡುವುದು ಎಂದು ಪ್ರಶ್ನೆ ಕೇಳಿದ್ದಕ್ಕೆ, ವಿಕಲಚೇತನರ ಶ್ರೇಯೋಭಿವೃದ್ಧಿಗೆ ಸರ್ಕಾರ ಜಾರಿಗೊಳಿಸಿರುವ ಯೋಜನೆಗಳ ವಿವರವನ್ನು ಅನುಬಂಧ-1ರಲ್ಲಿ ಹೇಳಿದ್ದಾರೆ. ಎರಡನೆಯದಾಗಿ, ಕಳೆದ ಮೂರು ವರ್ಷಗಳಲ್ಲಿ ಕೋಲಾರ ಜಿಲ್ಲೆಗೆ ವಿಕಲಚೇತನರ ಅಭಿವೃದ್ಧಿಗಾಗಿ ಸರ್ಕಾರ ನಿಗದಿಪಡಿಸಿ ಬಿಡುಗಡೆ ಮಾಡಿದ ವೆಚ್ಚವೆಷ್ಟು, ಯೋಜನೆಗಳವಾರು ವಿವರ ನೀಡುವುದು ಎಂದು ಕೇಳಿದ್ದೆನು. ಅದಕ್ಕೆ ಕೋಲಾರ ಜಿಲ್ಲೆಯ 2017-18, 2018-19 ಹಾಗೂ 2019-20ನೇ ಸಾಲಿನ ವಾರ್ಷಿಕ ಅನುದಾನದ ಬಿಡುಗಡೆ ಮತ್ತು ವೆಚ್ಚದ ವಿವರವನ್ನು ಅನುಬಂಧ-2ರಲ್ಲಿ ಹೇಳಿದ್ದಾರೆ. ಮೂರನೆಯದಾಗಿ, ಕಳೆದ 3 ವರ್ಷಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ವಿಕಲಚೇತನರಿಂದ ದ್ವಿಚಕ್ರ ವಾಹನಗಳಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೆನು. ಅದಕ್ಕೆ ಒಟ್ಟು 298 ಅರ್ಜಿಗಳು ಬಂದಿದ್ದು, ಅದರಲ್ಲಿ 160 ಅರ್ಜಿಗಳನ್ನು ವಿಲೇವಾರಿ ಮಾಡಿದ್ದೇವೆ; ಇನ್ನೂ 135 ಅರ್ಜಿಗಳು ಬಾಕಿ ಇವೆಯೆಂದು ಹೇಳಿದ್ದಾರೆ. 2019-20ನೇ ಸಾಲಿನಲ್ಲಿ ಇನ್ನೂ ಒಟ್ಟು 135 ಅರ್ಜಿಗಳು ಬಾಕಿ ಇವೆಯೆಂದು ಹೇಳಿದ್ದಾರೆ. 2020-21ನೇ ಸಾಲಿನ ಅರ್ಜಿಗಳ ಬಗ್ಗೆ ನಾನೇನು ಪ್ರಶ್ನೆ ಕೇಳಿಲ್ಲ. ಅದಕ್ಕೆ ಮಾನ್ಯ ಸಚಿವರೂ ಕೂಡ ಉತ್ತರವನ್ನು ಕೊಟ್ಟಿಲ್ಲ. 2019-20ನೇ ಸಾಲಿನಲ್ಲಿ ಇನ್ನೂ 135 ಅರ್ಜಿಗಳು ಬಾಕಿ ಇವೆಯೆಂದು ಉತ್ತರ ಕೊಟ್ಟಿದ್ದಾರೆ. ಅದುಅಲ್ಲದೇ ಅನುಬಂಧ-2ರಲ್ಲಿ 2017-18, 2018-19 ಮತ್ತು 2019-20ರಲ್ಲಿ ಯಂತ್ರಚಾಲಿತ ದ್ವಿಚಕ್ರ ವಾಹನಗಳ ಅರ್ಜಿಗಳನ್ನು ವಿಲೇವಾರಿ ಮಾಡಿರುವ ಕುರಿತಂತೆ, ಯಂತ್ರಚಾಲಿತ ದ್ವಿಚಕ್ರ ವಾಹನಗಳನ್ನು ಯಾವುದನ್ನೂ ಕೊಟ್ಟಿಲ್ಲವೆಂದು ಬ್ಲಾಂಕ್ ತೋರಿಸಿದ್ದಾರೆ. ಹಾಗಾದರೆ, ಯಾವುದು ಸರಿ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಅದುಅಲ್ಲದೇ ಪ್ರಶ್ನೆ ಸಂಖ್ಯೆ6ರಲ್ಲಿ ಪ್ರಸ್ತುತ ಇವರುಗಳಿಗೆ ನೀಡುತ್ತಿರುವ ಮಾಶಾಸನದ ಮೊತ್ತವೆಷ್ಟು ಎಂದು ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು 2015ರಲ್ಲಿ ವಿಕಲಚೇತನರಿಗೆ ರೂ.500/-ಗಳ ಮಾಸಾಶನವನ್ನು ನೀಡಲಾಗುತ್ತಿತ್ತು. 2018ರ ಸರ್ಕಾರದ ಆದೇಶದನ್ವಯ ಶೇ.40 ರಿಂದ 75 ರಷ್ಟು ಅಂಗವೈಕಲ್ಯವಿರುವ ಅರ್ಹ ವಿಕಲಚೇತನರಿಗೆ ನೀಡಲಾಗುತ್ತಿದ್ದ ಮಾಸಾಶನವನ್ನು ರೂ.500/- ರಿಂದ ರೂ.600/-ಗಳಿಗೆ ಹಾಗೂ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶೇ.75 ಕ್ಕಿಂತಲೂ ಹೆಚ್ಚು ಅಂಗವೈಕಲ್ಯವಿರುವ ಅರ್ಹ ವಿಕಲಚೇತನರಿಗೆ ನೀಡಲಾಗುತ್ತಿದ್ದ ಮಾಸಾಶನವನ್ನು ರೂ.1200/–ಗಳಿಂದ ರೂ.1400/–ಗಳಿಗೆ ಹೆಚ್ಚಿಗೆ ಮಾಡಲಾಗಿದೆಯೆಂದು ಉತ್ತರವನ್ನು ಕೊಟ್ಟಿದ್ದಾರೆ.

**(ಮುಂದು)**

**(191)05.02.2021/12.40/ಎಂ.ಎಂ–ಎ.ಕೆ**

**ಶ್ರೀ ಗೋವಿಂದರಾಜು (ಮುಂದು):–**

2018ರಿಂದ ಅದನ್ನು ರೂ. 1,400/– ಕ್ಕೆ ಹೆಚ್ಚಳ ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಅಲ್ಲದೇ ಅವರೇನು ಇಲಾಖೆಯಿಂದ ದ್ವಿಚಕ್ರ ವಾಹನಗಳನ್ನು ಕೊಡುತ್ತಾರೆ, ಆ ವಾಹನವನ್ನು ಕೊಟ್ಟು ತಿಂಗಳಿಗೆ ರೂ. 1,400 ರಷ್ಟು ಮಾಸಾಶನ ಕೊಟ್ಟರೆ ಅದರಲ್ಲಿ ಅವರು ಹೇಗೆ ಮನೆ ನಿರ್ವಹಣೆ ಮಾಡುವುದು, ಹೇಗೆ ಊಟ ಮಾಡುವುದು? ಅಥವಾ ಅವರು ಕೊಟ್ಟಂತಹ ವಾಹನಕ್ಕೆ ಇವತ್ತಿನ ಪೆಟ್ರೋಲ್ ಬೆಲೆಯಲ್ಲಿ ಪೆಟ್ರೋಲ್ ಹಾಕಿ ಹೇಗೆ ನಿರ್ವಹಣೆ ಮಾಡುವುದಕ್ಕಾಗುತ್ತದೆ? ಅದಕ್ಕೋಸ್ಕರವಾಗಿ ಅವರಿಗೆ ಏನಾದರೂ ಒಂದು ವಿಶೇಷವಾದಂತಹ ಅನುದಾನವನ್ನು ಕೊಡುವಂತಹ ಯೋಜನೆ ಸರ್ಕಾರದ ಮುಂದಿದೆಯೇ? ಅಲ್ಲದೇ ಅವರಿಗೆ ರೂ. 1,400/– ಪ್ರತಿ ತಿಂಗಳು ಮಾಸಾಶನ ಕೊಡುತ್ತಾರೆ ಇವತ್ತಿನ cost of living ಏನಿದೆ ಅದರಲ್ಲಿ ಅವರು; ಶೇ. 75 ರಿಂದ ಶೇ.100ರಷ್ಟು ವಿಕಲಚೇತನರಾಗಿರುವವರಿಗೆ ರೂ. 1,400 ಮಾಸಾಶನ ಕೊಡುತ್ತಾರೆ. ರೂ. 1,400/– ಇಲ್ಲಿ ಅವರು ಹೇಗೆ ಜೀವನ ಮಾಡುವುದಕ್ಕಾಗುತ್ತದೆ? ಆದ್ದರಿಂದ ಕನಿಷ್ಠ ಪಕ್ಷ ಮಾಸಿಕವಾಗಿ ರೂ. 6,000/– ಗಳನ್ನಾದರೂ ಕೊಡುವಂತಹ ಯೋಜನೆಯನ್ನು ಸರ್ಕಾರ ರೂಪಿಸಬೇಕೆಂದು ತಮ್ಮ ಮುಖಾಂತರ ಮನವಿ ಮಾಡುತ್ತಾ, ಬಾಕಿ ಇರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಮಾನ್ಯ ಸಭಾಪತಿಯವರೇ, ಈಗಾಗಲೇ 298 ಅರ್ಜಿಗಳು ಬಂದಿದ್ದು ಅದರಲ್ಲಿ 163 ಅರ್ಜಿಗಳು ವಿಲೇವಾರಿಯಾಗಿವೆ ಮತ್ತು 135 ಅರ್ಜಿಗಳು ವಿಲೇವಾರಿಯಾಗಿಲ್ಲ. ಇದು ಮೂರು ವರ್ಷಗಳಿಂದ ಬಂದಂತಹ ಅರ್ಜಿಗಳು. ಈಗ ವಿಲೇವಾರಿಯಾಗಿರುವ 163 ಅರ್ಜಿಗಳ ಫಲಾನುಭವಿಗಳಿಗೆ ಶೇ.75 ರಷ್ಟು ವಿಕಲಚೇತನ ಹೊಂದಿರುವ ವ್ಯಕ್ತಿಗಳಿಗೆ ನಮ್ಮ ಕಡೆಯಿಂದ ಏನೇನು ದಾಖಲಾತಿಗಳನ್ನು ಕೇಳುತ್ತಾರೆ ಅವೆಲ್ಲಾ ಪೂರ್ತಿ ಇದ್ದಾಗ ವಿಲೇವಾರಿ ಮಾಡಲಾಗುತ್ತದೆ. ಯಾವುದು ಪೂರ್ತಿ ದಾಖಲಾತಿಗಳಿಲ್ಲ ಅದನ್ನು ತಂದುಕೊಡಬೇಕೆಂದು ನಮ್ಮ ಜಿಲ್ಲಾ ಅಧಿಕಾರಿಗಳಿಂದ ಅವರಿಗೆ ಸಂದೇಶ ಹೋಗುತ್ತದೆ. ಅಕಸ್ಮಾತ್ ತಂದು ಕೊಟ್ಟರೆ ಅದನ್ನು ಹಂತ ಹಂತವಾಗಿ ವಿಲೇವಾರಿ ಮಾಡುತ್ತೇವೆ. ಆದರೆ ಅವರು ಮರಳಿ ಆ ದಾಖಲಾತಿಗಳನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡದಿರುವ ಕಾರಣದಿಂದ ವಿಲೇವಾರಿಯಾಗಿಲ್ಲ. ಎರಡನೆಯದಾಗಿ ಕೋಲಾರ ಜಿಲ್ಲೆಯಲ್ಲಿ ಮೂರು ವರ್ಷ ಕೂಡ ಯಾವುದೇ ಯಂತ್ರಚಾಲಿತವಾದ ದ್ವಿಚಕ್ರ ವಾಹನವನ್ನು ಕೊಟ್ಟಿಲ್ಲ ಎಂದು ಕೇಳಿದ್ದಾರೆ. ಬಹುಶಃ 2017–18 ಮತ್ತು 2018–19ರಲ್ಲಿ ಯಂತ್ರಚಾಲಿತ ವಾಹನಗಳನ್ನು ನಮ್ಮ ಇಲಾಖೆಯಿಂದ ಕೊಟ್ಟಿರಲಿಲ್ಲ. ಅಂದರೆ ಎಂ.ಎಲ್.ಎ ಫಂಡ್ ಮತ್ತು ಎಂ.ಪಿ ಫಂಡ್‌ಗಳಲ್ಲಿ ಕೊಡಲಾಗಿತ್ತು. ಆದರೆ 2019–20ರಲ್ಲಿ ನಾವು ಈ ವಾಹನಗಳನ್ನು ಕೊಟ್ಟಿದ್ದೇವೆ. ಯಾವುದೇ ವಾಹನಗಳನ್ನು ಕೊಟ್ಟಿಲ್ಲ ಎಂದಿರುವ ಉತ್ತರದ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ. ವಾಹನಗಳನ್ನು ಕೊಟ್ಟಿದ್ದೇವೋ ಇಲ್ಲವೋ ಎಂಬುದನ್ನು ನೋಡಿ ಕೊಟ್ಟಿಲ್ಲದಿದ್ದರೆ ದ್ವಿಚಕ್ರವಾಹನಗಳನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆ. ಶೇ.75ರಷ್ಟು ಅಂಗವಿಕಲತೆ ಹೊಂದಿರುವವರಿಗೆ ರೂ. 1,400/– ಪಿಂಚಣಿ ಬಹಳ ಕಡಿಮೆ ಇದೆ ಎನ್ನುವುದು ನಮ್ಮ ಗಮನಕ್ಕೂ ಬಂದಿದೆ. ಅದನ್ನು ನೋಡುತ್ತಿದ್ದೇವೆ. ಕಂದಾಯ ಇಲಾಖೆಗೂ ಅದರ ಬಗ್ಗೆ ಮಾಹಿತಿ ಬಂದಿದೆ. ಕಂದಾಯ ಇಲಾಖೆ ಮತ್ತು ನಾವು ಕೂತುಕೊಂಡು ಪಿಂಚಣಿಯನ್ನು ಜಾಸ್ತಿ ಮಾಡುವಂತಹ ಪ್ರಸ್ತಾವನೆ ಬಗ್ಗೆ ಪರಿಶೀಲನೆ ಮಾಡಿ, ಮೀಟಿಂಗ್ ಮಾಡಿ ಅದನ್ನು ಯಾವ ರೀತಿ ಜಾಸ್ತಿ ಮಾಡಬಹುದು, ಎಷ್ಟು ಜಾಸ್ತಿ ಮಾಡಬಹುದು ಎನ್ನುವ ಬಗ್ಗೆ ಆ ಇಲಾಖೆಯ ಜೊತೆ ಚರ್ಚೆ ಮಾಡಿ ಅದನ್ನು ಮಾಡುವಂತಹ ಪ್ರಯತ್ನ ಮಾಡುತ್ತೇನೆ.

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ವಿಕಲಚೇತನರಿಗೆ ಏನು ನಾವು ದ್ವಿಚಕ್ರವಾಹನಗಳನ್ನು ಕೊಡುತ್ತೇವೆ ಕೊಟ್ಟ ಮೇಲೆ ರೂ. 1,400/– ಮಾಸಾಶನ ತೆಗೆದುಕೊಂಡು ಅವರು ಹೇಗೆ ವಾಹನವನ್ನು ನಡೆಸುವುದಕ್ಕಾಗುತ್ತದೆ? ಹೇಗೆ ಜೀವನ ಮಾಡುವುದಕ್ಕಾಗುತ್ತದೆ? ಎನ್ನುವ ಪ್ರಶ್ನೆ ಕೇಳಿದ್ದೆ ಅದಕ್ಕೆ ನನಗೆ ಸರಿಯಾದ ಉತ್ತರ ಕೊಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಮಾನ್ಯ ಸಭಾಪತಿಯವರೇ, ದ್ವಿಚಕ್ರವಾಹನಗಳನ್ನು ಕೊಡುವುದರ ಉದ್ದೇಶವೇನೆಂದರೆ, ನಮ್ಮಲ್ಲಿ "ಆಧಾರ" ಎನ್ನುವ ಸ್ಕೀಂ ಇದೆ. ಮಹಿಳಾ ಅಭಿವೃದ್ಧಿ ನಿಗಮದಿಂದ ಸಬ್ಸಿಡಿ ಲೋನ್‌ಗಳನ್ನು ಕೊಡುತ್ತಿದ್ದೇವೆ. ಗಂಡು ಮಕ್ಕಳಿಗೂ ಕೂಡ ಸಬ್ಸಿಡಿ ಲೋನ್‌ಗಳನ್ನು ಕೊಡುತ್ತಿದ್ದೇವೆ. ಅದರ ಮುಖಾಂತರ ಅವರು ಉದ್ಯೋಗವನ್ನು ಮಾಡುತ್ತಾರೆ. ಅವರಿಗೆ ಬರುವುದಕ್ಕೆ, ಹೋಗುವುದಕ್ಕೆ ತೊಂದರೆಯಾಗಬಾರದು. ಎಲ್ಲಾ ಕಡೆ ಕೂಡ ಅವರು ಒಬ್ಬ ಸಾಮಾನ್ಯ ವ್ಯಕ್ತಿಯ ಹಾಗೆ ತಿರುಗಾಡಿ ವ್ಯವಹಾರಗಳನ್ನು ಮಾಡಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡು ವಾಹನಗಳನ್ನು ಕೊಡುತ್ತೇವೆ ಮತ್ತು ಅವರಿಗೆ ಸಬ್ಸಿಡಿ ಲೋನ್‌ಗಳನ್ನು ಕೂಡ ಕೊಡುತ್ತಿದ್ದೇವೆ. ಅವರಿಗೆ ಕೊಡುತ್ತಿರುವ ಪಿಂಚಣಿ ಕಡಿಮೆಯಾಗಿದೆ ಎನ್ನುವುದು ಬಹಳಷ್ಟು ಒಳ್ಳೆಯ ಸಲಹೆಯಾಗಿದೆ. ಏಕೆಂದರೆ ಎಲ್ಲರಿಗೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ಯೋಗಾವಕಾಶ ಇರುತ್ತದೆ ಎನ್ನುವಂತಿಲ್ಲ. ಕೆಲವು ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಂಡು ಅವರು ಜೀವನೋಪಾಯ ಮಾಡುತ್ತಿರುತ್ತಾರೆ. ಅದರ ಬಗ್ಗೆ ಆಗಲೇ ಹೇಳಿದ ಹಾಗೆ ಕಂದಾಯ ಇಲಾಖೆಯವರ ಗಮನಕ್ಕೂ ಬಂದಿದೆ. ನಾನು ಮತ್ತು ಕಂದಾಯ ಸಚಿವರು ಕುಳಿತುಕೊಂಡು ಅದರ ಬಗ್ಗೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

**ಹಂಗಾಮಿ ಸಭಾಪತಿಯವರು:–** ಈಗ ಮಾನ್ಯ ಹೆಚ್.ಎಂ. ರಮೇಶ್‌ಗೌಡರವರ ತಡೆಹಿಡಿಯಲಾದ ಪ್ರಶ್ನೆ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ವೃದ್ಧರಿಗೆ 80 ವರ್ಷದವರೆಗೂ ವೃದ್ಧಾಪ್ಯ ವೇತನವನ್ನು ಕೊಡಲಾಗುವುದೆಂದು ಸರ್ಕಾರದ ಆದೇಶವಿದೆ. ಆದರೆ 80 ವರ್ಷವಾದ ಮೇಲೆ ಅದಕ್ಕೆ ಅಪ್ಲೈ ಮಾಡುವ ಹಾಗಿಲ್ಲವೇ? ಅಥವಾ 80 ವರ್ಷವಾದ ತಕ್ಷಣ ವೃದ್ಧಾಪ್ಯ ವೇತನವನ್ನು ನಿಲ್ಲಿಸುತ್ತಾರಾ ಎಂದು ಕೇಳುತ್ತಿದ್ದೇನೆ.

**ಹಂಗಾಮಿ ಸಭಾಪತಿಯವರು:–** ಈಗ ಮಾನ್ಯ ಹೆಚ್.ಎಂ. ರಮೇಶ್‌ಗೌಡರವರ ತಡೆಹಿಡಿಯಲಾದ ಪ್ರಶ್ನೆ. ಮಾನ್ಯ ರಮೇಶ್‌ರವರೇ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, . . .

**ಹಂಗಾಮಿ ಸಭಾಪತಿಯವರು:–** ನಾನು ಮೊದಲೇ ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ಸಮಯಾವಕಾಶ ಇದ್ದಾಗ ಕೊಡುತ್ತೇನೆ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ವೃದ್ಧರಿಗೆ ವೃದ್ಧಾಪ್ಯ ವೇತನವನ್ನು 80 ವರ್ಷದವರೆಗೆ ಮಾತ್ರ ಕೊಡಲಾಗುತ್ತದೆ ಎಂದು ಸರ್ಕಾರದ ಆದೇಶವಿದೆ. 81 ವರ್ಷ ಆದವರಿಗೆ ಕೊಡುವುದಿಲ್ಲವೇ ಎಂಬುದಷ್ಟೇ ನನ್ನ ಪ್ರಶ್ನೆಯಾಗಿದೆ. 80 ವರ್ಷದವರೆಗೂ ವೃದ್ಧಾಪ್ಯ ವೇತನವನ್ನು ತೆಗೆದುಕೊಂಡವನಿಗೆ 81 ವರ್ಷವಾದ ತಕ್ಷಣ ವೃದ್ಧಾಪ್ಯ ವೇತನ ಕೊಡುವುದನ್ನು ನಿಲ್ಲಿಸಿಬಿಡುತ್ತೀರಾ? ಅದಕ್ಕೆ ಉತ್ತರ ಕೊಡಿ.

**ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ:–** ಮಾನ್ಯ ಸಭಾಪತಿಯವರೇ, ಇದನ್ನು ನನ್ನ ಗಮನಕ್ಕೆ ತಂದದ್ದು ಬಹಳ ಒಳ್ಳೆಯದು. ನಾನು ಆ ಕಡೆ ಗಮನ ಕೊಟ್ಟಿರಲಿಲ್ಲ. ವೃದ್ಧಾಪ್ಯ ವೇತನವನ್ನು 80 ವರ್ಷದವರೆಗೂ ಕೊಡುತ್ತೀರಾ ಅಥವಾ 81 ವರ್ಷದವರೆಗೂ ಮುಂದುವರೆಸುತ್ತೀರಾ ಎಂದು ಕೇಳಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದರ ಬಗ್ಗೆ ನಾನು ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ ಹಾಗೂ ಇದನ್ನು ಯಾವ ರೀತಿ ಬದಲಾವಣೆ ಮಾಡಬಹುದು ಎಂದು ಪರಿಶೀಲನೆ ಮಾಡುತ್ತೇನೆ. 80 ವರ್ಷದವರೆಗೂ ಎಂದು ಇದೆ ಆದರೆ ಸಾಯುವವರೆಗೂ ವೃದ್ಧಾಪ್ಯ ವೇತನವನ್ನು ಕೊಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಹೆಚ್.ಎಂ. ರಮೇಶ್‌ಗೌಡರ ತಡೆಹಿಡಿಯಲಾದ ಪ್ರಶ್ನೆ ಕೇಳಿದ್ದಾರೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳಿಗೆ ತಡೆಹಿಡಿಯಲಾದ ಪ್ರಶ್ನೆ ಇರುವುದು ಗೊತ್ತಿರಲಿಲ್ಲ, ಅವರು ವಿಧಾನಸಭೆಗೆ ಹೋಗಿದ್ದಾರೆ. ಆದ್ದರಿಂದ ಇದಕ್ಕೆ ಸೋಮವಾರದಂದು ಉತ್ತರ ಕೊಡಿಸುತ್ತೇನೆ.

**ಶ್ರೀ ಹೆಚ್.ಎಂ. ರಮೇಶ್ ಗೌಡ:–** ಆಗಲಿ.

**ಹಂಗಾಮಿ ಸಭಾಪತಿಯವರು:–** ಈಗ ಲಿಖಿತವಾಗಿ ಉತ್ತರಿಸುವ ಪ್ರಶ್ನೆಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 05ನೇ ಫೆಬ್ರವರಿ 2021 ಸಮೂಹ–5ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 89 ಪ್ರಶ್ನೆಗಳ ಪೈಕಿ 45 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಲಿಖಿತ ಮೂಲಕ ನೀಡಲಾದ ಉತ್ತರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 04. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ 50% ಮಾತ್ರ ಉತ್ತರ ಬಂದಿರುವ ಬಗ್ಗೆ

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾನಾಯಕರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಕೊಡುವ ಉತ್ತರವನ್ನು ಶೇ.50ಕ್ಕೆ ಇಳಿಸಿದ್ದಾರೆ. ಮೊದಲು ಶೇ.50 ರಷ್ಟು ಇತ್ತು ನಂತರ ಶೇ.75 ಗೆ ಹೆಚ್ಚಳವಾಯಿತು. ಈಗ ಮತ್ತೆ ಶೇ.50ಕ್ಕೆ ಇಳಿಸಿದ್ದೀರಿ ಹೀಗೆ ಮಾಡಿದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಬರುವ ಸೋಮವಾರದಂದು ಮತ್ತೆ ಜಾಸ್ತಿ ಮಾಡುತ್ತೇವೆ. ಎಲ್ಲವನ್ನೂ ಕಳುಹಿಸಿಕೊಡುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ಯಾವ ಯಾವ ಪ್ರಶ್ನೆಗಳು ಉಳಿದಿವೆಯೋ ಅದನ್ನು ಮಂತ್ರಿಗಳ ಸಮಕ್ಷಮ ಹೇಳಿದರೆ ಅವರು ಪ್ರಧಾನ ಕಾರ್ಯದರ್ಶಿಗಳನ್ನು ಕರೆಸಿ tune up ಮಾಡುತ್ತಾರೆ. ಬುಧವಾರದೊಳಗೆ ಪ್ರತಿಯೊಂದು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ ಸಿಗುವ ಹಾಗೆ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಸಲಹೆಯನ್ನು ತೆಗೆದುಕೊಂಡು ಪ್ರಶ್ನೆಗಳಿಗೆ ಪೂರ್ಣ ಪ್ರಮಾಣದಲ್ಲಿ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಪ್ರಶ್ನೆಗಳಿಗೆ ಕೊಡುವ ಉತ್ತರಗಳ ಸಂಖ್ಯೆ ಒಮ್ಮೆ ಏರುತ್ತದೆ ಮತ್ತೊಮ್ಮೆ ಇಳಿಯುತ್ತದೆ.

**ಹಂಗಾಮಿ ಸಭಾಪತಿಯವರು:–** ಈಗ ಶೂನ್ಯವೇಳೆಯನ್ನು ತೆಗೆದುಕೊಳ್ಳಲಾಗುವುದು. ಮೊದಲಿಗೆ ಮಾನ್ಯ ಮರಿತಿಬ್ಬೇಗೌಡರು.

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಈಗ ಅಧಿವೇಶನವನ್ನು ಎಷ್ಟು ಹೊತ್ತಿನತನಕ ನಡೆಸುತ್ತೀರಿ? ಏಕೆಂದರೆ, ಶುಕ್ರವಾರದಂದು ಮಧ್ಯಾಹ್ನ ಎರಡು ಗಂಟೆಗೆ ನಾವು ಊರಿಗೆ ಹೋಗುತ್ತೇವೆ. ಇದು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆಂದು ಕರೆಯಲಾಗಿದೆ. ಅದನ್ನು ಸೋಮವಾರಕ್ಕೆ ತೆಗೆದುಕೊಳ್ಳುತ್ತೀರೋ? ಸದನವನ್ನು ಎರಡು ಗಂಟೆಗೆ adjourn ಮಾಡುತ್ತೀರೋ? ಪ್ರಮುಖವಾಗಿ ನಿಮ್ಮಿಂದ ಇದಕ್ಕೆ ರೂಲಿಂಗ್ ಆಗಬೇಕು. ನಾವು ಎಷ್ಟು ಹೊತ್ತಿನವರೆಗೆ ಕೂರಬೇಕು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:–** ಇದೇ ಉದ್ದೇಶಕ್ಕೆ ನಾನು ಪ್ರಶ್ನಾವಳಿಯನ್ನು ಆದಷ್ಟು ಬೇಗ ಮುಗಿಸಬೇಕೆಂದು ಮಾಡಿದ್ದು ನಿಮಗೆ ಗೊತ್ತಿದೆ. ಮಧ್ಯದಲ್ಲಿ ತಡವಾಯಿತು. ಪ್ರಶ್ನೋತ್ತರ ಅವಧಿಯಲ್ಲಿ ಸಮಯ ಕೊಟ್ಟಷ್ಟೂ ಸಮಯ ಹೋಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, procedure ಏನಿದೆ ಎಂದರೆ, Business Advisory Committee ಮುಗಿದ ನಂತರ ಅಲ್ಲಿ ತೆಗೆದುಕೊಂಡಂತಹ ನಿರ್ಣಯಗಳನ್ನು ಇಲ್ಲಿ ಪ್ರಕಟ ಮಾಡಬೇಕು. ಅದು ಉಳಿದಿದೆ ದಯಮಾಡಿ ಅದನ್ನು ಮಾಡಿ.

**ಹಂಗಾಮಿ ಸಭಾಪತಿಯವರು:–** ಆಯಿತು.

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಸದನವನ್ನು ದಯಮಾಡಿ ಮಧ್ಯಾಹ್ನ ಎರಡು ಗಂಟೆಗೆ ಮುಕ್ತಾಯ ಮಾಡಬೇಕೆಂದು ವಿನಂತಿಸುತ್ತೇನೆ.

**ಹಂಗಾಮಿ ಸಭಾಪತಿಯವರು:–** ಆಯಿತು.

**(ಮುಂದು)**

**(192) 05–02–2021/ 12–50/ ಕೆಹೆಚ್–ಎಕೆ**

**05. ಸಭಾಪತಿಯವರ ಅನುಜ್ಞೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ)** ವಿಷಯ:– 2020–21ನೇ ಶೈಕ್ಷಣಿಕ ವರ್ಷಕ್ಕೆ ಹಿಂದಿನ ವರ್ಷದ ಶೇಕಡ 50 ರಷ್ಟು ಮಾತ್ರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿರುವ ಬಗ್ಗೆ.

***

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಈಗಾಗಲೇ ಪ್ರಥಮ ದರ್ಜೆ ಕಾಲೇಜುಗಳು ಪೂರ್ಣ ಪ್ರಮಾಣದಲ್ಲಿ ಪ್ರಾರಂಭಗೊಂಡಿರುವುದರಿಂದ, ಒಟ್ಟು 14,183 ಅತಿಥಿ ಉಪನ್ಯಾಸಕರ ಪೈಕಿ ಶೇಕಡಾ 50 ರಷ್ಟು (7091) ಮಾತ್ರ ಆಯ್ಕೆ ಮಾಡಿಕೊಳ್ಳಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಸುತ್ತೋಲೆ ಸಂಖ್ಯೆ: ಕಾಶಿಇ:ನೇವಿ–1: ಅಉಅ:19:2019–20, ದಿನಾಂಕ: 19–01–2021 ರೀತ್ಯಾ ಅನುಮತಿ ನೀಡಿರುವುದು ಶೋಚನೀಯ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅತಿಥಿ ಉಪನ್ಯಾಸಕರು ಬೋಧನೆಯನ್ನೇ ನಂಬಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದು, ಕೋವಿಡ್–19ರ ಸಂದಿಗ್ಧ ಪರಿಸ್ಥಿತಿಯಲ್ಲಿ ಇವರಿಗೆ ಸೆಪ್ಟೆಂಬರ್–2020 ರಿಂದ ಜನವರಿ–2021ರವರೆಗೆ 5 ತಿಂಗಳುಗಳ ಗೌರವಧನವನ್ನು ಬಿಡುಗಡೆಗೊಳಿಸದೇ ಇರುವುದರಿಂದ ಜೀವನೋಪಾಯಕ್ಕೆ ಬಹಳ ತೊಂದರೆಯುಂಟಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಕೇವಲ 50 ರಷ್ಟು ಅತಿಥಿ ಉಪನ್ಯಾಸಕರನ್ನು ಮಾರ್ಚ್–2021 ರವರೆಗೆ ಮಾತ್ರ ನೇಮಕ ಮಾಡಿಕೊಳ್ಳತಕ್ಕದೆಂದು ಸುತ್ತೋಲೆ ಹೊರಡಿಸಿರುವುದು ಗಾಯದ ಮೇಲೆ ಬರೆ ಎಳದಂತಾಗಿದೆ. ಕಳೆದ ಸಾಲಿನಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಯಥಾವತ್ತಾಗಿ ಮುಂದುವರೆಸುವಂತೆ ಈಗಾಗಲೇ ಹಲವಾರು ಪತ್ರಗಳ ಮುಖೇನ, ಸಭೆಗಳಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರನ್ನು ಹಾಗೂ ಇಲಾಖೆಯ ಉನ್ನತಾಧಿಕಾರಿಗಳನ್ನು ಭೇಟಿ ನೀಡಿದ ಸಂದರ್ಭದಲ್ಲಿ ವಿನಂತಿಸಲಾಗಿರುತ್ತದೆ. ಇತ್ತೀಚೆಗೆ ಮಾನ್ಯ ಸಚಿವರು ಮೈಸೂರು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಭರವಸೆ ನೀಡಿರುತ್ತಾರೆ. ಆದರೆ, ಈ ಸಂಬಂಧ ಇದುವರೆವಿಗೂ ಯಾವುದೇ ಆದೇಶ ಹೊರಡಿಸಿರುವುದಿಲ್ಲ. ಇದರಿಂದಾಗಿ ಅತಿಥಿ ಉಪನ್ಯಾಸಕರು ಆತಂಕದಲ್ಲಿದ್ದಾರೆ.

ಆದಕಾರಣ, ಸದರಿ ವಿಷಯವನ್ನು ಅತಿ ಗಂಭೀರವಾಗಿ ಪರಿಗಣಿಸಿ, ಕೂಡಲೇ ಎಲ್ಲಾ (ಒಟ್ಟು 14,183) ಅತಿಥಿ ಉಪನ್ಯಾಸಕರನ್ನು (ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಸೇವೆ ಸಲ್ಲಿಸುತ್ತಿದ್ದ ಎಲ್ಲರನ್ನು) ಪ್ರಸಕ್ತ ಶೈಕ್ಷಣಿಕ ಸಾಲಿನ ಅಂತ್ಯದವರೆಗೂ ಅದೇ ಕಾಲೇಜುಗಳಲ್ಲಿ ಯಥಾವತ್ತಾಗಿ ಮುಂದುವರೆಸುವಂತೆ ಹಾಗೂ ಅವರಿಗೆ ನೀಡಬೇಕಾದ 5 ತಿಂಗಳ ಬಾಕಿ ಗೌರವಧನವನ್ನು ಕೂಡಲೇ ಬಿಡುಗಡೆಗೊಳಿಸುವಂತೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಐ.ಟಿ. ಅಂಡ್ ಬಿ.ಟಿ. ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಗಂಭೀರವಾದ ವಿಷಯವಾಗಿದ್ದು, ಈ ವಿಷಯ ಶೂನ್ಯವೇಳೆಯಲ್ಲಿ ಬಂದರೂ ಸಹ ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರು ಪ್ರಸ್ತಾಪ ಮಾಡಿರುವ ವಿಷಯ ಬಹಳ ಜ್ವಲಂತ ಸಮಸ್ಯೆಯಾಗಿ ಪರಿಣಮಿಸಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಕಡೆ ಅತಿಥಿ ಉಪನ್ಯಾಸಕಿ ಆತ್ಮಾಹತ್ಯೆಗೂ ಕೂಡ ಪ್ರಯತ್ನ ಮಾಡಿದ್ದಾರೆ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರೇ, ಶೂನ್ಯವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಹೌದು, ಶೂನ್ಯವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಇದು ಅತ್ಯಂತ ಗಂಭೀರವಾದ ವಿಷಯವಾಗಿದೆ. ದಯಮಾಡಿ, ಮಾನ್ಯ ಶಿಕ್ಷಣ ಮಂತ್ರಿಗಳು . . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು burning issue ಆಗಿರುವುದರಿಂದ, ಮಾನ್ಯ ಉಪ ಮುಖ್ಯಮಂತ್ರಿಯವರು positive ಆಗಿ ಉತ್ತರವನ್ನು ಹೇಳಬೇಕು.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ನಮ್ಮೆಲ್ಲರ ಬೆಂಬಲ ಇದೆ.

**ಶ್ರೀ ಸಿ.ಎನ್. ಅಶ್ವಥ್ ನಾರಾಯಣ್ (ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಐ.ಟಿ. ಅಂಡ್ ಬಿ.ಟಿ. ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಇಲಾಖೆ):-** ಮಾನ್ಯ ಸಭಾಪತಿಯವರೇ, ಬಹಳ ಪ್ರಮುಖವಾಗಿ ಪೂರ್ಣ ಪ್ರಮಾಣದಲ್ಲಿ ಅತಿಥಿ ಉಪನ್ಯಾಸಕರ ಅವಶ್ಯಕತೆ ಇದೆ. ಇದರಲ್ಲಿ ಶೇಕಡಾ 50 ರಷ್ಟು ಅತಿಥಿ ಉಪನ್ಯಾಸಕರಿಗೆ ಅವಕಾಶ ಮಾಡಿಕೊಡುವುದಾಗಿದೆ. ಇನ್ನು ಉಳಿದ ಶೇಕಡಾ 50 ರಷ್ಟು ಅತಿಥಿ ಉಪನ್ಯಾಸಕರಿಗೆ ಅವಕಾಶ ಮಾಡಿಕೊಡುವಂತಹ ಕೆಲಸ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ಈಗಾಗಲೇ ಕ್ರಮವಹಿಸುವಂತಹದ್ದು ಆಗಿದೆ. ಇದರ ಬಗ್ಗೆ ಕ್ರಮವಹಿಸಿ ಸಂಪೂರ್ಣವಾಗಿ ಶೇಕಡಾ 100 ರಷ್ಟು ಅತಿಥಿ ಉಪನ್ಯಾಸಕರು ಈಗ ಯಾರು ಕೆಲಸ ಮಾಡುತ್ತಿದ್ದಾರೆ. ಅವರನ್ನೇ ಮುಂದುವರೆಸುವುದಕ್ಕೆ ಈ ವರ್ಷದಲ್ಲಿ ಮಾಡುವಂತಹದ್ದು ಆಗುತ್ತದೆ. ಅದನ್ನು ನಾವು ಮಾಡುತ್ತೇವೆ ಮತ್ತು ಈಗಾಗಲೇ ಕೋವಿಡ್-19ರ ಸಂದರ್ಭದಲ್ಲಿ ಕೆಲಸ ಮಾಡಿದಂತಹ ಅತಿಥಿ ಉಪನ್ಯಾಸಕರಿಗೆ 5 ತಿಂಗಳ ಸಂಬಳ ಕೊಡುವಂತಹದ್ದು ಆಗಿದೆ. ಇನ್ನು ಉಳಿದ ನಮ್ಮ ಬಜೆಟ್‌ನಲ್ಲಿ surplus ಹಾಕಿ, ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರ ಒತ್ತಾಯಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಮಣಿದು ಅವರು ಕೆಲಸ ಮಾಡಿದಂತಹ ಕಾಲದಲ್ಲಿಯೂ 5 ತಿಂಗಳ ಸಂಬಳ ಕೊಡುವಂತಹದ್ದು ಆಗಿದೆ. ಈಗ ಉಳಿಕೆ ಇರುವುದು ಅವಶ್ಯಕತೆ ಇದೆ. ಅದನ್ನು ತಕ್ಷಣ ಬಗೆಹರಿಸುವಂತಹದ್ದು ಮಾಡುತ್ತೇವೆ ಎನ್ನುವ ವಿಶ್ವಾಸವನ್ನು ನಾನು ತಮಗೆ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಕಾಲೇಜುಗಳು ಪ್ರಾರಂಭವಾಗಿದ್ದು, ತರಗತಿಗಳು ನಡೆಯುತ್ತಿವೆ. ಆ ಎಲ್ಲಾ ಅತಿಥಿ ಉಪನ್ಯಾಸಕರನ್ನು ತೆಗೆದುಕೊಳ್ಳುವುದಕ್ಕೆ ಯಾವಾಗ ಆದೇಶ ಮಾಡುತ್ತಾರೆ ಎಂದು ಮಾನ್ಯ ಸಚಿವರು ತಿಳಿಸಿದರೆ ಒಳ್ಳೆಯದಾಗುತ್ತದೆ.

**ಶ್ರೀ ಸಿ.ಎನ್. ಅಶ್ವತ್ಥ್ ನಾರಾಯಣ್:–** ಮಾನ್ಯ ಸಭಾಪತಿಯವರೇ, ಅತಿಥಿ ಉಪನ್ಯಾಸಕರನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇವೆಯಲ್ಲವೇ?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ಅತಿಥಿ ಉಪನ್ಯಾಸಕರನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಸ್ವಾಮಿ, ಇವರನ್ನು ಮುಂದಿನ ವರ್ಷ ತೆಗೆದುಕೊಳ್ಳುತ್ತೀರಾ. ಈ ಕೋವಿಡ್–19 ರ ಪರಿಸ್ಥಿತಿಯಲ್ಲಿ ಪಾಠಗಳೇ ನಡೆಯಲಿಲ್ಲ. ಇನ್ನು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಆನ್‌ಲೈನ್ ಶಿಕ್ಷಣದ ವ್ಯವಸ್ಥೆ ದೊರೆಯಲಿಲ್ಲ. ಈಗ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ. ಈಗ ವರ್ಕ್‌ಲೋಡ್ ಜಾಸ್ತಿ ಇರುತ್ತದೆ. ನಾಳೆಯೇ ಈ ಆದೇಶವನ್ನು ಹೊರಡಿಸಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಕಾಲೇಜುಗಳಲ್ಲಿ ಅರ್ಧ ತರಗತಿಗಳು ನಡೆಯುತ್ತಿವೆ. ಅರ್ಧ ತರಗತಿಗಳು ನಡೆಯುತ್ತಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಚಿವರೇ, ಇದರ ಬಗ್ಗೆ ತಾವು ಸಂಪೂರ್ಣವಾಗಿ ಅರ್ಥ ಮಾಡಿಕೊಂಡಿದ್ದೀರಿ ಮತ್ತು ಚೆನ್ನಾಗಿ ತಿಳಿದುಕೊಂಡಿದ್ದೀರಿ. ತಮಗೆ ಕೊಡಬೇಕೆನ್ನುವುದು ಮನವರಿಕೆಯಾಗಿದೆ. ದಯವಿಟ್ಟು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇವತ್ತಿನ ದಿವಸವೇ ಆದೇಶವನ್ನು ಹೊರಡಿಸಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಾಮಾಜಿಕ ಅಂತರವನ್ನು ಇಟ್ಟುಕೊಂಡು ಈಗಾಗಲೇ ಮೊದಲನೇ ವರ್ಷ, ಎರಡನೇ ವರ್ಷ ಮತ್ತು ಮೂರನೇ ವರ್ಷದ ತರಗತಿಗಳನ್ನು ಪ್ರಾರಂಭ ಮಾಡಿದ್ದಾರೆ. ಇದರ ಅನಿವಾರ್ಯ ಇದೆ. ಮಕ್ಕಳು ಆಚೆ ಇರುವುದು, ಒಳಗಡೆ ಇರುವುದು ಚೆನ್ನಾಗಿರುವುದಿಲ್ಲ.

**ಶ್ರೀ ಸಿ.ಎನ್. ಅಶ್ವತ್ಥ್ ನಾರಾಯಣ್:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ ಮತ್ತು ಮಾನ್ಯ ಮರಿತಿಬ್ಬೇಗೌಡರವರೇ, ತಾವೆಲ್ಲಾ ಪದವೀಧರರ ಕ್ಷೇತ್ರ ಮತ್ತು ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿರುವವರು. ಇದು ನಮಗೆ ಎಂದು ಅಂದುಕೊಳ್ಳಬೇಡಿ. ಕೆಲವೊಂದು ಬಾರಿ ಆರ್ಥಿಕ ಇಲಾಖೆಯವರ ತೀರ್ಮಾನವನ್ನು ಸಹ ತೆಗೆದುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇನ್ನು ಉಳಿದಿರುವ 4 ತಿಂಗಳಿನಲ್ಲಿ ವರ್ಷವೆಲ್ಲಾ ಇರುವ ಪಾಠವನ್ನು ಮುಗಿಸಬೇಕಲ್ಲವೇ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡರವರೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಸಿ.ಎನ್. ಅಶ್ವಥ್ ನಾರಾಯಣ್:–** ಮಾನ್ಯ ಸಭಾಪತಿಯವರೇ, ಈಗ ತಾನೇ ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರಿಗೆ ಈ ವರ್ಷ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇನೆ. ಆದರೆ, ಅವರು ಮುಂದಿನ ವರ್ಷಕ್ಕೆ ತೆಗೆದುಕೊಳ್ಳುತ್ತೀರಾ ಎಂದರೆ ಇದಕ್ಕೆ ನಾನೇನು ಹೇಳುವುದು. ಅವರೇ ಮುಂದಿನ ವರ್ಷಕ್ಕೆ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಈಗ ತೆಗೆದುಕೊಂಡು ಮಾಡುತ್ತೇವೆ ಎಂದು ಹೇಳುತ್ತಿದ್ದೇವೆ. ದಿನಾಂಕವನ್ನು ಸ್ಪಷ್ಟವಾಗಿ ಹೇಳಿದರೆ, ತಮಗೆ ದಿನಾಂಕವನ್ನು ಹೇಳಿದ ಮೇಲೆ ಆ ದಿನಾಂಕಕ್ಕೆ ಸರಿಯಾಗಿ ಈಡೇರಿಸುವಂತಹ ಕೆಲಸವಾಗಬೇಕು. ಖಂಡಿತವಾಗಿಯೂ ತೆಗೆದುಕೊಂಡು ಪರಿಹರಿಸುವಂತಹದ್ದನ್ನು ನಾವು ಮಾಡುತ್ತೇವೆ. ಇದನ್ನು ಅತಿ ಶೀಘ್ರದಲ್ಲಿಯೇ ಮಾಡುತ್ತೇವೆ.

**ಆ)** ವಿಷಯ:– ರಾಜ್ಯದ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಭ್ರಷ್ಟಾಚಾರ, ಮಧ್ಯವರ್ತಿಗಳ ಹಾವಳಿಯಿಂದ ಕಛೇರಿಗಳು ಪಾರದರ್ಶಕ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದರ ಬಗ್ಗೆ.

***

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿರುವ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ವ್ಯಾಪಕ ಭ್ರಷ್ಟಾಚಾರ, ಮಧ್ಯವರ್ತಿಗಳ ಹಾವಳಿ ಹಿನ್ನೆಲೆಯಲ್ಲಿ ಆಗಾಗ್ಗೆ ಭ್ರಷ್ಟಾಚಾರ ನಿಗ್ರಹ ದಳದಿಂದ ಧಾಳಿ ನಡೆಯುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ.

ಹೊಸ ಆರ್.ಸಿ.ಪುಸ್ತಕ, ಸ್ಮಾರ್ಟ್‌ಕಾರ್ಡ್, ಡಿ.ಎಲ್. ಪರ್ಮಿಟ್ ಸೇರಿದಂತೆ ಇನ್ನಿತರೆ ದಾಖಲೆಗಳನ್ನು ಮಧ್ಯವರ್ತಿಗಳು, ಏಜೆಂಟ್‌ರ ಕಛೇರಿ, ಮಳಿಗೆಗಳಲ್ಲಿ ಪತ್ತೆಯಾಗಿವೆ. ನೂರಾರು ದಾಖಲೆಗಳು ಅಲ್ಲಿ ಹೇಗೆ ಹೋದವು ಎಂಬುದರ ಬಗ್ಗೆ ಈಗಾಗಲೇ ಎಸಿಬಿಯಿಂದ ನೋಟೀಸ್ ನೀಡಿರುವುದು ತಿಳಿದುಬಂದಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಲಂಚ ಇಲ್ಲದೆ ಯಾವುದೇ ಕೆಲಸಗಳು ಆಗುವುದಿಲ್ಲ ಎಂದು ಬಹಳಷ್ಟು ಜನ ದೂರು ಕೊಟ್ಟ ಹಿನ್ನೆಲೆಯಲ್ಲಿ ಈ ದಾಳಿಗಳು ನಡೆಯುತ್ತಿರುವುದು ವರದಿಯಾಗಿದೆ. ಸರ್ಕಾರ ಆನ್‌ಲೈನ್ ಮೂಲಕ ಸೇವೆಗಳನ್ನು ನೋಂದಾಯಿಸಿಕೊಳ್ಳಲು ಅವಕಾಶ ನೀಡಿದ್ದರೂ ಸಹ ಮಾಹಿತಿ ಇಲ್ಲದವರು ಅಥವಾ ಆನ್‌ಲೈನ್‌ನಲ್ಲಿ ಪ್ರಯತ್ನಿಸಿ ಅರ್ಜಿ ಹಾಕಲು ಸಾಧ್ಯವಾಗದವರು ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ ಹೋದ ಸಂದರ್ಭದಲ್ಲಿ ಮಧ್ಯವರ್ತಿಗಳು ಇವರನ್ನು ಆವರಿಸಿಕೊಂಡು ಸಾರಿಗೆ ಇಲಾಖೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಭ್ರಷ್ಟಾಚಾರದಲ್ಲಿ ತೊಡಗಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ. ಮಧ್ಯವರ್ತಿಗಳಿಗೆ, ಏಜೆಂಟರ್‌ಗಳಿಗೆ ಹಣ ನೀಡದೆ ಇದ್ದರೆ ಯಾವುದೇ ಕೆಲಸ ಆಗುವುದಿಲ್ಲ ಎನ್ನುವ ಮಾತು ಆರ್‌ಟಿಓ ಕಛೇರಿಗಳಲ್ಲಿ ಜಗಜ್ಜಾಹೀರಾಗಿದೆ.

ಆದಕಾರಣ, ಈ ವಿಷಯದ ಬಗ್ಗೆ ಮಾನ್ಯ ಸಾರಿಗೆ ಸಚಿವರು ಕೂಡಲೇ ಗಮನಹರಿಸಿ ಪಾರದರ್ಶಕ ರೀತಿಯಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿಗಳು ಕಾರ್ಯ ನಿರ್ವಹಿಸುವಂತಾಗಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ):-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಿಸಿದಂತೆ ಇನ್ನೂ ಉತ್ತರ ಬಂದಿಲ್ಲ. ಇದಕ್ಕೆ ನಾನು ಉತ್ತರವನ್ನು ಒದಗಿಸಿಕೊಡುತ್ತೇನೆ. ಆದರೆ, ಆ ಉತ್ತರ ಬರುವುದಕ್ಕಿಂತ ಮೊದಲು ತಾವು ಏನೇನು ವಿಷಯಗಳನ್ನು ಗಮನಕ್ಕೆ ತಂದಿದ್ದೀರಿ. ಅದನ್ನು ಎಲ್ಲೆಲ್ಲಿ ಬಿಗಿ ಮಾಡುವುದಕ್ಕೆ ಸಾಧ್ಯ ಇದೆಯೇ, ಅಲ್ಲಿ ಖಂಡಿತವಾಗಿಯೂ ಬಿಗಿ ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ ಮತ್ತು online trial ನಡೆದಿದೆ. ಆನ್‌ಲೈನ್‌ನಲ್ಲಿ success ಆಗಿದ ಕೂಡಲೇ ಒಂದು ವಾರದೊಳಗೆ ಡಿ.ಎಲ್., ಆರ್.ಸಿ. ಪುಸ್ತಕ ವರ್ಗಾವಣೆಯನ್ನೂ ಆನ್‌ಲೈನ್‌ನಲ್ಲಿಯೇ ಮಾಡುತ್ತೇವೆ. ಇದರ ಬಗ್ಗೆ ಬಹುತೇಕವಾಗಿ ತಮಗೆ ಗೊತ್ತಿದೆ. ಮುಂದಿನ ದಿನಮಾನಗಳಲ್ಲಿ ಈಗಾಗಲೇ ಕೇಂದ್ರ ಸರ್ಕಾರ ಘೋಷಣೆಯನ್ನು ಮಾಡಿದೆ. ಈಗ ಎಲ್ಲೆಲ್ಲಿ ಟೋಲ್‌ಗಳಲ್ಲಿರುವಂತಹದ್ದನ್ನು ಆರ್.ಟಿ.ಓ., ಕಛೇರಿಗಳಲ್ಲಿ ಅದೇನೆಲ್ಲಾ ತೆಗೆಯಬೇಕು. ಮುಂದಿನ ದಿನಮಾನಗಳಲ್ಲಿ ಆನ್‌ಲೈನ್‌ನಲ್ಲಿಯೇ ನಡೆಸಬೇಕೆಂದು ಕೇಂದ್ರ ಸರ್ಕಾರದ ಪಾಲಿಸಿಯಲ್ಲಿ ಇದೆ. 'One Nation One Card' ತರುವಂತಹದ್ದು, 'One Nation One Tax' ಅನ್ನು ತರುವಂತಹದ್ದು. ಅನೇಕ ಬದಲಾವಣೆಗಳನ್ನು ಕೇಂದ್ರ ಸರ್ಕಾರ ಮಾಡಿದೆ. ಈಗಾಗಲೇ ಕೇಂದ್ರ ಸರ್ಕಾರ ನಮ್ಮನ್ನು ಕರೆದು ಸಭೆಯನ್ನು ಮಾಡಿದೆ. ಮುಂದಿನ ದಿನಮಾನಗಳಲ್ಲಿ ಇದಕ್ಕೆಲ್ಲಾ ಪರಿಹಾರ ಸಿಗುತ್ತದೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, 2019 ರಲ್ಲಿ **'ಮೋಟಾರ್ ವೆಹಿಕಲ್ ವಿಧೇಯಕ'** ಸಂಸತ್ತಿನಲ್ಲಿ ಪಾಸ್ ಆಗಿ ಒಂದೂವರೆ ವರ್ಷವಾದರೂ ಸಹ ಇದನ್ನು ಮಾಡುವುದಕ್ಕೆ ಏಕೆ ತಡವಾಗುತ್ತಿದೆ?

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಿಸಿದಂತೆ ನಾನು ಉತ್ತರವನ್ನು ಕಳುಹಿಸಿಕೊಡುತ್ತೇನೆ. 2019ರಲ್ಲಿ ಕೇಂದ್ರ ಸರ್ಕಾರ **'ಮೋಟಾರ್ ವೆಹಿಕಲ್ ವಿಧೇಯಕ'**ವನ್ನು ಅಳವಡಿಸಿಕೊಳ್ಳಬೇಕೆಂಬ ಬಗ್ಗೆ ಚರ್ಚೆ ನಡೆದಿದೆ. ಅಲ್ಲಿ 'One Nation One Tax' ಮಾಡಬೇಕೆಂದು ಪಾಸ್ ಆಗಿದೆ. ಇದರಿಂದ ನಮಗೆ ಆದಾಯದಲ್ಲಿ ಕೊರತೆಯಾಗುವುದರ ಬಗ್ಗೆ ಚಿಂತನೆ ನಡೆದಿದೆ. ಏಕೆಂದರೆ ಇಡೀ ದೇಶದಲ್ಲಿ ಶೇಕಡಾ 12 ರಷ್ಟು ತೆರಿಗೆಯನ್ನು ಮಾಡಬೇಕೆಂದು ಮಾಡಿದ್ದಾರೆ. ಈಗ ನಮ್ಮಲ್ಲಿ ಶೇಕಡಾ 18 ರಷ್ಟು ಇದೆ. ಅದನ್ನು ಶೇಕಡಾ 12 ರಷ್ಟು ಮಾಡುವುದರಿಂದ, ಒಂದು ವರ್ಷಕ್ಕೆ ಬಹಳಷ್ಟು ಆದಾಯ ಕೊರತೆಯಾಗುತ್ತದೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿದ್ದೇವೆ. ಅವರು ಈ ಸಂದರ್ಭದಲ್ಲಿ ಮಾಡುವುದು ಬೇಡ. ಇನ್ನು ಸ್ವಲ್ಪ ದಿವಸವಾದ ಮೇಲೆ ಇದರ ಬಗ್ಗೆ ಆಲೋಚನೆ ಮಾಡುವ ಬಗ್ಗೆ ಹೇಳಿದ್ದಾರೆ. ನಂತರ ಅದನ್ನು ನೋಡುತ್ತೇವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಆ ಕಡೆಯ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದರೆ ನಾನು ಏನನ್ನೂ ಓದಲಿ?

**ಹಂಗಾಮಿ ಸಭಾಪತಿಯವರು:-** ನಾನು ಪ್ರತಿ ಬಾರಿಯೂ ಹೇಳುತ್ತೇನೆ. ಮತ್ತೆ ಅದೇ ರೀತಿಯ ಕೆಲಸ ಮಾಡಿದರೆ ಹೇಗೆ?

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(193) 05/02/2021/ಎಸ್‌ಪಿಆರ್/ಆರ್‌ಎನ್/1:10**

**ಇ) ವಿಷಯ:– ಮಂಡ್ಯದ ಮೈಶುಗರ್ ಸಕ್ಕರೆ ಕಾರ್ಖಾನೆಯ ನೌಕರರನ್ನು ಸ್ವಯಂ ನಿವೃತ್ತಿ ಯೋಜನೆಯ ಬದಲಿಗೆ ಯಾವುದಾದರೊಂದು ನಿಗಮದಲ್ಲಿ ಇವರುಗಳ ಸೇವೆಯನ್ನು ವಿಲೀನಗೊಳಿಸುವ ಬಗ್ಗೆ**

* * *

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯದ ಏಕೈಕ ಸರ್ಕಾರಿ ಸ್ವಾಮ್ಯದ ಕಾರ್ಖಾನೆಯಾದಂತಹ ಮಂಡ್ಯದ ಮೈಶುಗರ್ ಸಕ್ಕರೆ ಕಾರ್ಖಾನೆಯು 1933–34 ನೇ ಸಾಲಿನಿಂದ ಪ್ರಾರಂಭವಾಗಿ 2018–19 ನೇ ಸಾಲಿನವರೆಗೂ ಉತ್ತಮವಾಗಿ ಕಬ್ಬನ್ನು ನುರಿಸಿಕೊಂಡು ಬಂದಿರುತ್ತದೆ. ಈ ಕಾರ್ಖಾನೆಯನ್ನು ನಂಬಿಕೊಂಡು ಅನೇಕ ರೈತರು ಮತ್ತು ಕಾರ್ಮಿಕರು ಜೀವನವನ್ನು ನಡೆಸುತ್ತಿರುತ್ತಾರೆ. ಆದರೆ, ಇತ್ತೀಚೆಗೆ ಈ ಕಾರ್ಖಾನೆಯನ್ನು ಸ್ಥಗಿತಗೊಳಿಸಿದ್ದು, ಇದರಿಂದ ಕಬ್ಬು ಬೆಳೆದ ರೈತರು ಹಾಗೂ ಇಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ತೊಂದರೆಗೆ ಸಿಲುಕಿರುತ್ತಾರೆ. ಸರ್ಕಾರಿ ಸ್ವಾಮ್ಯದಲ್ಲಿ ಉಳಿಸಿಕೊಳ್ಳಲು ನಿರಂತರ ಹೋರಾಟವೂ ಸಹ ಮುಂದುವರೆದಿದೆ. ಈ ನಡುವೆ ಕಾರ್ಖಾನೆಯು ಇಲ್ಲಿನ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸಿರುತ್ತದೆ. ಈ ಯೋಜನೆಯು ಕಡಿಮೆ ಸೇವಾವಧಿ ಇರುವ ನೌಕರರಿಗೆ ಮಾತ್ರ ಅನುಕೂಲವಾಗುತ್ತದೆ. ಆದರೆ, ಅನೇಕ ಕಾರ್ಮಿಕರು 10, 15, 20 ವರ್ಷಗಳ ಸೇವಾವಧಿಯನ್ನು ಹೊಂದಿರುತ್ತಾರೆ. ಅಲ್ಲದೇ ಈ ನೌಕರರ ವಯೋಮಿತಿಯು 40 ವರ್ಷಗಳು ಮೀರಿರುವುದರಿಂದ ಇವರಿಗೆ ಬೇರೆ ಕಡೆ ಉದ್ಯೋಗಾವಕಾಶಗಳು ಸಹ ಇರುವುದಿಲ್ಲ. ಪ್ರಸ್ತುತ ಕಾರ್ಖಾನೆಯು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಕಾರ್ಮಿಕರಿಗೆ ವೇತನವನ್ನು ಸಹ ನೀಡದೇ ಕಾರ್ಮಿಕರ ಜೀವನವು ದುಸ್ತರವಾಗಿರುತ್ತದೆ. ಅಲ್ಲದೆ ರೈತರು ಸಹ ಈ ಸಾಲಿನಲ್ಲಿ ಹೆಚ್ಚಿನ ಪ್ರಮಾಣದ ಕಬ್ಬನ್ನು ನಾಟಿ ಮಾಡಿರುತ್ತಾರೆ. ಈ ಕಾರ್ಖಾನೆ ವ್ಯಾಪ್ತಿಯಲ್ಲಿ ಅಂದಾಜು 15 ರಿಂದ 20 ಲಕ್ಷ ಮೆಟ್ರಿಕ್ ಟನ್ ಕಬ್ಬು ದೊರೆಯಬಹುದಾಗಿದ್ದು, ಈ ಕಾರ್ಖಾನೆ ಆರಂಭವಾಗದ ಹೊರತು ಕಬ್ಬನ್ನು ನುರಿಸಲು ರೈತರಿಗೆ ಕಷ್ಟವಾಗಿರುತ್ತದೆ. ಈ ಮೇಲ್ಕಂಡ ಕಾರಣಗಳಿಂದ ಆದಷ್ಟು ಬೇಗ ಈ ಕಾರ್ಖಾನೆಯನ್ನು ಸರ್ಕಾರಿ ಸ್ವಾಮ್ಯದಲ್ಲಿ ಆರಂಭಿಸಬೇಕು. ಅಲ್ಲದೇ ಈ ಕಾರ್ಮಿಕರಿಗೆ ಸ್ವಯಂ ನಿವೃತ್ತಿ ಯೋಜನೆ ನೀಡುವ ಬದಲು ಮೈಸೂರು ಪೇಪರ್ ಮಿಲ್ಸ್ ಭದ್ರಾವತಿಯ ಕಾರ್ಮಿಕರನ್ನು ಬೇರೆ ಇಲಾಖೆಗಳಿಗೆ ವಿಲೀನಗೊಳಿಸಿದ ಮಾದರಿಯಲ್ಲಿ ಈ ಕಾರ್ಮಿಕರನ್ನು ಸಹ ವಿವಿಧ ನಿಗಮಗಳಿಗೆ ನೇಮಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಳ್ಳುವುದರ ಮೂಲಕ ಈ ಕಾರ್ಮಿಕರಿಗೆ ಸೂಕ್ತ ನ್ಯಾಯವನ್ನು ಒದಗಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮೈಶುಗರ್ ಸಕ್ಕರೆ ಕಾರ್ಖಾನೆಯ ನೌಕರರ ಬಗ್ಗೆ ಖಂಡಿತವಾಗಿಯೂ ಸಹ ಹಿರಿಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ ರವರು ಕೇಳಿದ ಶೂನ್ಯ ವೇಳೆ ಪ್ರಶ್ನೆಗೆ ಪೌರಾಡಳಿತ ಮತ್ತು ಸಕ್ಕರೆ ಸಚಿವರಿಂದ ಉತ್ತರವನ್ನು ಮಂಡಿಸಲಾಗುವುದು.

**ಈ) ವಿಷಯ:- ವಿದ್ಯಾರ್ಥಿಗಳ ಹಿತದೃಷ್ಟಿ ಹಾಗೂ ಶೈಕ್ಷಣಿಕ ಗುಣಮಟ್ಟ ಅಭಿವೃದ್ಧಿಗೆ, ರಾಜ್ಯದ 19 ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಬೋಧಕರು ಮತ್ತು ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ**

* * *

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳ ಕುರಿತಾಗಿ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ರಾಜ್ಯದ 19 ವಿಶ್ವವಿದ್ಯಾಲಯಗಳಲ್ಲಿ ಒಟ್ಟು 1,993 ಬೋಧಕರ ಹುದ್ದೆಗಳು ಹಾಗೂ 5,004 ಬೋಧಕೇತರ ಸಿಬ್ಬಂದಿ ಹುದ್ದೆಗಳು ಖಾಲಿಯಿದೆ. ಇದರಿಂದಾಗಿ ಶೈಕ್ಷಣಿಕ ಚಟುವಟಿಕೆಗಳು ಮತ್ತು ಆಡಳಿತದ ಮೇಲೆ ಗಂಭೀರ ಪರಿಣಾಮವಾಗಿದೆ ಎಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿರುವುದು. ವಿಶೇಷವಾಗಿ ರಾಜ್ಯದಲ್ಲಿಯ ಹಳೆಯ ವಿಶ್ವವಿದ್ಯಾಲಯಗಳಾದ ಧಾರವಾಡ, ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಅತೀ ಹೆಚ್ಚು ಬೋಧಕರ ಮತ್ತು ಇತರ ಸಿಬ್ಬಂದಿಯ ಕೊರತೆ ಇರುವುದು. ಬೋಧಕರ ಹಾಗೂ ಬೋಧಕೇತರ ಸಿಬ್ಬಂದಿಯ ಕೊರತೆಯಿಂದ ಪಠ್ಯಕ್ರಮ ಪೂರ್ಣಗೊಳಿಸುವಲ್ಲಿ, ಪರೀಕ್ಷೆ ನಡೆಸಿ ಮೌಲ್ಯಮಾಪನ ಮಾಡಿ ಫಲಿತಾಂಶ ಪ್ರಕಟಣೆ ಮಾಡುವಲ್ಲಿ ವಿಳಂಬ ಆಗಲಿರುವುದು. ಇದಲ್ಲದೇ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರು ಕೂಡಾ ಇಲ್ಲದಂತಾಗಿದೆ. ಬಹಳ ಮುಖ್ಯವಾಗಿ ಬೆಳಗಾವಿಯಲ್ಲಿನ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಬೋಧಕ ಸಿಬ್ಬಂದಿಗಿಂತ ಬೋಧಕೇತರ ಸಿಬ್ಬಂದಿಗಳ ಕೊರತೆ ಇರುವುದು. ಒಟ್ಟಾರೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ರಾಜ್ಯದ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ದೃಷ್ಟಿಯಿಂದ ಆದಷ್ಟು ಬೇಗನೇ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ನೇಮಕಾತಿ ಮಾಡಿಕೊಳ್ಳಲು ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಶೀಘ್ರದಲ್ಲಿ ಕ್ರಮ ಜರುಗಿಸಲು ತಮ್ಮ ಮೂಲಕ ಆಗ್ರಹಿಸುತ್ತೇನೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದೇ ರೀತಿಯಾಗಿ ಸುಮಾರು 400 ಸರ್ಕಾರಿ ಕಾಲೇಜುಗಳ ಪೈಕಿ ಸುಮಾರು 398 ಕಾಲೇಜುಗಳಲ್ಲಿಯೂ ಸಹ ಪ್ರಾಂಶುಪಾಲರ ಹುದ್ದೆಗಳು ಖಾಲಿ ಇವೆ. ಇಂತಹ ಸಂದರ್ಭದಲ್ಲಿ ಕಾಲೇಜುಗಳ ಪರಿಸ್ಥಿತಿ ದಯನೀಯವಾಗಿದ್ದು, ಅವುಗಳು ಹೇಗೆ ನಡೆಯುತ್ತವೆ? ವಿಶ್ವವಿದ್ಯಾಲಯಗಳಲ್ಲಿ ಶೇಕಡಾ 60 ರಷ್ಟು ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ. ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸಕರುಗಳಿಲ್ಲದೇ ವಿದ್ಯಾರ್ಥಿಗಳು ಯಾರ ಹತ್ತಿರ ಪಾಠವನ್ನು ಕೇಳಬೇಕು? ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳು ಒಂದು ರೀತಿಯ ನರಕ ಸದೃಶವಾಗಿವೆ. ಆರೋಗ್ಯ ಮತ್ತು ಶಿಕ್ಷಣಗಳು ಸರ್ಕಾರದ ಆದ್ಯತೆಗಳಾಗಬೇಕು ಎನ್ನುವುದು ನಮ್ಮ ಆಗ್ರಹವಾಗಿದೆ. ಈ ವಿಷಯದಲ್ಲಿ ಸಚಿವರಿಗೆ ಅವಶ್ಯಕವಿರುವ ಬೆಂಬಲವನ್ನು ನಾವು ನೀಡೋಣ. ಖಾಲಿಯಿರುವ ಹುದ್ದೆಗಳನ್ನು ಸರ್ಕಾರವು ಭರ್ತಿ ಮಾಡಬೇಕೆನ್ನುವುದು ನಮ್ಮ ಉದ್ದೇಶವಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವ ವಿಚಾರಕ್ಕೆ ನಮ್ಮ ಕಡೆಯಿಂದಲೂ ಸಹ ಸಹಮತಿ ಇದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅನುದಾನ ನೀಡಿದ್ದಲ್ಲಿ ಅವರುಗಳೇ ಎಲ್ಲವನ್ನೂ ಸಹ ಮಾಡುತ್ತಾರೆ.

**ಡಾ|| ಅಶ್ವತ್ಥ ನಾರಾಯಣ್(ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ. ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಇಲಾಖೆ):-** ಮಾನ್ಯ ಸಭಾಪತಿಯವರೇ, ಶಿಕ್ಷಣದಲ್ಲಿ ಮುಖ್ಯವಾಗಿ ಅದರಲ್ಲೂ ಉನ್ನತ ಶಿಕ್ಷಣದಲ್ಲಿ ಬೋಧಕರ ಮತ್ತು ಬೋಧಕೇತರ ಸಿಬ್ಬಂದಿಗಳ ಕೊರತೆ ಇದೆ. ಹಲವಾರು ಹುದ್ದೆಗಳು ಖಾಲಿ ಇವೆ. ಒಟ್ಟಾರೆಯಾಗಿ ಹೇಳುವುದಾದರೆ, ಇವತ್ತಿನ ದಿವಸ ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರುಗಳೇ ಹೆಚ್ಚಿನದಾಗಿ ಬೋಧನೆ ಮಾಡುತ್ತಿದ್ದಾರೆ. ಹುದ್ದೆಗಳು ಖಾಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವಲ್ಲಿ ಅತಿಥಿ ಉಪನ್ಯಾಸಕರುಗಳೇ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದರಲ್ಲಿ ಬಹಳಷ್ಟು ಆರ್ಥಿಕ ಸಂಗತಿಗಳನ್ನು ನೋಡಿದಾಗ, ಬಹಳ ಸಮಸ್ಯೆಗಳಿವೆ. ಇವತ್ತಿನ ದಿವಸ ಆಯವಯ್ಯದಲ್ಲಿ ಇದಕ್ಕಾಗಿ ಐದು ಸಾವಿರ ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಮೀಸಲಿರಿಸಲಾಗುತ್ತಿದೆ. ಪ್ರಸ್ತುತ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಬೇಕಾದರೆ, ಹೆಚ್ಚುವರಿಯಾಗಿ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಸೇರಿಸಬೇಕಾಗುತ್ತದೆ. 15,000 ಅತಿಥಿ ಉಪನ್ಯಾಸಕರುಗಳು ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅದೇ ರೀತಿಯಾಗಿ ವಿಶ್ವವಿದ್ಯಾಲಯಗಳಲ್ಲಿಯೂ ಸಹ ಅತಿಥಿ ಉಪನ್ಯಾಸಕರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿ ಹೊಸದಾಗಿ ಹುದ್ದೆಗಳ ಸೃಜನೆ ಮಾಡಬೇಕಾಗಿರುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಸುಮಾರು 2,000 ಹುದ್ದೆಗಳು ಖಾಲಿಯಿದ್ದು, ಅವುಗಳನ್ನು ಭರ್ತಿ ಮಾಡಬೇಕಾಗಿರುತ್ತದೆ. ಒಟ್ಟಾರೆಯಾಗಿ 10–12 ಸಾವಿರದಷ್ಟು ಹುದ್ದೆಗಳು ಖಾಲಿ ಇದ್ದು, ಅವುಗಳನ್ನು ಹೊಸದಾಗಿ ಭರ್ತಿ ಮಾಡಬೇಕಾಗಿರುತ್ತದೆ. ಇದಲ್ಲದೇ ಕೆಲವು ಹುದ್ದೆಗಳನ್ನು ಸೃಜಿಸಬೇಕಾಗಿರುತ್ತದೆ. ಇದನ್ನು ನೋಡಿದಾಗ ದೊಡ್ಡ ಸವಾಲು ನಮ್ಮ ಮುಂದಿದೆ. ಇದನ್ನು ಪರಿಶೀಲನೆ ಮಾಡಿ ಹಂತ ಹಂತವಾಗಿ ಬಗೆಹರಿಸಬೇಕು. ನಾವು ಯಾವಾಗಲೂ ಬೇರೆ ಬೇರೆ ಕೆಲಸಗಳಿಗೆ ಹೆಚ್ಚು ಆದ್ಯತೆಯನ್ನು ನೀಡುತ್ತಿದ್ದೇವೆ. ಶಿಕ್ಷಣ ವಿಚಾರದಲ್ಲಿ ಬೇರೆ ಬೇರೆ ರೀತಿಯ ಸೌಕರ್ಯಗಳಿಗಾಗಿ ಹೆಚ್ಚು ಒತ್ತನ್ನು ನೀಡಲಾಗುತ್ತಿದೆ. ನಿಜವಾಗಿಯೂ ಸಹ ನಾವು ಸುಸ್ಥಿರ ಅಭಿವೃದ್ಧಿಯನ್ನು ಕಾಣಬೇಕಾದರೆ, ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ನೀಡಬೇಕು. ಇದನ್ನು ಮಾಡದಿದ್ದರೆ ಬಹಳ ಕಷ್ಟವಾಗುತ್ತದೆ. ಹೀಗಾಗಿ ನಾನು ಎಲ್ಲಾ ಸದಸ್ಯರಲ್ಲಿ ವಿನಂತಿಸುವುದೇನೆಂದರೆ, ಗೊತ್ತಿರುವ ಸಮಸ್ಯೆಗಳ ಬಗ್ಗೆ ಕೇವಲ ಮಾತನಾಡಿದರೆ ಸಾಲದು, ಎಲ್ಲರ ಭಾವನೆಗಳು ಒಂದೇ ದಿಕ್ಕಿನಲ್ಲಿರಬೇಕು. ಇದಕ್ಕೆ ಸರ್ಕಾರವೂ ಸಹ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ಏಕೆಂದರೆ, ಎಲ್ಲಾ ವಿಭಾಗಗಳಲ್ಲಿ ಹಣ ಹಂಚಿಕೆಯಾಗುತ್ತದೆ. ಮುಂಬರುವ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ, ಜಿ.ಎಸ್.ಡಿ.ಪಿ.ಗೆ ಶೇಕಡಾ 6 ರಷ್ಟು ಅನುದಾನವನ್ನು ವ್ಯಯ ಮಾಡಬೇಕೆಂಬ ಗುರಿಯನ್ನು ಹೊಂದಿದ್ದೇವೆ. ಅದರಲ್ಲಿ ಈ ಅಂಶವನ್ನು ಅಳವಡಿಸಿಕೊಂಡು ಎಲ್ಲಾ ರೀತಿಯ ಸಮಸ್ಯೆಗಳನ್ನು ಬಗೆಹರಿಸಲು ನಾವು ಪ್ರಯತ್ನಿಸುತ್ತೇವೆ. ಹಾಲಿ ಇರುವ ಸಮಸ್ಯೆಯನ್ನು ತಾತ್ಕಾಲಿಕವಾಗಿ ಬಗೆಹರಿಸಲು ಅತಿಥಿ ಉಪನ್ಯಾಕರುಗಳ ಮೂಲಕ ಪಾಠಗಳನ್ನು ಮಾಡಿಸುವ ಕೆಲಸಗಳಾಗುತ್ತಿವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಒಂದೇ ಒಂದು ಅಂಶ . . .

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:–** ಶೂನ್ಯ ವೇಳೆಯಲ್ಲಿ ಚರ್ಚೆಯನ್ನು ಮಾಡಲು ನಿಯಮಾವಳಿಗಳಲ್ಲಿ ಅವಕಾಶವಿದೆಯೇ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಶ್ರೀ ಎನ್.ರವಿಕುಮಾರ್‌ರವರು ಬಹಳ ಆತಂಕಕಾರಿಯಾದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ವಿಶ್ವವಿದ್ಯಾಲಯಗಳಲ್ಲಿ ಶೇಕಡಾ 60 ರಷ್ಟು ಉಪನ್ಯಾಸಕರುಗಳ ಹುದ್ದೆಗಳು ಖಾಲಿ ಇವೆ. ಅದೇ ರೀತಿಯಾಗಿ ಕಾಲೇಜುಗಳಲ್ಲಿ 498 ಪ್ರಾಂಶುಪಾಲರ ಹುದ್ದೆಗಳು ಖಾಲಿ ಇವೆ.

**ಹಂಗಾಮಿ ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ, ಇದು ಶೂನ್ಯ ವೇಳೆಯಾಗಿರುವುದರಿಂದ ಈಗ ವಿಷಯದ ಬಗ್ಗೆ ಚರ್ಚೆ ಮಾಡಲು ನಿಯಮಾವಳಿಗಳಲ್ಲಿ ಅವಕಾಶವಿದೆಯೇ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮುಖಾಂತರ ತಿಳಿಯಬಯಸುವುದೇನೆಂದರೆ, ಶಿಕ್ಷಣವನ್ನು ಆದ್ಯತೆ ಕ್ಷೇತ್ರವನ್ನಾಗಿ ಪರಿಗಣಿಸಬೇಕು. ಶ್ರೀ ರವಿಕುಮಾರ್ ರವರು ಹೇಳುವ ವಿಚಾರಕ್ಕೆ ನಾನು ಧ್ವನಿಗೂಡಿಸುತ್ತಿದ್ದೇನೆ. ನಾವು ನಮ್ಮ ಅಹವಾಲುಗಳನ್ನು ಹೇಳುತ್ತೇವೆ. ಆದರೆ ಅದರ ಬಗ್ಗೆ ಸಚಿವರೇ ಕ್ರಮ ಕೈಗೊಳ್ಳಬೇಕು. ಶಿಕ್ಷಣಕ್ಕೆ ಆದ್ಯತೆ ನೀಡುವ ನಿಟ್ಟಿನಲ್ಲಿ ಬೇರೆಯದಕ್ಕೆ ಅನುದಾನ ಹಂಚಿಕೆ ಮಾಡುವುದನ್ನು ನಿಲ್ಲಿಸಿ. ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರುಗಳಿಲ್ಲವೆಂದರೆ, ಅವುಗಳ ಹೆಸರು ಹೇಗೆ ಉಳಿಯುತ್ತದೆ? ಅದೇ ರೀತಿಯಾಗಿ ಕಾಲೇಜುಗಳಲ್ಲಿ ಪ್ರಾಂಶುಪಾಲರುಗಳಿಲ್ಲದಿದ್ದರೆ, ಅಲ್ಲಿನ ಪರಿಸ್ಥಿತಿ ಏನಾಗುತ್ತದೆ? ನಾನು ನಮ್ಮ ತಂದೆಯ ಹೆಸರಿನಲ್ಲಿ ನಮ್ಮ ತಾಲ್ಲೂಕಿನಲ್ಲಿ ಪ್ರಥಮ ದರ್ಜೆ ಕಾಲೇಜು ಇತ್ತು. ಅಲ್ಲಿ ಪ್ರಾಂಶುಪಾಲರನ್ನು ಹೊರತುಪಡಿಸಿ, ಇನ್ನುಳಿದವರೆಲ್ಲರೂ ಅಂದರೆ ಶೇಕಡಾ 99 ರಷ್ಟು ಅತಿಥಿ ಉಪನ್ಯಾಸಕರುಗಳಾಗಿದ್ದರು. ಸಚಿವರು ಇಷ್ಟಾದರೂ ವ್ಯವಸ್ಥೆಯನ್ನು ಮಾಡುತ್ತಿರುವುದರಿಂದ ನಾನು ಅವರ ಬಗ್ಗೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಇಂತಹ ಪರಿಸ್ಥಿತಿಗಳ ಬಗ್ಗೆ ಸರ್ಕಾರವು ಯೋಚಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಉ) ವಿಷಯ:–2020–21 ನೇ ಸಾಲಿನ ಕ್ರಿಯಾ ಯೋಜನೆಯಿಂದ ಹಗರಿ ಕೃಷಿ ವಿಶ್ವವಿದ್ಯಾಲಯವನ್ನು ಉನ್ನತೀಕರಿಸಿ, ಕೃಷಿ ಡಿಪ್ಲೊಮಾ ಕಾಲೇಜ್‌ನ್ನು ಕೃಷಿ ಪದವಿ ಕಾಲೇಜ್ ಆಗಿ ಮೇಲ್ದರ್ಜೆಗೇರಿಸುವ ಬಗ್ಗೆ**

* * *

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ಧನ್ಯವಾದಗಳು.

ನನ್ನ ಮತಕ್ಷೇತ್ರ ವ್ಯಾಪ್ತಿಯ ಬಳ್ಳಾರಿಯಿಂದ 15 ಕಿ.ಮೀ. ದೂರದಲ್ಲಿರುವ ಹಗರಿ (ಪರಮದೇವನಹಳ್ಳಿ) ಸಮೀಪದ ಹಗರಿ ಕೃಷಿ ಸಂಶೋಧನಾ ಕೇಂದ್ರಕ್ಕೆ ಬ್ರಿಟಿಷರ ಕಾಲದಿಂದಲೂ 116 ವರ್ಷಗಳ ಇತಿಹಾಸವಿದೆ. ತುಂಗಭದ್ರಾ ನದಿಯು ಬಳ್ಳಾರಿ ಜಿಲ್ಲೆಯ ಎಲ್ಲಾ ಭಾಗಗಳ ಕೃಷಿ ಚಟುವಟಿಕೆಗಳಿಗೆ ಜೀವನದಿಯಾಗಿದ್ದು, ಇಲ್ಲಿ ಎಲ್ಲಾ ಭಾಗಗಳಲ್ಲಿಯೂ ಕೃಷಿ ಚಟುವಟಿಕೆಗಳು ಹೆಚ್ಚಿನ ರೀತಿಯಲ್ಲಿ ನಡೆಯುತ್ತವೆ. ಇದರಿಂದ ಯುವಕರು ಕೃಷಿ ಚಟುವಟಿಕೆಗಳ ತಂತ್ರಜ್ಞಾನ ಬೆಳೆಸಿಕೊಳ್ಳಲು ಸಹ ಸಹಕಾರಿಯಾಗಿದೆ. ಪ್ರಸ್ತುತ ಹಗರಿಯಲ್ಲಿ ಕೃಷಿ ಡಿಪ್ಲೊಮಾ ಕಾಲೇಜು ನಡೆಯುತ್ತಿದ್ದು, ಇಲ್ಲಿ 14 ಕೊಠಡಿಗಳ ಸುಸಜ್ಜಿತ ಕಟ್ಟಡವಿದ್ದು, ಡಿಪ್ಲೊಮಾ ಕಾಲೇಜಿಗೆ ಪ್ರಥಮ ಮತ್ತು ದ್ವಿತೀಯ ವರ್ಷದಲ್ಲಿ ಒಟ್ಟು 100 ವಿದ್ಯಾರ್ಥಿಗಳಿಗೆ ಭೋಧನೆ ಮಾಡಲಾಗುತ್ತಿದೆ. ಹಗರಿ ದಂಡೆಯಲ್ಲಿ ತುಂಗಭದ್ರಾ ನದಿ ಹರಿದು ಬಂದಿರುವುದರಿಂದ ಇಲ್ಲಿ ಕೃಷಿ ಚಟುವಟಿಕೆಗಳು ಹೇರಳವಾಗಿ ನಡೆಯುತ್ತವೆ. ಇಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಕೃಷಿ ಡಿಪ್ಲೊಮಾ ಕಾಲೇಜನ್ನು ಬಿಎಸ್ಸಿ (ಅಗ್ರಿ) ಕಾಲೇಜನ್ನಾಗಿ ಮೇಲ್ದರ್ಜೆಗೇರಿಸುವ ಅವಶ್ಯಕತೆ ಇರುತ್ತದೆ. ಹಾಗಾಗಿ ಇಲ್ಲಿ ಹೊಸದಾಗಿ ಕೃಷಿ ವಿದ್ಯಾಲಯ ತೆಗೆಯುವ ಅವಶ್ಯಕತೆ ಇರುವುದರಿಂದ ಈಗಿರುವ ಕೃಷಿ ಡಿಪ್ಲೊಮಾ ವಿದ್ಯಾಲಯವನ್ನೇ ಕೃಷಿ ಮಹಾವಿದ್ಯಾಲಯಕ್ಕೆ ಮೇಲ್ದರ್ಜೆಗೇರಿಸುವುದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಹೊರೆ ಬೀಳುವುದಿಲ್ಲ. ಕೃಷಿ ಮಹಾವಿದ್ಯಾಲಯಕ್ಕೆ ಅವಶ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳು ಲಭ್ಯವಿರುವುದರಿಂದ ಮಹಾವಿದ್ಯಾಲಯದ ಉನ್ನತೀಕರಣಕ್ಕೆ ಯಾವುದೇ ಭಾದಕವಾಗಲಾರದು. ಅಲ್ಲದೇ, ಮುಂಬರುವ ವಿದ್ಯಾರ್ಥಿಗಳ ಭವಿಷ್ಯದಲ್ಲಿ ಕೃಷಿ ಅವಲಂಬಿತ ಕೆಲಸಗಳು ಸಿಗುವ ಅವಕಾಶವಿರುತ್ತದೆ. 2020–21 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಡಿ.ಎಂ.ಎಫ್. ನಿಧಿಯಿಂದ 500 ಲಕ್ಷ ರೂಪಾಯಿಗಳ ಅನುದಾನವನ್ನು ಹಗರಿ ಕೃಷಿ ಮಹಾವಿದ್ಯಾಲಯವನ್ನು ಉನ್ನತೀಕರಿಸಲು ಕಾಯ್ದಿರಿಸಲಾಗಿದೆ. ಜೊತೆಗೆ ಕೆ.ಕೆ.ಆರ್.ಡಿ.ಬಿ. ನಿಧಿಯಿಂದಲೂ ಅನುದಾನವನ್ನು ಪೂರೈಸಬಹುದು. ತತ್ಸಂಬಂಧ ಈಗಾಗಲೇ ಉಪಕುಲಪತಿಗಳು, ರಾಯಚೂರು ಜಿಲ್ಲಾ ಕೃಷಿ ವಿಶ್ವವಿದ್ಯಾಲಯ ಇವರು ಸ್ಥಳಕ್ಕೆ ಭೇಟಿ ಕೊಟ್ಟು ಮುಂದಿನ 2021–22 ನೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಸವಿಯಿಂದ ಡಿಗ್ರಿ ಕೋರ್ಸ್‌ಗಳನ್ನು ಪ್ರಾರಂಭ ಮಾಡಬಹುದು ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಆ ಕಾರಣ, ಕೃಷಿ ಡಿಪ್ಲೊಮಾ ಕಾಲೇಜನ್ನು ಬಿಎಸ್ಸಿ(ಅಗ್ರಿ) ಕಾಲೇಜನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಬೇಕಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, 2020-21 ನೇ ಸಾಲಿನ ಕ್ರಿಯಾ ಯೋಜನೆಯಿಂದ ಹಗರಿ ಕೃಷಿ ಮಹಾವಿದ್ಯಾಲಯವನ್ನು ಉನ್ನತೀಕರಿಸುವ ಮತ್ತು ಡಿಪ್ಲೊಮಾ ಕಾಲೇಜುಗಳನ್ನು ತೆರೆಯುವ ಬಗ್ಗೆ ಹಿರಿಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಅಂಶಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಂದ ಉತ್ತರವನ್ನು ಕೊಡಿಸಲಾಗುವುದು.

**(ಮುಂದು)**

**(194)/5-2-2021/1-10/ಎಲ್ಎಂ/ಆರ್ಎನ್**

**06. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಉತ್ತರ**

**ಅ) ವಿಷಯ:-** ಗದಗ ಜಿಲ್ಲೆಯ ಕಪ್ಪತಗುಡ್ಡಕ್ಕೆ ಬೆಂಕಿ ಬಿದ್ದ ಘಟನೆ ಬಗ್ಗೆ

\- - - - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರು ದಿನಾಂಕ: 29-01-2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಅರಣ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಪ್ರತಿಯನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಷಯ**:- ಅಮಾಯಕ ಯೋಧನ ಪತ್ನಿಯನ್ನು ವಂಚಿಸಿರುವ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಹರೀಶ್‌ಕುಮಾರ್‌ರವರು ದಿನಾಂಕ: 01-02-2021 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಗೃಹ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಪ್ರತಿಯನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ವಿಷಯ**:– ತೊಗರಿ ಬೆಳೆಗೆ ಹಿಂದಿನಂತೆ ರೈತರಿಗೆ ರಾಜ್ಯ ಸರ್ಕಾರದಿಂದ ಪ್ರೋತ್ಸಾಹಧನ ಘೋಷಣೆಯಾಗಿರುವುದಿಲ್ಲ. ಕೂಡಲೇ ನಿಗದಿಪಡಿಸಿದ ದರದ ಜೊತೆಗೆ ಸರ್ಕಾರವು 8,000 ರೂ.ಗಳ ಬೆಂಬಲ ಬೆಲೆ ನಿಗದಿ ಮಾಡಬೇಕು ಹಾಗೂ ತೊಗರಿ ಖರೀದಿ ಪ್ರಕ್ರಿಯೆಗೆ ಸಮಯ ನಿಗದಿ ಮಾಡಬಾರದು ಎನ್ನುವ ವಿಷಯದ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ವಿಜಯ್ ಸಿಂಗ್‌ರವರು ದಿನಾಂಕ: 01-02-2021 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಹಕಾರ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಪ್ರತಿಯನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ವಿಷಯ**:– ಸರ್ಕಾರಿ ವಸತಿ ಶಾಲೆಗಳ ಶಿಕ್ಷಕರ ವೇತನವನ್ನು ಹೆಚ್ಚಿಸುವ ಬಗ್ಗೆ

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:– ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ದಿನಾಂಕ: 02-02-2021 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಮಾಜ ಕಲ್ಯಾಣ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉ) ವಿಷಯ**:- ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ.

- - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪೂರರವರು ದಿನಾಂಕ: 04-02-2021 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಊ) **ವಿಷಯ**:- ಧಾರ್ಮಿಕ ಕೇಂದ್ರಗಳನ್ನು ನೋಂದಣಿ ಕಾರ್ಯದಡಿ ತರುವ ಬಗ್ಗೆ,

---------

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು ಹಾಗೂ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿರವರು ದಿನಾಂಕ: 04-02-2021 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಋ) ವಿಷಯ**:- ಮೈಸೂರಿನ ಕೆ.ಆರ್.ಎಸ್.ರಸ್ತೆಯಲ್ಲಿರುವ ಇ.ಎಸ್.ಐ ಆಸ್ಪತ್ರೆ ಕಟ್ಟಡ ಕಾಮಗಾರಿ ಪೂರ್ಣಗೊಳ್ಳದೆ ಸೂಕ್ತ ಚಿಕಿತ್ಸೆ ಇಲ್ಲದೆ ವಿಮಾದಾರರಿಗೆ ತೊಂದರೆಯಾಗಿರುವ ಬಗ್ಗೆ.

- - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ದಿನಾಂಕ: 04-02-2021 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಕಾರ್ಮಿಕ ಅರವಿಂದ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೆ, ನಿನ್ನೆ ನಾನು ಒಂದು ವಿಷಯವನ್ನು ಪ್ರಸ್ತಾಪಿಸಿದೆ, ಮೈಸೂರಿನ ಇಎಸ್ಐ ಆಸ್ಪತ್ರೆ ದೊಡ್ಡ ಆಸ್ಪತ್ರೆಯಾಗಿದೆ. ಒಂದು ಲಕ್ಷ ಎಪ್ಪತ್ತೆಂಟು ಜನ ಕಾರ್ಮಿಕರಿದ್ದಾರೆ. 5 ಲಕ್ಷ ಜನ ಅವಲಂಬಿತರಿದ್ದಾರೆ. ಹೊಸ ಕಟ್ಟಡವನ್ನು ಕಟ್ಟಿದ್ದಾರೆ. ಆದರೆ ಅಲ್ಲಿಗೆ ಉಪಕರಣಗಳು ಮತ್ತು ವೈದ್ಯರು ಬೇಕಾಗಿದ್ದಾರೆ. ದಯಮಾಡಿ ಆ ಕಟ್ಟಡವನ್ನು ಬಳಕೆಗೆ ಉಪಯೋಗವಾಗುವಂತೆ ಮಾಡಿಕೊಡಬೇಕು ಮತ್ತು ಎಲ್ಲ ಉಪಕರಣಗಳನ್ನು ಒದಗಿಸಬೇಕೆಂದು ಒತ್ತಾಯಿಸಿದ್ದೇನೆ. ಮಾನ್ಯ ಮಂತ್ರಿಗಳು ಇಲ್ಲೇ ಇದ್ದಾರೆ, ಅದಕ್ಕೆ ಉತ್ತರವನ್ನು ಕೊಡಬೇಕಾಗಿ ವಿನಂತಿಸುತ್ತೇನೆ.

**ಹಂಗಾಮಿ ಸಭಾಪತಿಯವರು:–** ಅದನ್ನು ನಂತರ ತೆಗೆದುಕೊಳ್ಳಲಾಗುವುದು. ಈಗ ಎರಡು ಪ್ರಕಟಣೆಗಳು ಇವೆ.

## 07. ಪ್ರಕಟಣೆಗಳು

**ಹಂಗಾಮಿ ಸಭಾಪತಿಯವರು:–** (ಅ) ದಿನಾಂಕ:5–2–2021 ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯು ಸಭೆ ಸೇರಿ ವಿಧಾನ ಪರಿಷತ್ತಿನ 143ನೇ ಅಧಿವೇಶನದಲ್ಲಿ ದಿನಾಂಕ:10–2–2021ರವರೆಗೆ ಉಪವೇಷನಗಳನ್ನು ಮುಂದುವರೆಸಲು ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಯಿತು.

**ದಿನಾಂಕ:**–5–2–2021ರ ಶುಕ್ರವಾರ, ಪ್ರಶ್ನೋತ್ತರ, ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣ ಪ್ರಸ್ತಾವದ ಮೇಲೆ ಚರ್ಚೆ. ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ ಮತ್ತು ಇತರೆ ಕಾರ್ಯಕಲಾಪಗಳು.

**ದಿನಾಂಕ:**– 8–2–2021ರ ಸೋಮವಾರದಂದು ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣ ಪ್ರಸ್ತಾವದ ಮೇಲೆ ಚರ್ಚೆ. ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ, ನಿಯಮ 330ರಡಿ ವಿಶೇಷ ಪ್ರಸ್ತಾವಗಳು ಮತ್ತು ಇತರೆ ಕಾರ್ಯಕಲಾಪಗಳು.

**ದಿನಾಂಕ:** 9–2–2021ರ ಮಂಗಳವಾರದಂದು ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣ ಪ್ರಸ್ತಾವದ ಮೇಲೆ ಚರ್ಚೆಗೆ ಸರ್ಕಾರದಿಂದ ಉತ್ತರ. ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ, ನಿಯಮ 330ರಡಿ ವಿಶೇಷ ಪ್ರಸ್ತಾವಗಳು ಮತ್ತು ಇತರೆ ಕಾರ್ಯಕಲಾಪಗಳು.

**ದಿನಾಂಕ:** 10–2–2021 ಬುಧವಾರದಂದು ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ, ನಿಯಮ 330ರಡಿ ವಿಶೇಷ ಪ್ರಸ್ತಾವಗಳು ಮತ್ತು ಇತರೆ ಕಾರ್ಯಕಲಾಪಗಳು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈ ವರದಿಗೆ ಸದನದ ಅಂಗೀಕಾರವಿದೆ ಎಂದು ಭಾವಿಸುತ್ತೇನೆ.

**ಹಂಗಾಮಿ ಸಭಾಪತಿಯವರು:–** (ಆ) ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 4–2–2021 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕರಿಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು(ತಿದ್ದುಪಡಿ) ವಿಧೇಯಕ, 2021
2) ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2021
3) ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ,2021

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಗಳೆ, ,ನನ್ನದೊಂದು ಶೂನ್ಯವೇಳೆ ಇದೆ.

**ಹಂಗಾಮಿ ಸಭಾಪತಿಯವರು:–** ಶೂನ್ಯವೇಳೆ ಅವಧಿ ಮುಗಿದಿದೆ. ನಿಮ್ಮನ್ನು ಕರೆದಾಗ ತಾವು ಪ್ರಸ್ತಾಪಿಸಲಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ತಾವು ಕರೆದಾಗ ಅವರು ಎದ್ದು ನಿಂತರಂತೆ ಬೇರೆ ವಿಷಯ ಬಂದಿದ್ದರಿಂದ ಪ್ರಸ್ತಾಪಿಸಲು ಸಾಧ್ಯವಾಗಲಿಲ್ಲ ಎಂದು ಹೇಳುತ್ತಾರೆ. ಈಗ ಅವಕಾಶ ಕೊಡಲು ಸಾಧ್ಯವಾದರೆ ಅವರಿಗೆ ಶೂನ್ಯವೇಳೆ ಓದಲು ಅವಕಾಶವನ್ನು ಕೊಡಿ.

**ಹಂಗಾಮಿ ಸಭಾಪತಿಯವರು:–** ಆಯಿತು ತಮ್ಮ ಶೂನ್ಯವೇಳೆ ಪ್ರಸ್ತಾವವನ್ನು ಓದಿ.

**08. ಸಭಾಪತಿಯವರ ಅಪ್ಪಣೆ ಮೇರೆ ಪ್ರಸ್ತಾಪಿಸಲಾದ ವಿಷಯ**

**ಊ) ವಿಷಯ:– ಬೆಂಗಳೂರು ನಗರದಲ್ಲಿ ಸಾರ್ವಜನಿಕರಿಗೆ ಸಂಚಾರ ದಟ್ಟಣೆಯ ಕಿರಿಕಿರಿ ನಿರಂತರವಾಗಿದ್ದು, ಜೊತೆಗೆ ದುಬಾರಿ ಪಾರ್ಕಿಂಗ್ ಶುಲ್ಕದ ಬಗ್ಗೆ.**

– – –

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಗಳೆ, ಬೆಂಗಳೂರು ನಗರಗಲ್ಲಿ ಸಾರ್ವಜನಿಕರಿಗೆ ಸಂಚಾರ ದಟ್ಟಣೆಯ ಕಿರಿಕಿರಿ ನಿರಂತರವಾಗಿದ್ದು, ಈ ಕಿರಿಕಿರಿಯ ಜೊತೆಗೆ ದುಬಾರಿ ಪಾರ್ಕಿಂಗ್ ಶುಲ್ಕ ಜನರ ತಲೆನೋವಾಗಿ ಪರಿಣಮಿಸಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ಬಿಬಿಎಂಪಿ, ಸರಕಾರಿ ಇಲಾಖೆಗಳು ಹಾಗೂ ಖಾಸಗಿ ಸಂಸ್ಥೆಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶುಲ್ಕ ಪಾವತಿಸಿ ವಾಹನ ನಿಲುಗಡೆಗೆ ಅನುವು ಮಾಡಿಕೊಟ್ಟಿದ್ದರೂ ಗುತ್ತಿಗೆದಾರರು ಸವಾರರಿಂದ ಅಧಿಕ ಶುಲ್ಕ ವಸೂಲಿ ಮಾಡಿ ವಂಚಿಸುತ್ತಿರುವ ಆರೋಪಗಳು ಕೇಳಿಬಂದಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಬಿಬಿಎಂಪಿ ವ್ಯಾಪ್ತಿಯ ಕೆ.ಆರ್.ಮಾರುಕಟ್ಟೆ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, ಎಂ.ಜಿ.ರಸ್ತೆಯ ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ರಾಜಾಜಿನಗರದ ವಾಣಿಜ್ಯ ಸಂಕೀರ್ಣ, ಯಶವಂತಪುರದ ವಾಣಿಜ್ಯ ಸಮುಚ್ಚಯದಲ್ಲಿ ಪೇ ಆಂಡ್ ಪಾರ್ಕಿಂಗ್ ವ್ಯವಸ್ಥೆಯಿದ್ದು, ಜೆ.ಸಿ.ರಸ್ತೆ, ಕೆ.ಜಿ.ರಸ್ತೆಯ ಕೆಂಪೇಗೌಡ ಮಹಾರಾಜ ಕಾಂಪ್ಲೆಕ್ಸ್, ಬಹುಮಹಡಿ ಕಟ್ಟಡಗಳಲ್ಲೂ ವಾಹನ ನಿಲುಗಡೆಗೆ ಸವಲತ್ತು ಕಲ್ಪಿಸಲಾಗಿದೆ. ಆದರೆ ಟೆಂಡರ್ ಪಡೆದ ಗುತ್ತಿಗೆದಾರರು ನಿಯಮಗಳನ್ನು ಗಾಳಿಗೆ ತೂರಿ ದುಬಾರಿ ಶುಲ್ಕ ಸಂಗ್ರಹಿಸುತ್ತಿರುವುದರಿಂದ ಸಾರ್ವಜನಿಕರಿಗೆ ಹಗಲು ದರೋಡೆಯಾಗಿ ಪರಿಗಣಿಸಿದೆ. ದಯಮಾಡಿ ಅನಧಿಕೃತ ಶುಲ್ಕ ವಸೂಲಿಗೆ ಕಡಿವಾಣ ಹಾಕಿ ಮನಸೋ ಇಚ್ಛೆ ಪಾರ್ಕಿಂಗ್ ಶುಲ್ಕ ವಸೂಲಿ ಮಾಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**09. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಸೈಂಟ್ ಜೋಸಫ್ ವಿಶ್ವವಿದ್ಯಾಲಯ ವಿಧೇಯಕ, 2021**

**ಪರ್ಯಾಲೋಚನ ಪ್ರಸ್ತಾವ**

**ಡಾ|| ಅಶ್ವತ್ ನಾರಾಯಣ್ ಸಿ.ಎನ್ (ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ **"ಸೈಂಟ್ ಜೋಸಫ್ ವಿಶ್ವವಿದ್ಯಾಲಯ ವಿಧೇಯಕ, 2021"**ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ:ಅಶ್ವಥ್‌ನಾರಾಯಣ ಸಿ.ಎಸ್(ಉಪಮುಖ್ಯಮಂತ್ರಿ, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಗಳೆ, ಸೈಂಟ್ ಜೋಸೆಫ್ ವಿದ್ಯಾ ಸಂಸ್ಥೆ ಸ್ವಾಂತಂತ್ರ ಪೂರ್ವದಿಂದಲೂ ಉತ್ತಮವಾದ ಶಿಕ್ಷಣವನ್ನು ಕೊಡುತ್ತಾ ಬಂದಿದೆ. ಗುಣಮಟ್ಟದ ಶಿಕ್ಷಣದ ಮೂಲಕ ಸಮಾಜಕ್ಕೆ ಒಳ್ಳೆಯ ಸೇವೆಯನ್ನು ಈ ಸಂಸ್ಥೆ ಸಲ್ಲಿಸಿದೆ. ಗುಣಮಟ್ಟದ ಶಿಕ್ಷಣದ ಆಧಾರದ ಮೇಲೆ ಈ ಸಂಸ್ಥೆಯನ್ನು ಗುರುತಿಸಿ ಎಚ್.ಆರ್.ಡಿ ಮಂತ್ರಿಗಳಿಂದ ಯು.ಜಿ.ಸಿ ಯಿಂದ A++ rating ಇದೆ. ಇಡೀ ದೇಶದಲ್ಲಿ ಮೂರು ಸಂಸ್ಥೆಗಳನ್ನು PPP (Public Private Partnership) ನಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಭಾರತ ದೇಶದಲ್ಲಿ ಮೂರು ಸಂಸ್ಥೆಗಳು ಆಯ್ಕೆಯಾಗಿದ್ದು ಅದರಲ್ಲಿ ಸೈಂಟ್ ಜೋಸಫ್ ಸಂಸ್ಥೆಯು ಕೂಡಾ ಒಂದು. ಬಹಳ ವರ್ಷಗಳಿಂದ ಈ ಸಂಸ್ಥೆ (Rashtriya Uchchatar Shiksha Abhiyan) RUSA 2.0 ನಲ್ಲಿ ಆಯ್ಕೆಯಾಗಿತ್ತು. ಇದನ್ನು ಕಾರ್ಯರೂಪಕ್ಕೆ ತಂದಿರಲಿಲ್ಲ. ಈಗ ಇದನ್ನು ಕಾರ್ಯರೂಪಕ್ಕೆ ತರುವಂತಹ ಕೆಲಸವಾಗುತ್ತಿದೆ. ಇದರ ಜೊತೆಯಲ್ಲಿ ಈ ಸಂಸ್ಥೆಗೆ 55 ಕೋಟಿ ರೂ.ಗಳ ಅನುದಾನ ದೊರಕಿದೆ. ಮೂರು ಸಂಸ್ಥೆಗಳನ್ನು ಆಯ್ಕೆ ಮಾಡಿರುವುದರಲ್ಲಿ ನಮ್ಮಲ್ಲಿ ಮಾತ್ರ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲಾಗುತ್ತಿದೆ. ಈ ಸಂಸ್ಥೆಗೆ ಸಿಕ್ಕಿರುವಂತಹ ಈ ಅವಕಾಶವನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ. ಇಡೀ ದೇಶದಲ್ಲಿಯೇ Public Private Partnership ನಲ್ಲಿ ಸ್ಥಾಪನೆಯಾಗುತ್ತಿರುವ ಈ ವಿಶ್ವವಿದ್ಯಾನಿಲಯದ ಬಹಳ ಉತ್ತಮವಾದ ಬೆಳವಣಿಗೆಯಾಗಿದೆ. ಇಂತಹ ಹಲವಾರು ಸಂಸ್ಥೆಗಳು ಕಾರ್ಯರೂಪಕ್ಕೆ ಬಂದು ಸ್ವಾಯತ್ತತೆಯನ್ನು ಹೆಚ್ಚಿಸಲು ಸಹಾಯಕವಾಗುತ್ತದೆ.

**(ಮುಂದು)**

**(195)05-02-2021(01-20)ಬಿಎಸ್‌ಡಿ-ಬಿಎನ್‌ಎಸ್**

**ಡಾ: ಅಶ್ವಥನಾರಾಯಣ್ ಸಿ.ಎಸ್. (ಮುಂದು):–**

ಈ ಸ್ವಾಯತ್ತತೆಯನ್ನು ಕೊಡುವ ಮೂಲಕ ಆ ಸಂಸ್ಥೆಯೂ ಸ್ವಾಯತ್ತತೆಯನ್ನು ಬಯಸುವ ಆಸೆ ಮತ್ತು ಅಪೇಕ್ಷೆಯನ್ನು ಹೊಂದಿತ್ತು. ಅದು ವಿಶ್ವವಿದ್ಯಾಲಯ ಆಗಬೇಕು, ವಿಶ್ವವಿದ್ಯಾಲಯ ಆಗಬೇಕೆಂದು ಎಲ್ಲಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಸ್ಥೆಗಳ ಆಶಯ ಇರುತ್ತದೆ. ಈ ದಾರಿಯಲ್ಲಿ ಆಗುತ್ತಿದ್ದು, ಅದಕ್ಕಾಗಿ University ಮಾಡುವುದಕ್ಕಾಗಿ ವಿಧೇಯಕವನ್ನು ತಂದಿದ್ದೇವೆ. ಇದಕ್ಕೆ ಎಲ್ಲರ ಸಹಕಾರ ಬೆಂಬಲ ಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು general ಆಗಿ ಹೇಳುವುದೇನೆಂದರೆ, ನಾವು ಮೊನ್ನೆ 5 ವಿಧೇಯಕಗಳ ಬಗ್ಗೆ ಮಾತನಾಡಿ ಸಹಮತ ಕೊಟ್ಟಿದ್ದೇವೆ. St. Joseph's College ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿದ್ದು, ಇದಕ್ಕೆ ಸಹಮತಿ ನೀಡುವ ಬಗ್ಗೆ ತಕರಾರು ಇಲ್ಲ, ದಯಮಾಡಿ ಇದನ್ನು ಅಂಗೀಕರಿಸಬಹುದು.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, we must be very proud of this Institution. ಇಡೀ ರಾಷ್ಟ್ರದ ನೂರು ಸಂಸ್ಥೆಗಳಲ್ಲಿ ಈ ಸಂಸ್ಥೆ recognize ಆಗಿದ್ದು, ಇದಕ್ಕೆ ರೂ.55 ಕೋಟಿ ಸಹಾಯಧನ ದೊರೆಯುವುದರಿಂದ ಬಹಳ ಅಭಿಮಾನದಿಂದ ನಾನು ಸ್ವಾಗತ ಮಾಡುತ್ತೇನೆ. ಮೊನ್ನೆ ಈ ವಿಷಯದ ವಿಧೇಯಕದ ಬಗ್ಗೆ ಕೇಳಿದ್ದು, ಇದು pass ಆಗಲಿ ಎಂದು ನಮಗೆ interest ಇತ್ತು. Technical point ಗಳಿಂದ ಈ ವಿಧೇಯಕ ಕೊನೆಗೆ ಉಳಿಯಿತು. ಈ ವಿಧೇಯಕ pass ಮಾಡಲು ನಮ್ಮದೇನೂ ಅಭ್ಯಂತರ ಇಲ್ಲ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನನ್ನದೊಂದು ಛಿಟಚಿಡುಜಿಛಿಚಿಣಖಿಟ ಇದ್ದು, ಈ ವಿಧೇಯಕವನ್ನು ಮತ್ತೆ ಕೆಳಮನೆಗೆ reintroduce ಮಾಡಿ ಅನುಮೋದನೆ ಪಡೆದು, earlier Financial Memorandum ನಲ್ಲಿ Governor's approval ಇರಲಿಲ್ಲವೇ ಎಂಬುದು ಒಂದು ಪ್ರಶ್ನೆ. ಎರಡನೆಯದಾಗಿ RUSA ನಿಂದ ಬರುವ ಹಣ ಏನಿದೆ, ಆ ಹಣವನ್ನು ಸಂಸ್ಥೆಗೆ ತಲುಪಿಸಲು ವ್ಯವಸ್ಥೆ ಮಾಡಿದ್ದಾರೆಯೇ? ಏಕೆಂದರೆ ಇದು ತಡ ಆಗಬಾರದು. ಬಹಳ ಒಳ್ಳೆಯ Institution ಎಂದು ಮಾನ್ಯ ಸಚಿವರು ಹೇಳಿದ್ದಾರೆ. ದೇಶದಲ್ಲಿರುವ ನೂರು ಪ್ರಖ್ಯಾತ University ಗಳಲ್ಲಿ ಇದೂ ಒಂದಾಗುತ್ತದೆ ಎಂದು ಹೇಳಿದ್ದೀರಿ. ಇದಕ್ಕೆ ಎಲ್ಲರೂ ಸಹಕಾರವನ್ನು ಕೊಡಬೇಕೆಂದು ಸದನವನ್ನು ಒತ್ತಾಯಿಸುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಈ ವಿಧೇಯಕವು ಮೊನ್ನೆ ಆಗಬೇಕಾಗಿದ್ದರೂ ರಾಜ್ಯಪಾಲರ ಅನುಮತಿ ಪಡೆದು ಬರಬೇಕೆಂದು Parliamentary Affairs Secretary ರವರು ಹೇಳಿದರು ಎಂದು ಮುಂದೂಡಲಾಗಿತ್ತು. ಇದು ಎರಡು ವರ್ಷಗಳ ಹಿಂದೆಯೇ ಬರಬೇಕಾಗಿದ್ದು, ಇದೊಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

best College ಆಗಿದ್ದು, ಬೆಂಗಳೂರಿನಲ್ಲಿಯೇ No.1 College ಆಗಿದೆ. ಇದು ಬರುತ್ತದೋ ಅಥವಾ ಬರುವುದಿಲ್ಲವೋ ಎಂಬ ಕೆಲವು ಅನುಮಾನಗಳಿದ್ದವು; ಹಣವನ್ನು ಕೊಡುತ್ತಾರೋ ಅಥವಾ ತಡೆಹಿಡಿಯುತ್ತಾರೋ ಎಂದೆಲ್ಲಾ ಸಂದೇಹವಿತ್ತು. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಹಣವನ್ನು ಕೊಡುವ ರೀತಿ ಮಾನ್ಯ ಅಶ್ವಥನಾರಾಯಣರವರು approve ಮಾಡಿಕೊಂಡು ಬಂದಿದ್ದಾರೆ. ಅದಕ್ಕೆ ನಾನು ವೈಯಕ್ತಿಕವಾಗಿ ಸದನದ ಮೂಲಕ ಅವರನ್ನುಅಭಿನಂದಿಸುತ್ತೇನೆ.

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಹೇಳಿದ್ದಕ್ಕೂ ಬಹಳ ಕೃತಜ್ಞತೆ ಸಲ್ಲಿಸುತ್ತೇನೆ. ಸರ್ಕಾರ ಇದಕ್ಕೆ ಎಲ್ಲಾ ರೀತಿಯ ಸಹಕಾರ ಕೊಡುತ್ತಿರುವುದಕ್ಕೆ ನನ್ನ ಧನ್ಯವಾದಗಳು. ಅವರು ಮಾತನ್ನು ಉಳಿಸಿಕೊಂಡು ಈ ಅಧಿವೇಶನದಲ್ಲಿಯೇ ತಂದಿದ್ದು, ಇದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ಕೆ. ಗೋವಿಂದರಾಜ್:–** ಮಾನ್ಯ ಅಲ್ಲಂ ವೀರಭದ್ರಪ್ಪನವರು product of that College.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಅಶ್ವಥನಾರಾಯಣರವರು St. Joseph's College ಅನ್ನು ವಿಶ್ವವಿದ್ಯಾಲಯವನ್ನಾಗಿ ಘೋಷಣೆ ಮಾಡುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಎರಡು ದಿವಸಗಳ ಹಿಂದೆ ತಾಂತ್ರಿಕ ಕಾರಣಗಳಿಂದ ಕೆಲವು ಅಡ್ಡಿಯಾಗಿತ್ತು. ಎಲ್ಲಾ ಅಡೆ ತಡೆಗಳನ್ನು ನಿವಾರಿಸಿಕೊಂಡು ಇದೊಂದೇ ಕಾಲೇಜು Public-Private-Partnership ನಲ್ಲಿ ಸ್ಥಾಪನೆಯಾಗುತ್ತಿರುವುದು ಬಹಳ ಸಂತೋಷ. ಇಲ್ಲಿ ನಾನು ಸೇರಿದಂತೆ ಶ್ರೀ ಅಲ್ಲಂ ವೀರಭದ್ರಪ್ಪನವರು, ಶ್ರೀ ಪ್ರಕಾಶ್ ರಾಥೋಡ್‌ರವರೆಲ್ಲರೂ ವಿದ್ಯಾರ್ಥಿಗಳಾಗಿದ್ದೇವೆ. ಬಹುಶಃ ಇನ್ನು ಯಾರಿದ್ದಾರೋ ಗೊತ್ತಿಲ್ಲ. ಆ ಕಾಲೇಜಿನ ವಿದ್ಯಾರ್ಥಿಯಾಗಿ ಕಾಲೇಜು ವಿಶ್ವವಿದ್ಯಾಲಯ ಆಗುವುದರಲ್ಲಿ ನಾನು ಭಾಗಿಯಾಗಿರುವುದು ನನ್ನ ಪೂರ್ವ ಜನ್ಮದ ಪುಣ್ಯ ಎಂದು ಭಾವಿಸುತ್ತೇನೆ. ಇಡೀ ದೇಶದಲ್ಲಿ 200 ಪ್ರತಿಷ್ಠಿತ ಕಾಲೇಜುಗಳಲ್ಲಿ ನಮ್ಮ ವಿಶ್ವವಿದ್ಯಾಲಯಗಳು ಇಲ್ಲ ಎಂದು ಹಿಂದೆ ಮಾತನಾಡಿದೆವು. ಮುಂದಿನ ದಿನಮಾನಗಳಲ್ಲಿ St. Joseph's ವಿಶ್ವವಿದ್ಯಾಲಯ ಇಡೀ ವಿಶ್ವದಲ್ಲಿ ಪ್ರತಿಷ್ಠಿತ ವಿಶ್ವವಿದ್ಯಾಲಯವಾಗಿ ಹೊರಹೊಮ್ಮಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಹಂಗಾಮಿ ಸಭಾಪತಿಯವರು:** ಪ್ರಸ್ತಾವ ಏನೆಂದರೆ;

“ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಸೆಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು ”

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು***

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

***ಖಂಡ 2ರಿಂದ 65ರವರೆಗೆ***

**ಹಂಗಾಮಿ ಸಭಾಪತಿಯವರು: “** ಖಂಡ 2ರಿಂದ 65ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2ರಿಂದ 65ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಹಂಗಾಮಿ ಸಭಾಪತಿಯವರು:** ಪ್ರಸ್ತಾವ ಏನೆಂದರೆ;

“ ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ”

***ಪ್ರಸ್ತಾವ ಅಂಗೀಕರಿಸಲ್ಪಟ್ಟಿತು***

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ: ಅಶ್ವಥ್‌ನಾರಾಯಣ್** ಸಿ.ಎನ್.**(ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಸೆಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಹಂಗಾಮಿ ಸಭಾಪತಿಯವರು:** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಸೆಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

***<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>***

## 10. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕವಿಪ:–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020
2) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020
3)

## 11. ವರದಿಯನ್ನೊಪ್ಪಿಸುವುದು

**ಶ್ರೀ ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರುಗಳ ಖಾಸಗಿ ವಿಧೇಯಕಗಳು ಹಾಗೂ ನಿರ್ಣಯಗಳ ಸಮಿತಿ ಸದಸ್ಯನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 215ರ ಪ್ರಕಾರ ಸಮಿತಿಯ ಮೊದಲನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

**ಹಂಗಾಮಿ ಸಭಾಪತಿಯವರು:–** ವರದಿಯನ್ನೊಪ್ಪಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 12. ಶಾಸನ ರಚನೆ

### ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### ಆ) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಆರ್. ಶಂಕರ್(ತೋಟಗಾರಿಕೆ ಮತ್ತು ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಆರ್. ಶಂಕರ್ (ತೋಟಗಾರಿಕೆ ಮತ್ತು ರೇಷ್ಮೆ ಸಚಿವರು):–:–** ಮಾನ್ಯ ಸಭಾಪತಿಯವರೇ, ಭಾರತೀಯ ಕೃಷಿ ಅನುಸಂಧಾನ ಪರಿಷತ್ (ICAR) ನೀಡಿರುವ ಮಾದರಿಯಲ್ಲಿ ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳದೇ ಹೋದಲ್ಲಿ ಕೆಳಕಾಣಿಸಿದ ಪರಿಣಾಮಗಳನ್ನು ಎದುರಿಸಬೇಕಾಗಬಹುದು.

ವಿಶ್ವವಿದ್ಯಾಲಯ ಹಾಗೂ ಅಧೀನ ಮಹಾ ವಿಶ್ವವಿದ್ಯಾಲಯಗಳಿಗೆ (ICAR) ನಿಂದ ಮಾನ್ಯತೆ ಪಡೆಯುವುದು ಕಷ್ಟಸಾಧ್ಯವಾಗುತ್ತದೆ.

**(ಮುಂದು)**

**(196)/05.02.2021/1.30/ಹೆಚ್‌ವಿಃಬಿಎನ್‌ಎಸ್**

**ಶ್ರೀ ಆರ್.ಶಂಕರ್(ಮುಂದು):–**

"ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ತೋಟಗಾರಿಕಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸಲು ಅವಕಾಶ ನೀಡದೇ ಇರುವಂತಹ ಸಾಧ್ಯತೆಗಳು ಇರುತ್ತವೆ. ಮೂರನೆಯದಾಗಿ, ತೋಟಗಾರಿಕಾ ವಿಶ್ವವಿದ್ಯಾನಿಲಯಕ್ಕೆ ಐ.ಸಿ.ಎ.ಆರ್. ನಿಂದ ಲಭ್ಯವಾಗುವ ಸಹಾಯಧನ ಲಭ್ಯವಾಗದೇ ಹೋಗಬಹುದು. ನಾಲ್ಕನೆಯದಾಗಿ, ವಿಶ್ವವಿದ್ಯಾನಿಲಯಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಐ.ಸಿ.ಎ.ಆರ್.ಸಂಸ್ಥೆಗಳೊಂದಿಗೆ ಸಹಭಾಗಿ ಸಂಶೋಧನೆ ಕೈಗೊಳ್ಳುವ ಅಧಿಕಾರದಿಂದ ವಂಚಿತವಾಗಬಹುದು. ಐದನೆಯದಾಗಿ, ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಮಾದರಿಯಂತೆ 17 ಸದಸ್ಯರ ಬಲವನ್ನು 14ಕ್ಕೆ ಸೀಮಿತಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ವ್ಯವಸ್ಥಾಪನ ಮಂಡಳಿ ಸದಸ್ಯರ ಸಂಖ್ಯೆಯನ್ನು ಪರಿಷ್ಕರಿಸುವುದು ಅಗತ್ಯವಾಗಿರುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ಈ ವಿಶ್ವವಿದ್ಯಾನಿಲಯದ ಬಗ್ಗೆ ಬೇರೆ ವಿಚಾರಗಳಿದ್ದರೆ ಮಾನ್ಯ ಸಚಿವರು ಅದರ ಬಗ್ಗೆ ಬೆಳಕು ಚೆಲ್ಲಬೇಕು.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಏತಕ್ಕೋಸ್ಕರ ಈ ಸಂಖ್ಯಾಬಲವನ್ನು ಕಡಿಮೆ ಮಾಡಲಾಗುತ್ತಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಆರ್.ಶಂಕರ್(ತೋಟಗಾರಿಕೆ ಮತ್ತು ರೇಷ್ಮೆ ಸಚಿವರು)ಃ–** ಸನ್ಮಾನ್ಯ ಸಭಾಪತಿಯವರೇ, ವ್ಯವಸ್ಥಾಪನಾ ಮಂಡಳಿಯಲ್ಲಿನ ಎರಡು ವಿಧಾನಸಭಾ ಸದಸ್ಯರ ಸಂಖ್ಯಾಬಲವನ್ನು ಒಂದು ವಿಧಾನಸಭಾ ಸದಸ್ಯರಿಗೆ ಇಳಿಸಲಾಗಿದೆ. ನಂತರ ಒಬ್ಬ ಡೈರೆಕ್ಟರ್ ಮತ್ತು ಒಬ್ಬ ರೈತ ಸದಸ್ಯ ಬಲವನ್ನು ಕಡತಗೊಳಿಸಿ ಹಿಂದೆ ಇದ್ದಂತಹ 17 ಜನ ಸದಸ್ಯರ ಬಲವನ್ನು 14ಕ್ಕೆ ಇಳಿಸಲಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ)ಃ–** ಸನ್ಮಾನ್ಯ ಸಭಾಪತಿಯವರೇ, ನಾನು ಸಹ ಆ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ ಸದಸ್ಯನಾಗಿದ್ದೆ. ಆಗ ಇಬ್ಬರು ಎಂ.ಎಲ್.ಎ.ಗಳು ಅಂದರೆ, ಮಾನ್ಯ ಮೇಟಿಯವರು, ಶ್ರೀ ಜಿ.ಟಿ.ಪಾಟೀಲ್‌ರವರು ಮತ್ತು ನಾನು ಆ ಮಂಡಳಿಯ ಸದಸ್ಯರಾಗಿದ್ದೆವು. ಈಗ ಮಾನ್ಯ ಆರ್.ಬಿ.ತಿಮ್ಮಾಪೂರ್‌ರವರು ವ್ಯವಸ್ಥಾಪನಾ ಮಂಡಳಿಯ ಸದಸ್ಯರಾಗಿದ್ದಾರೆ. ಈಗ ಅಲ್ಲಿನ ವಸ್ತು ಸ್ಥಿತಿಯ ಬಗ್ಗೆ ನನಗೆ ಗೊತ್ತಿಲ್ಲ. ಇಬ್ಬರು ಎಂ.ಎಲ್.ಎ.ಗಳು ಇದ್ದರೆ, ಒಬ್ಬ ಎಂ.ಎಲ್.ಸಿ. ಆ ವ್ಯವಸ್ಥಾಪನಾ ಮಂಡಳಿಯಲ್ಲಿ ಇರಬೇಕಾಗುತ್ತದೆ. ಈಗ ಇಬ್ಬರು ಎಂ.ಎಲ್.ಎ.ಗಳ ಸಂಖ್ಯೆಯನ್ನು ಒಂದಕ್ಕೆ ಇಳಿಸಿದರೆ ಎಂ.ಎಲ್.ಸಿ.ಗಳ ಸಂಖ್ಯೆಯನ್ನು ಏನು ಮಾಡುತ್ತಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸಂಖ್ಯಾಬಲವನ್ನು ಕಡಿಮೆ ಮಾಡುವುದಕ್ಕೆ ಅವರಿಗಾಗಿರುವ ತೊಂದರೆ ಏನು?

**ಶ್ರೀ ಆರ್. ಶಂಕರ್ಃ–** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಹೊಸ ಕಾಯಿದೆ ಅನ್ವಯ ಈ ಬದಲಾವಣೆ ಮಾಡಬೇಕಾದ ಅವಶ್ಯಕತೆ ಬಂದಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಈ ರೀತಿ ಸಂಖ್ಯಾಬಲವನ್ನು ಕಡಿಮೆ ಮಾಡುವುದಕ್ಕೆ ಯಾರು ಕಾನೂನು ಮಾಡಿದ್ದಾರೆಂದು ಅವರು ಹೇಳಬೇಕಾಗಿದೆ. ಕಾನೂನು ಮಾಡುವುದು ರಾಜ್ಯ ಸರ್ಕಾರವಲ್ಲವೇ?

**ಶ್ರೀ ಕೆ.ಸಿ. ನಾರಾಯಣಗೌಡ (ಯುವಜನ ಸಬಲೀಕರಣ ಮತ್ತ ಕ್ರೀಡೆ ಹಾಗೂ ಯೋಜನಾ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಸೌಲಭ್ಯಗಳನ್ನು ಕೊಡುವ ಕಾರಣಕ್ಕಾಗಿ ಭಾರತ ಸರ್ಕಾರದಿಂದ ನಿರ್ದೇಶನ ಬಂದ ಹಿನ್ನೆಲೆಯಲ್ಲಿ ಈ ಬದಲಾವಣೆ ಮಾಡಲಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಭಾರತ ಸರ್ಕಾರದ ನಿರ್ದೇಶನದ ಮೇರೆಗೆ ಈ ಬದಲಾವಣೆ ಮಾಡಲಾಗಿದೆ ಎಂದು ಮೊದಲೇ ಹೇಳಿದ್ದರೆ ನಾವು ಸುಮ್ಮನೆ ಕುಳಿತುಕೊಳ್ಳುತ್ತಿದ್ದೆವು.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರು):-** ಸನ್ಮಾನ್ಯ ಸಭಾಪತಿಯವರೇ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2020ಕ್ಕೆ ಸಣ್ಣ ತಿದ್ದುಪಡಿಯನ್ನು ಸರ್ಕಾರ ತಂದಿದೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ನಿರ್ದೇಶನಗಳಿಗೆ ಅನುಸಾರವಾಗಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬಾಗಲಕೋಟೆಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಧಿನಿಯಮ,2009ಕ್ಕೆ ತಿದ್ದುಪಡಿ ತರುವುದು ಅವಶ್ಯಕವೆಂದು ಸದರಿ ತಿದ್ದುಪಡಿ ತರಲಾಗಿದೆಯೆಂದು ಹೇಳಲಾಗಿದೆ. ಈ ತಿದ್ದುಪಡಿಯ ಮೂಲಕ ವ್ಯವಸ್ಥಾಪನಾ ಮಂಡಳಿಯಲ್ಲಿದ್ದ 17 ಜನ ಸದಸ್ಯರ ಸಂಖ್ಯೆಯನ್ನು 14ಕ್ಕೆ ಇಳಿಸಲಾಗಿದೆ. ಮಾನ್ಯ ಸಚಿವರು ಹೇಳಿದಂತೆ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ (ಐ.ಸಿ.ಎ.ಆರ್.) ನಿರ್ದೇಶನದ ಮೇರೆಗೆ ಈ ತಿದ್ದುಪಡಿಯನ್ನು ತರಲಾಗಿದೆ. ಚುನಾಯಿತ ಜನಪ್ರತಿನಿಧಿಗಳಾದ ವಿಧಾನಸಭೆಯ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಬದಲಾಗಿ ಬೇರೆ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎನ್ನುವುದು ನನ್ನ ಭಾವನೆಯಾಗಿದೆ. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳು ರಾಜಕಾರಣಿಗಳಾಗಿದ್ದರೂ ಸಹ ಮೂಲತಃ ನಾವು ಕೃಷಿಕರಾಗಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿ, ಸಂಶೋಧನಾ ಕ್ಷೇತ್ರದಲ್ಲಿ, ಕೃಷಿ ಕ್ಷೇತ್ರದಲ್ಲಿ ಮತ್ತು ತೋಟಗಾರಿಕಾ ಕ್ಷೇತ್ರಗಳಲ್ಲಿ ನಮ್ಮದೇ ಆಗಿರುವ ಕೊಡುಗೆಯನ್ನು ಕೊಟ್ಟಿದ್ದೇವೆ. ನಮಗೆ ಈ ಕ್ಷೇತ್ರದಲ್ಲಿ ಅನುಭವವಿಲ್ಲ ಎನ್ನುವ ತಪ್ಪು ಭಾವನೆಯನ್ನು ಹೋಗಲಾಡಿಸಬೇಕಾಗುತ್ತದೆ. ನಮಗೂ ಕೃಷಿ ಮತ್ತು ತೋಟಗಾರಿಕಾ ಕ್ಷೇತ್ರಗಳಲ್ಲಿ ಅನುಭವವಿದೆ.

ಐ.ಸಿ.ಎ.ಆರ್.ನ ನಿರ್ದೇಶನದಂತೆ ಎಂ.ಎಲ್.ಎ ಅಥವಾ ಎಂ.ಎಲ್.ಸಿ.ಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಬದಲಾಗಿ, ಬೇರೆ ಡೈರೆಕ್ಟರ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕೆನ್ನುವುದು ನನ್ನ ಸಲಹೆಯಾಗಿದೆ. ಮಾನ್ಯ ಹೊರಟ್ಟಿಯವರು ಹೇಳಿದಂತೆ ಮೊದಲು ವಿಧಾನಸಭೆಯಿಂದ ಇಬ್ಬರು ಸದಸ್ಯರು ಮತ್ತು ವಿಧಾನ ಪರಿಷತ್ತಿನ ಒಬ್ಬ ಸದಸ್ಯರು ವ್ಯವಸ್ಥಾಪನಾ ಮಂಡಳಿಯಲ್ಲಿದ್ದರು. ಇದನ್ನು ಕಡಿಮೆ ಮಾಡುವುದಕ್ಕೆ ಭಾರತ ಸರ್ಕಾರ ಅಧೀನ ಸಂಸ್ಥೆಯಾಗಿರುವ ಐ.ಸಿ.ಎ.ಆರ್. ನೀಡಿರುವ ನಿರ್ದೇಶನವನ್ನು ನಾವೆಲ್ಲರೂ ಒಪ್ಪಬೇಕಾಗಿದೆ. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ, ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾ ಮತ್ತು ಎ.ಸಿ.ಟಿ.ಇ ರೀತಿಯಲ್ಲಿಯೇ ಐ.ಸಿ.ಎ.ಆರ್. ಆಗಿರುವುದರಿಂದ ಅದರ ನಿರ್ದೇಶನವನ್ನು ನಾವು ಒಪ್ಪಬೇಕಾಗಿದೆ. ಬೇರೆ ದಾರಿಯೇ ಇಲ್ಲವೆಂದು ಹೇಳಿ ಈ ವಿಧೇಯಕವನ್ನು ಸ್ವಾಗತಿಸುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ವ್ಯವಸ್ಥಾಪನಾ ಮಂಡಳಿಯ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕಾಗಿಯೇ ಈ ವಿಧೇಯಕವನ್ನು ತರಲಾಗಿದೆ. ಆ ಮೂಲಕ ಒಬ್ಬ ಜನ ಪ್ರತಿನಿಧಿಯನ್ನು ಕಡಿಮೆ ಮಾಡಲಾಗಿದೆ ಎಲ್ಲದಕ್ಕಿಂತ ಹೆಚ್ಚಾಗಿ ಒಬ್ಬ ರೈತನ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ. ರೈತರ ಹಿತಕ್ಕಾಗಿ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಲಾಗಿದೆ. ಕೃಷಿ ಮತ್ತು ತೋಟಗಾರಿಕೆಯಲ್ಲಿ ಹೊಸಹೊಸ ಸಂಶೋಧನೆಗಳ ಮುಖಾಂತರ Lab to Land ಕಾರ್ಯಕ್ರಮಗಳನ್ನು ವಿಸ್ತರಿಸುವ ಮೂಲಕ ಅದನ್ನು ಬಲಗೊಳಿಸಿ, ರೈತರ ಪಾಲ್ಗೊಳ್ಳುವಿಕೆಯನ್ನು ಹೆಚ್ಚು ಮಾಡಿ, ಅದರ ಲಾಭ ಕೃಷಿಕರಿಗೆ ದೊರೆಯಲಿ ಎನ್ನುವ ಉದ್ದೇಶದಿಂದ ಈ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲಾಗಿದೆ. ಆದರೆ, ಈಗ ಮಾನ್ಯ ಸಚಿವರು ತಂದಿರುವ ವಿಧೇಯಕದಲ್ಲಿ ರೈತರ ಸಂಖ್ಯೆಯನ್ನೇ ಕಡಿಮೆ ಮಾಡಿರುವುದನ್ನು ನಾನು ನಿಜಕ್ಕೂ ಆಕ್ಷೇಪಿಸುತ್ತೇನೆ. ಮಾನ್ಯ ಅಪ್ಪಾಜಿಗೌಡರು ತಮ್ಮ ಧಾಟಿಯಲ್ಲೇ ಅವರ ವಿಚಾರವನ್ನು ಹೇಳಿದ್ದಾರೆ. ದೇಶದ ಬೆನ್ನೆಲುಬು ಮತ್ತು ಈ ವಿಶ್ವವಿದ್ಯಾನಿಲಯದ ಹೃದಯಭಾಗವಾಗಿರುವ ರೈತರ ಸಂಖ್ಯೆಯನ್ನೇ ಕಡಿಮೆ ಮಾಡಿದರೆ ಹೇಗೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎನ್ ಅಪ್ಪಾಜಿಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾವೆಲ್ಲರೂ ರಾಜಕಾರಣಿಗಳಿರಬಹುದು, ಅದರ ಜೊತೆಗೆ ಕೃಷಿಕರಾಗಿದ್ದೇವೆ. ನಾವೆಲ್ಲರೂ ಪ್ರಗತಿಪರ ಕೃಷಿಕರಾಗಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಮೂಲತಃ ಕೃಷಿಕ ಕುಟುಂಬದಿಂದಲೇ ಬಂದಿದ್ದೇವೆ. ನಮ್ಮ ಮುತ್ತಜ್ಜ, ಅಜ್ಜ ಮತ್ತು ನಮ್ಮ ತಂದೆಯವರು ಎಲ್ಲರೂ ಕೃಷಿಕರೇ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿದ್ದಾರೆ. ನಾನು ಕೃಷಿಕ ಕುಟುಂಬದಿಂದ ಬಂದಿದ್ದೇನೆ, ಮಾನ್ಯ ಅಪ್ಪಾಜಿಗೌಡರು ಸಹ ಕೃಷಿಕ ಕುಟುಂಬದಿಂದ ಬಂದಿದ್ದಾರೆ. ಮಾನ್ಯ ಅಪ್ಪಾಜಿಗೌಡರು ಹೇಳಿರುವ ವಿಚಾರಕ್ಕೆ ನಾನು ವ್ಯತಿರಿಕ್ತ ಭಾವನೆಯನ್ನು ವ್ಯಕ್ತ ಮಾಡಿಲ್ಲ.

**ಶ್ರೀ ಆರ್.ಶಂಕರ್:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ನಾನೊಂದು ಸ್ಪಷ್ಟೀಕರಣವನ್ನು ಕೊಡುವುದಕ್ಕೆ ಬಯಸುತ್ತಿದ್ದೇನೆ. ಈ ರೀತಿ ಬದಲಾವಣೆ ಮಾಡಬೇಕೆಂದು ರಾಜ್ಯ ಸರ್ಕಾರ ನಿರ್ಧಾರ ತೆಗೆದುಕೊಂಡಿಲ್ಲ. ಕೇಂದ್ರ ಸರ್ಕಾರದಿಂದ ಬಂದಿರುವ ನಿರ್ದೇಶನದ ಮೇರೆಗೆ ಈ ಬದಲಾವಣೆಗಳನ್ನು ಮಾಡಲಾಗಿದೆ. ಮೂರು ಜನ ರೈತರ ಪೈಕಿ ಒಬ್ಬರನ್ನು ಕಡಿಮೆ ಮಾಡಲಾಗಿದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ ಈ ರೀತಿಯ ಬದಲಾವಣೆ ಮಾಡುವುದಕ್ಕೆ ಕಾರಣವೇನು ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ (ಐ.ಸಿ.ಎ.ಆರ್.) ನಿರ್ದೇಶನದ ಮೇರೆಗೆ ಈ ತಿದ್ದುಪಡಿಯನ್ನು ತರಲಾಗಿದೆಯೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅವರು ಒಟ್ಟು ಸಂಖ್ಯೆಯಲ್ಲಿ ಕಡಿಮೆ ಮಾಡಿ ಎಂದು ಹೇಳಿರಬಹುದು ಆದರೆ, ಮೂರು ಜನ ರೈತರ ಪೈಕಿ ಒಬ್ಬರನ್ನು ತೆಗೆಯಿರಿ ಎಂದು ಹೇಳಿರುವುದಿಲ್ಲ.

**ಶ್ರೀ ಆರ್.ಶಂಕರ್:–** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಈ ಕಾಯಿದೆ ತಂದಿದೆ. ಅದರ ನಿರ್ದೇಶನದ ಪ್ರಕಾರವೇ ನಾವು ಈ ತಿದ್ದುಪಡಿಯನ್ನು ಮಾಡಿರುವುದು. ಸೌಲಭ್ಯಗಳು ಬೇಕೆಂದರೆ ಈ ತಿದ್ದುಪಡಿಯನ್ನು ನಾವು ಮಾಡಿಕೊಳ್ಳಬೇಕಾಗಿದೆ ಇಲ್ಲದಿದ್ದರೆ ಸೌಲಭ್ಯಗಳಿಂದ ವಂಚಿತರಾಗುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರದ ಕೈಯಲ್ಲಿ ಏನಿಲ್ಲ. ಕೇಂದ್ರ ಸರ್ಕಾರದವರ ಮಾರ್ಗಸೂಚಿಯನ್ವಯ ಈ ತಿದ್ದುಪಡಿಗಳನ್ನು ಮಾಡಲಾಗಿದೆ. ನಮ್ಮ ಸದನದಲ್ಲಿ ಈ ರೀತಿ ಚರ್ಚೆಯಾಯಿತು, ಮಾನ್ಯ ಸದಸ್ಯರುಗಳು ಈ ರೀತಿಯಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಎನ್ನುವ ವಿಷಯವನ್ನು ಅವರಿಗೆ ತಿಳಿಸಬಹುದಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಅಪ್ಪಾಜಿಗೌಡಃ–** ಸನ್ಮಾನ್ಯ ಸಭಾಪತಿಯವರೇ, ಇಡೀ ಭಾರತ ದೇಶದಲ್ಲಿ ಬೇರೆ ರಾಜ್ಯಗಳಲ್ಲಿಯೂ ಕೂಡ ಇದೇ ರೀತಿ ಸಂಖ್ಯೆಯನ್ನು ಕಡಿಮೆ ಮಾಡಿದ್ದಾರೆಯೇ ಎನ್ನುವುದನ್ನು ನೋಡಬೇಕಾಗಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)ಃ–** ಸನ್ಮಾನ್ಯ ಸಭಾಪತಿಯವರೇ, ನಾನು ರೆಕಾರ್ಡ್‌ಗಳನ್ನು ಓದಿದಾಗ, ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ವಿಶ್ವವಿದ್ಯಾನಿಯಗಳಲ್ಲಿ ಯಾವ ರೀತಿಯ ಪ್ಯಾಟರ್ನ್ ಇರಬೇಕೆಂದು ಐ.ಸಿ.ಎ.ಆರ್. ಏನು ನಿಯಮಗಳನ್ನು ನಿರೂಪಣೆ ಮಾಡಿ, ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ. ಅದರ ಮಾರ್ಗಸೂಚಿಯನ್ವಯ ರಾಜ್ಯ ಸರ್ಕಾರ ತಿದ್ದುಪಡಿಯನ್ನು ತಂದಿದೆಯೇ ಹೊರತು, ರಾಜ್ಯ ಸರ್ಕಾರವೇ ಯಾವುದೇ ರೀತಿಯ ತಿದ್ದುಪಡಿಗಳನ್ನು ತಂದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಃ–** ಸನ್ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದಿಂದ ಮಾರ್ಗಸೂಚಿ ಬಂದಿದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ನಮ್ಮ ಭಾವನೆಗಳನ್ನು ಅವರಿಗೆ ತಿಳಿಸಿ ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಕವಟಗಿಮಠ ಮಹತೇಂಶ ಮಲ್ಲಿಕಾರ್ಜುನಃ–** ಸನ್ಮಾನ್ಯ ಸಭಾಪತಿಯವರೇ, ಈ ರೀತಿ ತಿದ್ದುಪಡಿ ಮಾಡಬೇಕೆಂದು ಐ.ಸಿ.ಎ.ಆರ್. ಮಾರ್ಗಸೂಚನೆಯನ್ನು ಕೊಟ್ಟಿದೆ.

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ನಮಗೆ ಐ.ಸಿ.ಎ.ಆರ್. ಬಗ್ಗೆ ತುಂಬಾ ಗೌರವವಿದೆ. ಅಲ್ಲಿಯೂ ತಜ್ಞರು ಮತ್ತು ದೊಡ್ಡದೊಡ್ಡ ವಿಜ್ಞಾನಿಗಳು ಇದ್ದಾರೆ. ಇದರ ಬಗ್ಗೆ ನಾವು ಮಾತನಾಡುವುದಿಲ್ಲ. ಸಂಖ್ಯಾಬಲವನ್ನು ಕಡಿಮೆ ಮಾಡಿ ಎಂದು ಹೇಳಿದಾಗ, ರೈತರ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಬದಲಾಗಿ ಬೇರೆಯವರನ್ನು ಕಡಿಮೆ ಮಾಡಬಹುದಾಗಿತ್ತು. ಈ ವ್ಯವಸ್ಥಾಪನಾ ಮಂಡಳಿಯಲ್ಲಿ ಎಷ್ಟೋ ಜನ ಹಿರಿಯ ಅಧಿಕಾರಿಗಳು ಸದಸ್ಯರಾಗಿದ್ದಾರೆ ಅವರು ಯಾರೂ ಬೋರ್ಡ್ ಮೀಟಿಂಗ್‌ಗೆ ಬರುವುದೇ ಇಲ್ಲ. ರೈತರ ಪಾಲ್ಗೊಳ್ಳುವಿಕೆಯಿಂದಾಗಿ ಆ ವಿಶ್ವವಿದ್ಯಾನಿಲಯಕ್ಕೊಂದು ಶೋಭೆ ಬರುತ್ತದೆ. ಅಷ್ಟೇ ಅಲ್ಲ ಪರಿಣಾಮಕಾರಿಯಾದ ವಿಚಾರಗಳು ಚರ್ಚೆಗೆ ಬರುತ್ತವೆ. ರೈತರ ಸಂಖ್ಯೆ ಕಡಿಮೆ ಮಾಡುವುದಕ್ಕೆ ಇವರು ಯಾಕೆ ಚಿಂತನೆ ಮಾಡಿದರು ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಆರ್.ಶಂಕರ್ಃ–** ಸನ್ಮಾನ್ಯ ಸಭಾಪತಿಯವರೇ, ಐ.ಸಿ.ಎ.ಆರ್. ಮಾರ್ಗಸೂಚಿನೆಯ ಪ್ರಕಾರ ಮಾಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(197) 5.2.2021 1.40 ಪಿಕೆ : ಜಿಆರ್**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಐ.ಸಿ.ಎ.ಆರ್., ನವರು, ರೈತರ ಸಂಖ್ಯೆಯನ್ನು ಕಡಿಮೆ ಮಾಡಿ ಎಂದು ಹೇಳಿದ್ದಾರೆಯೇ? I strongly object for dropping a farmer.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಐ.ಸಿ.ಎ.ಆರ್., ನಿಯಮದ ಪ್ರಕಾರ ರೈತರ ಸಂಖ್ಯೆಯನ್ನು ಕಡಿಮೆ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಹಾಗಾದರೆ ಒಂದು ಕೆಲಸ ಮಾಡಿ, ಆ ರೈತರನ್ನು **'**Permanent Invitee' ಎಂದು ಮಾಡಿ. ಹೀಗೆ ಮಾಡಬಹುದಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಬಹಳಷ್ಟು ಅಧಿಕಾರಿಗಳನ್ನು ನೋಡಿದ್ದೇನೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ವಿರೋಧ ಪಕ್ಷದ ನಾಯಕರ ಸಲಹೆಯನ್ನು ನಾನು ಒಪ್ಪಿಕೊಂಡಿದ್ದೇನೆ. ಆದರೆ, ರೈತರು **'**Permanent Invitee' ಆಗಿ ಭಾಗವಹಿಸುವ ಹಾಗೆ ವ್ಯವಸ್ಥೆ ಮಾಡಬಹುದಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, that is secondary. ಆ ರೀತಿ ಇನ್‌ವೈಟ್ ಮಾಡಬೇಕಾದರೂ ಐ.ಸಿ.ಎ.ಆರ್., ನವರ ಅನುಮತಿ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಅವರು ಒಪ್ಪಿಕೊಳ್ಳುವುದಿಲ್ಲ. ಆದರೆ ನಮ್ಮ ಅಭಿಪ್ರಾಯಗಳೇನಿವೆಯೋ ಆ ಕುರಿತು ನೀವು ಅವರಿಗೆ ಸಲಹೆ ಕೊಡಬಹುದು. Farmers participation in the Board of Regents ಇದ್ದರೆ ಅದು ಪರಿಣಾಮಕಾರಿಯಾಗಿರುತ್ತದೆ. ರೈತರ ಸಂಖ್ಯೆಯನ್ನು ಏಕೆ ಕಡಿಮೆ ಮಾಡುತ್ತೀರಿ? ಮಾನ್ಯ ಸಭಾಪತಿಯವರೇ, ಕೃಷಿ ಇಲಾಖೆಗೆ ಐ.ಎ.ಎಸ್., ಮಾಡಿರುವವರು ಪ್ರಧಾನ ಕಾರ್ಯದರ್ಶಿ ಆಗಿರುತ್ತಾರೆ. ಅವರು ಕೃಷಿಯಲ್ಲಿ ಬಿ.ಎಸ್ಸಿ., ಎಂ.ಎಸ್ಸಿ ಅಥವಾ Ph.D., ಮಾಡಿರುವುದಿಲ್ಲ. ಐ.ಎ.ಎಸ್., ಆದ ಮಾತ್ರಕ್ಕೆ ಅವರಿಗೆ ಕೃಷಿಯ ಬಗ್ಗೆ ಎಲ್ಲಾ ಗೊತ್ತಿರುತ್ತದೆ ಎಂದರ್ಥವಲ್ಲ. ಕೃಷಿಯಂತಹ ಕಠಿಣ ವಿಜ್ಞಾನ ಇನ್ನೊಂದಿಲ್ಲ. ಸ್ಪೇಸ್ ಸೈನ್ಸ್‌ಗಿಂತಲೂ ಕೃಷಿ ವಿಜ್ಞಾನ ಬಹಳ ಕಠಿಣ. ಕೃಷಿ ವಿಷಯದಲ್ಲಿ ರ್‍ಯಾಂಕ್ ಹೋಲ್ಡರ್ ಅಥವಾ ಗೋಲ್ಡ್ ಮೆಡ್ಲಿಸ್ಟ್ ಇದ್ದರೆ ಅಂಥವನನ್ನು ನೇಮಿಸುವ ಕಾಲ ಇದೆ. ನೀವು ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ತಯಾರಿಲ್ಲ, ರೈತರ ಸಂಖ್ಯೆಯನ್ನು ಕಡಿಮೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕೆ ಹೊರಟ್ಟಿದ್ದೀರಿ. ತೋಟಗಾರಿಕೆ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯಗಳು ಯಾರ ಸಲುವಾಗಿ ಇವೆ? They are created for the welfare of farmers. ಆ ರೈತರ ಜೊತೆ ಚರ್ಚೆ ಮಾಡಿದರೆ, ಪ್ರಯೋಗಾಲಯಗಳಲ್ಲಿ ಅನೇಕ ಪ್ರಯೋಗಗಳಾಗುವ ಸಾಧ್ಯತೆ ಇರುತ್ತದೆ. ವಿಜ್ಞಾನಿಗಳು ಹೊಸ ಹೊಸ ತಳಿಗಳನ್ನು ಕಂಡುಹಿಡಿಯುತ್ತಾರೆ, ಹೀಗೆ ದೊಡ್ಡ ಪ್ರಮಾಣದಲ್ಲಿ ಸಂಶೋಧನೆ ಆಗುತ್ತದೆ. Lab to land - ಸಂಶೋಧನೆಯಾಗಿದ್ದು ರೈತರ ಜಮೀನಿಗೆ ಬರಬೇಕು. ಆಗ ಆಧುನಿಕ ಬೇಸಾಯ ಅನಿಸುತ್ತದೆ. Technical aspect ನಲ್ಲಿ ರೈತರು ಬಲ ಪಡೆಯುತ್ತಾರೆ. ರೈತರಿದ್ದರೆ, ಆತ ರೈತನ ಕಷ್ಟ–ಸುಖ, ಅವನ ಪ್ರಾಕ್ಟಿಕಲ್ ಲೈಫ್ ಏನಿದೆ ಎನ್ನುವುದನ್ನು ಆತ ಹೇಳುತ್ತಾನೆ. ಅಧಿಕಾರಿಗಳು ಅಥವಾ ನಾವು ಅಂತಹ ಕಡೆ ಇದ್ದರೆ ಏನೂ ಆಗುವುದಿಲ್ಲ. ಸ್ವತಃ ಕೃಷಿಕರಾಗಿ, ಪ್ರಗತಿಪರ ರೈತರು ಅಲ್ಲಿರುವುದರಿಂದ practical difficulty ಏನಿದೆ, ಕೃಷಿಯಲ್ಲಿರುವ ಕಷ್ಟವೇನು, ನೋವುಗಳೇನು, ಯಾವರೀತಿ ಸಂಶೋಧನೆ ಮಾಡಬೇಕು ಎನ್ನುವುದು ಗೊತ್ತಾಗುತ್ತದೆ. ಅದರಿಂದ ರೈತರಿಗೆ ಲಾಭವಾಗುತ್ತದೆ. **"ಕೃಷಿತೋ ನಾಸ್ತಿ ದುರ್ಭಿಕ್ಷ"** ಎಂದು ಹೇಳುತ್ತಾರೆ. ಕೃಷಿ ನಾಶವಾದರೆ ದೇಶವೇ ಭಿಕ್ಷೆ ಬೇಡುವಂತಹ ಪರಿಸ್ಥಿತಿ ಬರುತ್ತದೆ. ಆ ವಿಶ್ವವಿದ್ಯಾಲಯದ ಹೃದಯ ಎನಿಸುವಂತಹ ರೈತರ ಸಂಖ್ಯೆಯನ್ನು ಕಡಿಮೆ ಮಾಡುವ ಬದಲು ಬೇರೆಯವರ ಸಂಖ್ಯೆಯನ್ನು ಕಡಿಮೆ ಮಾಡಿ. 17 ಸಂಖ್ಯೆ ಇದ್ದದ್ದನ್ನು 14 ಮಾಡಬೇಕು ಎಂದಾಗ ನಿಮ್ಮ ಕಣ್ಣಿಗೆ ರೈತನೇ ಕಂಡನೇ? ಐಸಿಎಆರ್ ನವರೇ, 3 ಮಂದಿ ರೈತರ ಬದಲಿಗೆ 2 ಮಂದಿ ರೈತರಿರಲಿ ಎಂದು ಹೇಳಿದ್ದರೆ I have no objection. ನಾನೇ ಐ.ಸಿ.ಎ.ಆರ್., ಅವರ ಜೊತೆ ಮಾತನಾಡುತ್ತೇನೆ. ಅಲ್ಲಿ ಕೆಲಸಕ್ಕೆ ಬಾರದ ಅಧಿಕಾರಿಗಳು ಸಾಕಷ್ಟು ಜನ ಇದ್ದಾರೆ. ಅವರು ಸರಿಯಾಗಿ ಸಭೆಗಳಿಗೆ ಬರುವುದಿಲ್ಲ, ಪರಿಣಾಮಕಾರಿಯಾಗಿ ಚರ್ಚೆಯನ್ನೂ ಮಾಡುವುದಿಲ್ಲ.

**ಶ್ರೀ ಆರ್.ಶಂಕರ್ (ತೋಟಗಾರಿಕೆ ಮತ್ತು ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೇ, ಈಗ ಈ ವಿಧೇಯಕವನ್ನು ಪಾಸ್ ಮಾಡಲಿ. ನಂತರ ತಾವು ಏನು ಸಲಹೆ ಕೊಟ್ಟಿದ್ದೀರೋ . . .

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, let the Hon'ble Minister think over it. ನಾನಂತೂ, ರೈತರನ್ನು Board of Regents ನಿಂದ ಕಡಿಮೆ ಮಾಡುವ ನಿರ್ಧಾರಕ್ಕೆ ಸುತರಾಂ ಒಪ್ಪುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, I have just gone through the records. ಮಾನ್ಯ ವಿರೋಧ ಪಕ್ಷದ ನಾಯಕರ ಕಳಕಳಿ ನಮಗೆ ಅರ್ಥವಾಗುತ್ತಿದೆ. ಕರ್ನಾಟಕದಲ್ಲಿರುವ ಎಲ್ಲಾ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳಲ್ಲಿ as per the guidelines issued by the I.C.A.R., the amendments which they have already done, ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲೂ ಸಹಿತ ಐ.ಸಿ.ಎ.ಆರ್., ನಾರ್ಮ್ಸ್ ಪ್ರಕಾರ 14 ಸಂಖ್ಯೆಯನ್ನು ಮಾಡಲಾಗಿದೆ. ಆ ಆಧಾರದ ಮೇಲೆ ಇಲ್ಲಿ ಸಂಖ್ಯೆ ಮಾಡಿದ್ದಾರೆಯೇ ಹೊರತು, ರೈತರ ಸಂಖ್ಯೆಯನ್ನು ಕಡಿಮೆ ಮಾಡಬೇಕು ಎನ್ನುವ ಉದ್ದೇಶ ಇಲ್ಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು 'why not the Secretary of the Agriculture Department or Horticulture Department be removed' ಎಂಬ ಮಾತನ್ನು ಹೇಳಿದಿರಿ. ನಾನೇನು ಹೇಳುತ್ತೇನೆ ಎಂದರೆ there is a financial implication.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಐ.ಸಿ.ಎ.ಆರ್., ನವರು ಸಂಖ್ಯೆಯನ್ನು 14ಕ್ಕೆ ಇಳಿಸಬೇಕು ಎಂದು mandatory ಮಾಡಿದ್ದರೆ ಅದನ್ನು ಕಡಿಮೆ ಮಾಡಲಿ, ಆದರೆ ರೈತರ ಸಂಖ್ಯೆಯನ್ನು ಏಕೆ ಕಡಿಮೆ ಮಾಡುತ್ತೀರಿ ಎಂದು ಕೇಳಿದೆ. ಒಬ್ಬ ಅಧಿಕಾರಿಯನ್ನು ತೆಗೆಯಿರಿ. ರೈತ ಹಗಲು–ರಾತ್ರಿ, ಬಿಸಿಲು, ಮಳೆ, ಛಳಿ ಎನ್ನದೇ, ತಾನು, ತನ್ನ ಹೆಂಡತಿ–ಮಕ್ಕಳು ಜಮೀನಿನಲ್ಲಿ ದುಡಿಮೆ ಮಾಡಿ ದೇಶದ 138 ಕೋಟಿ ಜನಸಂಖ್ಯೆಗೆ ಅನ್ನ ನೀಡುತ್ತಾನೆ. ಆತ ಅನ್ನದಾತ. ಆತನಿಗೆ ರೈತನ ಕಷ್ಟ–ಸುಖ ಏನು ಎಂದು ತಿಳಿದಿರುತ್ತದೆ. ನೀವು ಎಂ.ಎಲ್.ಎ., ಎಂ.ಎಲ್.ಸಿ., ಗಳನ್ನು ಕಡಿಮೆ ಮಾಡಿ, I don't mind. ಆದರೆ ರೈತರ ಸಂಖೆಯನ್ನು ಕಡಿಮೆ ಮಾಡಬೇಡಿ.

**ಶ್ರೀ ಆರ್.ಶಂಕರ್:–** ಒಬ್ಬ ಅಧಿಕಾರಿ ಸಂಖ್ಯೆಯನ್ನು ಕಡಿಮೆ ಮಾಡಿದ್ದೇವೆ. ಕಾಯಿದೆ ಪ್ರಕಾರ ಮಾಡಿದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, kindly rethink and come back to this House.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ತೆಗೆದು ಹಾಕುವ ಅಧಿಕಾರ ನಿಮಗೆ ಇದೆಯೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಸಿ.ನಾರಾಯಣಗೌಡ:–** ಭಾರತ ಸರ್ಕಾರ ನಮಗೆ ನಿರ್ದೇಶನ ಕೊಟ್ಟಿದೆಯೇ ಹೊರತು ನಾವು ಅದನ್ನು ಮಾಡಿಲ್ಲ. ಭಾರತದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಈ ನಿಯಮ ಇದೆ. ಅದನ್ನು ನಾವು ಅನುಸರಿಸಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ಕಾರ್ಯಕ್ರಮದಲ್ಲಿ ನೀವು ಮತ್ತು ಮುಖ್ಯಮಂತ್ರಿಗಳಿದ್ದಾಗ Zoom Meeting ನಲ್ಲಿ ನಾನೂ ಭಾಗವಹಿಸಿದ್ದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಐ.ಸಿ.ಎ.ಆರ್., ನಾರ್ಮ್ಸ್‌ನಲ್ಲಿ they have stated specifically and categorically.

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಐ.ಸಿ.ಎ.ಆರ್., ನವರು ಹೇಳಿದ ಮೇಲೆ ಅದೇರೀತಿ ನಡೆದುಕೊಳ್ಳಬೇಕು ಅಲ್ಲವೇ?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ನೋಡಿ, we are not discriminating.

**ಶ್ರೀ ಎಸ್.ಆರ್.ಪಾಟೀಲ್:–** ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ general ಆಗಿ vague ಆಗಿದ್ದರೆ ಅದನ್ನು ನಾನು ಕೇಳುವುದಕ್ಕೆ ತಯಾರಿಲ್ಲ. ಮಾನ್ಯ ಸಭಾಪತಿಯವರೇ, ಇವತ್ತು ಈ ಕುರಿತು ಚರ್ಚೆ ಬೇಡ. ಸೋಮವಾರ ಚರ್ಚೆಗೆ ಅವಕಾಶ ಮಾಡಿಕೊಡಿ. Kindly furnish all the order issued by the I.C.A.R., ಇದು ಸರಿಯಲ್ಲ, ರೈತರ ಸಂಖ್ಯೆಯನ್ನು ಕಡಿಮೆ ಮಾಡುವುದು ಸರಿಯಾದ ಸಂದೇಶ ಕೊಡುವುದಿಲ್ಲ. ಐ.ಸಿ.ಎ.ಆರ್., ನವರು ಒಟ್ಟು ಸಂಖ್ಯೆಯನ್ನು ಕಡಿಮೆ ಮಾಡಿ ಎಂದು ಹೇಳಿರಬಹುದೇ ಹೊರತು ರೈತರ ಸಂಖ್ಯೆಯನ್ನು ಕಡಿಮೆ ಮಾಡಿ ಎಂದು ಹೇಳಿರುವುದಿಲ್ಲ. ನಿಮ್ಮ ಕಣ್ಣಿಗೆ ರೈತರೇ ಕಂಡರೇ? ಮತ್ಯಾರೂ ಕಾಣಲಿಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾಗಿ ಬಂದಿರುವ ಈ ವಿಧೇಯಕವನ್ನು ನಾವು ಇಲ್ಲಿ ಚರ್ಚೆಗೆ ತೆಗೆದುಕೊಂಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಅಪ್ಪಾಜಿಗೌಡರು ತುಂಬಾ ವಿಚಾರಗಳನ್ನು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ರೈತರ ಹಿತರಕ್ಷಣೆಗೆ ಒತ್ತು ಕೊಡಬೇಕು ಎನ್ನುವುದು ಮಾನ್ಯ ವಿರೋಧ ಪಕ್ಷದವರ ಅಭಿಪ್ರಾಯ. ನಾವು ಈ ಕುರಿತು ನಿಯಮಗಳನ್ನು ರೂಪಿಸುವಾಗ, ಕೇಂದ್ರ ಸರ್ಕಾರದ ಮಾರ್ಗಸೂಚಿಗಳು ಏನಿದೆ, ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಏನು ಹೇಳಿದ್ದಾರೆ ಎನ್ನುವುದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತಹ ವ್ಯವಸ್ಥೆ ಮಾಡುತ್ತೇವೆ. ಈಗ ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಕುರಿತು ಮಾತನಾಡಲು ಸೋಮವಾರ ಅವಕಾಶ ಕೊಡಿ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಮಾತುಗಳಿಗೆ ಅನುಗುಣವಾಗಿ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಧೇಯಕ ತಿದ್ದುಪಡಿ ರೂಪದಲ್ಲಿ ಬಂದಿದೆ. ಐ.ಸಿ.ಎ.ಆರ್.,ನವರು ಕೊಟ್ಟಿರುವ ಆದೇಶ ಅಥವಾ ಗೈಡ್‌ಲೈನ್ಸ್‌ನ ಹಿನ್ನೆಲೆಯಲ್ಲಿ ಈ ತಿದ್ದುಪಡಿಯನ್ನು ತರಲಾಗಿದೆ. ಐ.ಸಿ.ಎ.ಆರ್., ಸಲಹೆ ಕೊಡಬಹುದೇ ಹೊರತು they cannot overrule the State, because Agriculture and Horticulture fall under the State List. ಕೇಂದ್ರ ಸರ್ಕಾರಕ್ಕೆ ಇಲ್ಲಿನ ತೋಟಗಾರಿಕಾ ಪ್ರಕ್ರಿಯೆ ಏನಿದೆ, ಈ ಕುರಿತು ಸಂಬಂಧ ಇರುವುದಿಲ್ಲ. ಆದರೆ ಇದನ್ನು ಏಕೆ ತಂದರು ಎಂದು ಹೇಳುತ್ತೇನೆ. ಇವತ್ತು, Agricultural enterprises ಅವರನ್ನು ಪ್ರಮೋಟ್ ಮಾಡುವುದು ಬಹಳ ಮುಖ್ಯವಾಗಿದೆ. ಮತ್ತೆ, ಸಂಶೋಧನೆ ಮಾಡುವುದು ಮತ್ತು ಹೊಸದಾಗಿ ಅಧ್ಯಯನ ಮಾಡುವಂಥದ್ದು ಆಗಬೇಕು. ಇಲ್ಲಿ ಕೇಂದ್ರ ಸರ್ಕಾರ ಇಬ್ಬರನ್ನು ನಾಮಿನೇಟ್ ಮಾಡುವುದಕ್ಕೆ ಮುಂದಾಗಿದೆ. ಅದು ಯಾರು ಎಂದರೆ 'One distinguished Agriculture entrepreneur owning Agro-industry - ಅಲ್ಲಿರುವಂಥ ಒಬ್ಬರನ್ನು ನಾಮಿನೇಟ್ ಮಾಡುವ ಉದ್ದೇಶ ಇದರಲ್ಲಿದೆ. ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರ ಮೇಲೆ ಹೇಗೆ ಓವರ್‌ರೂಲ್ ಮಾಡುತ್ತಿದ್ದಾರೆ? Federal system ನ ಯಾವರೀತಿ conquer ಮಾಡುತ್ತಿದ್ದಾರೆ ಎನ್ನುವುದಕ್ಕೆ ಇದೊಂದು ಸಣ್ಣ ಹೋಲ್ ಆಗಿದೆ. ನಂತರ ಅದು ದೊಡ್ಡ ಹೋಲ್ ಆಗುತ್ತದೆ. ಮಾನ್ಯ ಸಭಾಪತಿಯವರೇ, one representative is to be nominated by the Indian Council of Agricultural Research. ಅವರೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಮಿನೇಟ್ ಮಾಡುತ್ತಾರೆ. ಇಬ್ಬರು ಸದಸ್ಯರನ್ನು ನಾಮಿನೇಟ್ ಮಾಡುವುದಕ್ಕೋಸ್ಕರ ಅಲ್ಲಿಂದ ಕಳುಹಿಸಿರುವಂತಹ ಒಂದು ನಿರ್ದೇಶನ ಇದಾಗಿದೆ. ಇದರಲ್ಲಿ ಇಬ್ಬರನ್ನು ತೆಗೆದು ಇಬ್ಬರನ್ನು accommodate ಮಾಡುವುದಕ್ಕೆ ಹೀಗೆ ಮಾಡಿದ್ದಾರೆ. ಇಲ್ಲಿರುವ ಉದ್ದೇಶ ಅದೇ ಆಗಿದೆ.

**ಶ್ರೀ ಎಸ್.ಶಂಕರ್:–** ಮಾನ್ಯ ಸಭಾಪತಿಯವರೇ, ಇಬ್ಬರನ್ನು ತೆಗೆಯುತ್ತಿದ್ದೇವೆ, ಇಬ್ಬರನ್ನು ಸೇರಿಸುತ್ತಿಲ್ಲ.

**ಶ್ರೀ ಪಿ.ಆರ್.ರಮೇಶ್:–** ನೀವು ಈಗ ಇಬ್ಬರನ್ನು ಸೇರಿಸುತ್ತಿದ್ದೀರಿ. ಐ.ಸಿ.ಎ.ಆರ್., ನವರು ನಾಮಿನೇಟ್ ಮಾಡುವ ಒಬ್ಬರನ್ನು ಸೇರಿಸುತ್ತೀರಿ, Agro-Industry ಅವರಿಂದ ಒಬ್ಬರನ್ನು ಸೇರಿಸುತ್ತೀರಿ.

**(ಮುಂದು)**

**(198)5–2–21/1.50/ಡಿಎಸ್–ಜಿಆರ್**

**ಶ್ರೀ ಪಿ.ಆರ್.ರಮೇಶ್(ಮುಂದು):–**

ಕೇಂದ್ರ ಸರ್ಕಾರದವರು ಇಬ್ಬರ ಹೆಸರನ್ನು ಕೊಡುತ್ತಾರೆ. ಈ ವಿಶ್ವವಿದ್ಯಾಲಯದಲ್ಲಿ ಇಬ್ಬರು ಹೆಸರನ್ನು ಹಾಕುವುದಕೋಸ್ಕರ, ಅವರು ಅಲ್ಲಿಂದ ಕಳುಹಿಸಿರುವಂತಹ ಒಂದು ನಿರ್ದೇಶನ. ಆ ನಿರ್ದೇನದ ಮೇಲೆ ಇವತ್ತು ತಿದ್ದುಪಡಿಯನ್ನು ತಂದಿರುವಂಥದ್ದು. ಮೂಲಭೂತವಾಗಿರುವಂತಹ ಪ್ರಶ್ನೆ ಏನೆಂದರೆ, ಸಂವಿಧಾನದಲ್ಲಿ ಇಲ್ಲದಿರುವಂತಹ ಅಧಿಕಾರವನ್ನು ಹೇಗೆ ನಾವು ಈ ಸಭೆಯಲ್ಲಿ ಗಣನೆಗೆ ತೆಗೆದುಕೊಂಡು ಒಪ್ಪಿಗೆಗೆ ಕೊಡುವುದಕ್ಕೆ ಬರುತ್ತದೆ? ಐ.ಸಿ.ಎ.ಆರ್., ನವರು ಕೊಟ್ಟಿರುವಂತಹ ಸಲಹೆಯ ಮೇಲೆ ನಾವು ಒಂದು ಕಾನೂನನ್ನು ಬದಲಾವಣೆ ಮಾಡವುದಕ್ಕೆ ಹೊರಟಿದ್ದೇವೆಯಲ್ಲಾ?

**ಹಂಗಾಮಿ ಸಭಾಪತಿಯವರು:–** ಮಾನ್ಯ ರಮೇಶ್‌ರವರೇ, ಬೇಗ ಮುಗಿಸಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇದು ಬಹಳ ಮುಖ್ಯವಾದದ್ದು.

**ಹಂಗಾಮಿ ಸಭಾಪತಿಯವರು:–** ನನಗೆ ಅರ್ಥವಾಗುತ್ತಿದೆ. ಆದರೆ ಸಮಯವಿಲ್ಲ, ಇನ್ನು ರಾಜ್ಯಪಾಲರ ವಂದನಾ ನಿರ್ಣಯವಿದೆ. ನಾನು ಸಾಯಂಕಾಲದವರೆಗೆ ಕುಳಿತುಕೊಳ್ಳುವುದಕ್ಕೆ ಸಿದ್ಧನಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇವತ್ತು ಬೆಂಗಳೂರು ವಿಶ್ವವಿದ್ಯಾಲಯವನ್ನು 2–3 ವಿಭಾಗಗಳಾಗಿ ವಿಭಜನೆ ಮಾಡಿದ್ದಾರೆ. ಅದೇ ರೀತಿ ಬಾಗಲಕೋಟೆಯಲ್ಲಿ ಈಗಾಗಲೇ ಇದೆ. ಬಾಗಲಕೋಟೆಗಿಂತ ಹಿಂದಿನಿಂದ ಹೆಸರುಘಟ್ಟದಲ್ಲಿ ತೋಟಗಾರಿಕೆ ಇಲಾಖೆ ಇದೆ. ಆ ತೋಟಗಾರಿಕೆ ಇಲಾಖೆಯಲ್ಲಿ ಕರ್ನಾಟಕ ಸೌತ್ ಯೂನಿರ್ವಸಿಟಿ ಎಂದು ಮಾಡುವುದಕ್ಕೆ ಒಪ್ಪಿಕೊಂಡು ಎರಡು ವಿಶ್ವವಿದ್ಯಾಲಯವನ್ನು ಮಾಡಬೇಕು. ಬಾಗಲಕೋಟೆಯಲ್ಲಿ ಒಂದು ಇರಲಿ, ಇಲ್ಲೂ ಒಂದು ಮಾಡಿ. ಏಕೆಂದರೆ, ಇಲ್ಲಿನ ಜನರಿಗೆ ಅದು ಅನುಕೂಲವಾಗುವ ರೀತಿಯಲ್ಲಿ ಮಾಡುವುದಾದರೆ ಎರಡು ವಿಶ್ವವಿದ್ಯಾಲಯದ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಐ.ಸಿ.ಎ.ಆರ್., ನವರು ಕೊಟ್ಟಿರುವಂತಹ ಮಾರ್ಗಸೂಚಿ ಮೇಲೆ ತಂದಿರುವಂಥದ್ದು ಎಷ್ಟರ ಮಟ್ಟಿಗೆ ಸರಿಯಿದೆಯೋ ಎಂಬುದು ನನಗೆ ಗೊತ್ತಿಲ್ಲ. ಆದರೆ federal structure ಅನ್ನು dismantle ಮಾಡುವಂಥದ್ದಕ್ಕೆ ನಾಂದಿಯಾಗುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಸ್ವಲ್ಪ ತಡವಾಗಿ ಬಂದಿದ್ದೇನೆ. ಐ.ಸಿ.ಎ.ಆರ್., ಪ್ರಕಾರ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಎಂದು ನನಗನಿಸುತ್ತಿದೆ. ಐ.ಸಿ.ಎ.ಆರ್., ನವರು ಕೃಷಿ ಕಾಲೇಜಿಗೆ ಒಂದು ನಿಯಮ, ತೋಟಗಾರಿಕೆ ಕಾಲೇಜಿಗೆ ಒಂದು ನಿಯಮ ಮಾಡಿದ್ದಾರೆಯೇ ಎಂಬುದನ್ನು ಮೊದಲು ಸ್ಪಷ್ಟನೆ ಕೊಡಬೇಕು. ನಾನು ಈಗ ಕೃಷಿ ವಿಶ್ವವಿದ್ಯಾಲಯದ ಬೋರ್ಡ್ ಮೆಂಬರ್ ಆಗಿದ್ದೇನೆ. I am nominated by the Karnataka Legislative Council. ಕೃಷಿ ವಿಶ್ವವಿದ್ಯಾಲಯದಲ್ಲಿ ಏನಿದೆ ಅದನ್ನು ತೋಟಗಾರಿಕೆ ವಿಶ್ವವಿದ್ಯಾಲಯಕ್ಕೂ ತಂದಿದ್ದಾರೆ. In University of Agricultural Sciences ನ Board of Management ನಲ್ಲಿ 'one Member of Legislative Council to be nominated by the Chairman on rotation basis to each of the Universities' ಎಂದು ಇದೆ. ಅಂದರೆ ಒಬ್ಬ ಎಂ.ಎಲ್.ಸಿ., ಈಗ ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯ ಇದೆ, ಬೆಂಗಳೂರಿನಲ್ಲಿ ಕೃಷಿ ವಿಶ್ವವಿದ್ಯಾಲಯ ಇದೆ, ಧಾರವಾಡ ಕೃಷಿ ವಿಶ್ವವಿದ್ಯಾಲಯ, ಶಿವಮೊಗ್ಗ ಕೃಷಿ ವಿಶ್ವವಿದ್ಯಾಲಯ ಇದೆ. ಒಂದು ಅವಧಿಗೆ ಮೂರು ವರ್ಷವಾದ ಮೇಲೆ ಮುಂದೆ ಮೂರು ವರ್ಷ ಬೆಂಗಳೂರು, ಮುಂದೆ ಮೂರು ವರ್ಷ ರಾಯಚೂರು, ಮುಂದೆ ಮೂರು ವರ್ಷ ಶಿವಮೊಗ್ಗ ಈ ತರಹ ಇದೆ. ಐ.ಸಿ.ಎ.ಆರ್., ಮಾರ್ಗಸೂಚಿಯಲ್ಲಿ ಏನಾದರೂ ಕೊಟ್ಟಿರಬೇಕಲ್ಲವೇ, ಏನೂ ಇಲ್ಲ. ಅದು ಹಿಂದೆ ಮಾನ್ಯ ಕೃಷ್ಣಬೈರೇಗೌಡರು ಸಚಿವರಾಗಿದ್ದಾಗ ಮಾಡಿರುವಂಥದ್ದು. ಈಗ numbers restriction ಇದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಷ್ಟೆ. ಆದರೆ ಯಾರನ್ನು ತೆಗೆದುಕೊಳ್ಳಬೇಕು ಎನ್ನುವುದಕ್ಕೆ ನಿರ್ಬಂಧವಿಲ್ಲ. ಹಾಗೇನಾದರೂ ಇದ್ದರೆ G.O., place ಮಾಡಬೇಕು. ಎಲ್ಲರು ಮಾತನಾಡುವುದೇನೆಂದರೆ, basically it is in the interest of the farmer. ಮೊನ್ನೆ ಒಂದು ಬೋರ್ಡ್ ಮೀಟಿಂಗ್ ಆಯಿತು. ರಿಸರ್ಚ್‌ಗೆ ಇಷ್ಟು ಕಡಿಮೆ ಹಣವನ್ನು ಕೊಡುತ್ತಿದ್ದಾರೆ. ಐ.ಸಿ.ಎ.ಆರ್., ನವರ ಮಾತನ್ನು ನಾವು ಏತಕ್ಕಾಗಿ ಕೇಳುತ್ತಿದ್ದೇವೆಂದರೆ, ಐ.ಸಿ.ಎ.ಆರ್., ನವರಿಂದ ಹಣ ಬರುತ್ತಿರುವುದಕ್ಕೆ ವಿಶ್ವವಿದ್ಯಾಲಯಗಳು ನಡೆಯುತ್ತಿದೆ. ನಮ್ಮ ಸರ್ಕಾರ ಇದ್ದಾಗ ಹಣ ಕೊಡುತ್ತಿದ್ದರು. ಈಗ ಹಣ ಕೊಡುವುದಕ್ಕೆ ಯಾರು ಮುಂದೆ ಬರುತ್ತಿಲ್ಲ. ಈಗ ಪ್ರತಿ ದಿನ ಬೆಳಗ್ಗೆ ಆ ಹುಳ ಬಂದಿದೆ, ಈ ಹುಳ ಬಂದಿದೆ ಹೇಳುತ್ತಿರುತ್ತಾರೆ, ಇವರು ರಿಸರ್ಚ್ ಮಾಡುವುದಕ್ಕೆ ಯಾರನ್ನಾದರೂ ಹಣವನ್ನು ಕೇಳಿದ್ದಾರೆಯೇ? ಬರೀ ರಸ್ತೆ ಮಾಡುವುದಕ್ಕೆ, ಅದಕ್ಕೆ ಇದಕ್ಕೆ ಹಣವನ್ನು ಕೊಡುತ್ತಾರೆ, ಇಲ್ಲಿಗೆ ಹಣವನ್ನು ಕೊಟ್ಟರೆ ಸಾಕಷ್ಟು ಅಭಿವೃದ್ಧಿಯಾಗುತ್ತದೆ. ಅದರ ಬಗ್ಗೆ ಸರ್ಕಾರಕ್ಕೆ ಗಮನವೇ ಇಲ್ಲ. ಕೃಷಿ ವಿಶ್ವವಿದ್ಯಾಲಯದಲ್ಲಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದೆ. ಏಕೆಂದರೆ, ಅವರು ಮೂಲಭೂತವಾಗಿ ಕಷ್ಟಪಟ್ಟರೆ ಮಾತ್ರ ನಮ್ಮ ರೈತರ ಬೆಳೆ ಉಳಿಯುವುದಕ್ಕೆ ಸಾಧ್ಯವಾಗುತ್ತದೆ ಅಥವಾ ಬೆಳೆ ಹೆಚ್ಚಾಗುತ್ತದೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಇದನ್ನು ಮತ್ತೊಮ್ಮೆ ಸರ್ಕಾರ ಪರಿಶೀಲನೆ ಮಾಡಬೇಕು. ಐ.ಸಿ.ಎ.ಆರ್., ನವರು ಹಣವನ್ನು ಕೊಡುತ್ತಾರೆ. ಇದರಲ್ಲಿ ಐ.ಸಿ.ಎ.ಆರ್., ನವರು ಇರಬೇಕು. ಕೆಲವು ಮಂದಿ ಐ.ಸಿ.ಎ.ಆರ್., ನವರು ಇರಬಾರದು ಎಂದು ಹೇಳುತ್ತಾರೆ. ನನ್ನ ಮನವಿ ಏನೆಂದರೆ, ಐ.ಸಿ.ಎ.ಆರ್., ನವರ ಒಬ್ಬ ಪ್ರತಿನಿಧಿ ಇದರಲ್ಲಿ ಇರಬೇಕು. ಏಕೆಂದರೆ, ಅವರು ಹಣ ಕೊಟ್ಟಿರುವುದರಿಂದ ಯಾವ್ಯಾವ ವಿಶ್ವವಿದ್ಯಾಲಯದಲ್ಲಿ ಎಷ್ಟು scientific ಆಗಿ ಕೆಲಸ ನಡೆದಿದೆ ಎಂದು ಅವರು ಮೌಲ್ಯಮಾಪನ ಮಾಡುತ್ತಾರೆ. ಒಂದು ವೇಳೆ ಚೆನ್ನಾಗಿ ರಿಸರ್ಚ್ ನಡೆದಿದ್ದರೆ ಐ.ಸಿ.ಎ.ಆರ್., ನವರು ಮತ್ತೆ ಹೆಚ್ಚುವರಿಯಾಗಿ ಹಣ ಕೊಡುವಂತಹ ಸಂಭವ ಬಹಳ ಇರುತ್ತದೆ. ಬಹಳಷ್ಟು ವಿಶ್ವವಿದ್ಯಾಲಯದವರು ಚೆನ್ನಾಗಿ ಪ್ರಾಜೆಕ್ಟ್ ಮಾಡಿ ಹಣವನ್ನು ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಐ.ಸಿ.ಎ.ಆರ್., ನವರ ಟೀಮ್ ಬಂದು ನೇರವಾಗಿ ಪರಿಶೀಲನೆ ಮಾಡಿ ಮತ್ತೆ ಹೆಚ್ಚು ಹಣವನ್ನು ಕೊಟ್ಟು ಹೋಗುತ್ತಾರೆ. ಇನ್ನು ಜಾಸ್ತಿ ಪ್ರಾಜೆಕ್ಟ್‌ಗಳು ಬರುತ್ತವೆ. So, I.C.A.R., men should be in this Board of Management. ಇದರಲ್ಲಿ ಇರಲೇಬೇಕು. ಇದರಲ್ಲಿ ಒಬ್ಬ ಎಂ.ಎಲ್.ಎ., ಒಬ್ಬ ಎಂ.ಎಲ್.ಸಿ., ಅವರನ್ನು ಸದಸ್ಯರನ್ನಾಗಿ ಮಾಡಿದ್ದಾರೆ. ಇದರಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂ.ಎಲ್.ಎ., ಆದರೂ ತೆಗೆಯಿರಿ ಅಥವಾ ಎಂ.ಎಲ್.ಸಿ., ಯವರನ್ನಾದರೂ ತೆಗೆಯಿರಿ. ರಾಜ್ಯದಲ್ಲಿ ಸಾಕಷ್ಟು progressive farmers ಇದ್ದಾರೆ. ಅವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಬೇಕು. ತೋಟಗಾರಿಕೆ ವಿಶ್ವವಿದ್ಯಾಲಯದವರು ಮಾನ್ಯ ಬಸವರಾಜ ಹೊರಟ್ಟಿಯವರ ಫಾರ್ಮ್‌ಹೌಸ್‌ಗೆ ಹೋಗಿ ಬರುತ್ತಾರೆ. ಅಲ್ಲಿ ಹೇಗೆ ಬೆಳೆ ಬೆಳೆಯುತ್ತಾರೆ ಮತ್ತು Dairy Science ಗೆ ಸಂಬಂಧಿಸಿದಂತೆ ಹೇಗೆ ಮಾಡುತ್ತಾರೆ ಎಂಬುದು ತೋಟಗಾರಿಕೆ ವಿಶ್ವವಿದ್ಯಾಲಯದವರಿಗೆ ಗೊತ್ತಿರುವುದಿಲ್ಲ. ಅಷ್ಟು ಚೆನ್ನಾಗಿ ಫಾರ್ಮ್‌ಹೌಸ್ ಮಾಡಿದ್ದಾರೆ. ಮಾನ್ಯ ಬಸವರಾಜ ಹೊರಟ್ಟಿಯವರ ಫಾರ್ಮ್‌ಹೌಸ್ ನೋಡಿದಂಥವರು ಹೋಗಿ ನೋಡಿ ಅವರು ಎಷ್ಟು ಚೆನ್ನಾಗಿ ದ್ರಾಕ್ಷಿ, ದಾಳಿಂಬೆ ಬೆಳೆಯುತ್ತಿದ್ದಾರೆಂದು ಜನರ ಹತ್ತಿರ ಹೇಳುತ್ತಾರೆ. ಹುಬ್ಬಳ್ಳಿ-ಧಾರವಾಡಕ್ಕೆ ಯಾರ್ಯಾರೋ ಹೋಗುತ್ತಾರೆಯೋ ಅವರ ಫಾರ್ಮ್‌ಹೌಸ್ ಮೈನ್ ರೋಡ್‌ನಲ್ಲೇ ಇದೆ. ಅಲ್ಲಿಗೆ ಹೋದರೆ ಸರಿಯಾಗಿ ಕೃಷಿಯಲ್ಲಿ ಏನು ಮಾಡಬೇಕು, ಯಾವರೀತಿ manure ತೆಗೆಯಬೇಕು, ಕನ್‌ವರ್ಟ್ ಹೇಗೆ ಮಾಡಬೇಕು, ಹೂವುಗಳನ್ನು ಹೇಗೆ ಬೆಳೆಯಬೇಕು, ಮಾರ್ಕೆಟಿಂಗ್ ಹೇಗೆ ಮಾಡಬೇಕು, Dairy Science ಹೇಗೆ ನಿರ್ವಹಣೆ ಮಾಡಬೇಕು, ಇವೆಲ್ಲಾ 90 ಪರ್ಸೆಂಟ್ ಅವರ ಫಾರ್ಮ್‌ಹೌಸ್‌ನಲ್ಲಿದೆ.

**ಶ್ರೀ ಆರ್.ಶಂಕರ್(ತೋಟಗಾರಿಕೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ತೋಟಗಾರಿಕೆ ಬೆಳಗಾರರ ಬಗ್ಗೆ ನನಗೂ ಬಹಳಷ್ಟು ಕಳಕಳಿ ಇದೆ. ತೋಟಗಾರಿಕೆಯಲ್ಲಿ ರೇಷ್ಮೆ ಇರಬಹುದು, ತೆಂಗು ಇರಬಹುದು, ಎಲ್ಲಾ ಬೆಳೆಗಳ ಬಗ್ಗೆಯೂ ಪ್ರತಿ ತಿಂಗಳು ಎಲ್ಲಾ ಜಿಲ್ಲೆಗಳಲ್ಲೂ D.D., ಗಳನ್ನು ಕರೆದು ಅಧಿಕಾರಿಗಳ ಸಭೆ ಮಾಡಿ ಏನೇನು ರೈತರಿಗೆ ಅನುಕೂಲವಾಗಬೇಕೆಂದು ಈಗಾಗಲೇ ಅಧಿಕಾರಿಗಳಿಗೆ ಹೇಳಿದ್ದೇನೆ. ನಾಲ್ಕು ಗೋಡೆಗಳ ಮಧ್ಯೆ ಚರ್ಚೆಯಾಗಿ ಅನುಷ್ಠಾನಕ್ಕೆ ತರುವಂತಹ ಅವಶ್ಯಕತೆ ಇಲ್ಲ. 28 ಜಿಲ್ಲೆಗಳಲ್ಲಿ ನೇರವಾಗಿ ತಿಂಗಳಿಗೆ ಒಂದು ಜಿಲ್ಲೆಯಲ್ಲಿ ಎಲ್ಲಾ ರೈತರು ಇರಬಹುದು, ಎಲ್ಲಾ ಸದಸ್ಯರುಗಳ ಸಲಹೆಯನ್ನು ಪಡೆದು ಏನೇನು ಇದಕ್ಕೆ ಅಗತ್ಯತೆಗಳಿಗೆ ಅನುಗುಣವಾಗಿ ರಿಸರ್ಚ್ ಮಾಡುವುದಕ್ಕೆ ಹೆಚ್ಚು ಹಣವನ್ನು ಕೊಡಬೇಕೇ, ರೈತರಿಗೆ ನಾವು ಅನುಕೂಲ ಮಾಡಿಕೊಡುವುದರಲ್ಲಿ ನಾವು ಎಲ್ಲಿ ವಿಫಲರಾಗಿದ್ದೇವೆ, ಎಲ್ಲಿ ನಮ್ಮ ಅಧಿಕಾರಿಗಳು ಸ್ಪಂದನೆ ಮಾಡುತ್ತಿಲ್ಲ ಎಂಬುದರ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡುತ್ತೇವೆ. ಇವೆಲ್ಲದರ ಬಗ್ಗೆ ನಾನು ಮೊನ್ನೆ ಹೇಳಿದ್ದೇನೆ. ನಾಳೆಯೇ ನಾನು ಸಭೆಯನ್ನು ಕರೆದಿದ್ದೇನೆ. ಆ ಸಭೆಗೆ ಮಾನ್ಯ ಸದಸ್ಯರು ಬಂದು ಸಲಹೆ ಸೂಚನೆಗಳನ್ನು ಕೊಡಬಹುದು. ಎಲ್ಲಾ ರೈತರ, ಅಧಿಕಾರಿಗಳ ಜೊತೆ ಸಭೆ ಮಾಡಿ ರೈತರಿಗೆ ಏನೇನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಕೂಲತೆ ಮಾಡುವುದಕ್ಕೆ ಸಾಧ್ಯವಿದೆಯೋ ಅಷ್ಟು ಮಾಡುವುದಕ್ಕೆ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಸಚಿವರೇ, ಈಗೇನು ಮಾನ್ಯ ಸದಸ್ಯರುಗಳು ಸಲಹೆ ಕೊಟ್ಟಿದ್ದಾರೆ ಅದನ್ನು ಮಾಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರ ಇಲಾಖಾಧಿಕಾರಿಗಳು ಯಾವ ಫಾರ್ಮ್‌ಹೌಸ್‌ಗೂ ಬರುವುದಿಲ್ಲ. ಬೂದಿ ರೋಗ ಬಂದಿದೆ ಎಂದು ಹೇಳಿದರೆ ಯಾವಾಗಲೋ ಬಂದು ಹೋಗಿಬಿಡುತ್ತಾರೆ. ಏನು ಸಿಂಪಡಣೆ ಮಾಡಬೇಕೆಂದು ಸಹ ಹೇಳುವುದಿಲ್ಲ. ನಾನು ಸಾಕಷ್ಟು ಬಾರಿ ದೂರವಾಣಿ ಕರೆ ಮಾಡಿದರೂ ಅವರು ಬರುವುದಿಲ್ಲ. ಕೊನೆಗೆ ನಾನು ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಕರೆಯಿಸಿ ಮಾಡಿಸಿದ್ದೇನೆ. ಎಷ್ಟು ಸಲ ಗಿಡಗಳು ಯಾವ ರೀತಿ ಹಾಳಾಗುತ್ತದೆ ಎಂಬುದು ದೇವರಿಗೆ ಗೊತ್ತು. ಅವರ ಅಧಿಕಾರಿಗಳು ಯಾರು ತೋಟಕ್ಕೆ ಭೇಟಿ ಕೊಡುವುದಿಲ್ಲ. ಯಾವಾಗಲಾದರೂ ಒಂದು ಸಲ ಬಂದು ಹೋಗಿಬಿಟ್ಟರೆ ಮುಗಿದು ಹೋಯಿತು. ನಾನು ಎಷ್ಟು ಬಾರಿ ದೂರವಾಣಿ ಕರೆ ಮಾಡಿದ್ದೇನೆಂದು ಅವರ ಅಧಿಕಾರಿಗಳನ್ನು ಕೇಳಲಿ. ನಮ್ಮಂಥವರನ್ನು ಬಿಡಿ, ಕಡೆ ಪಕ್ಷ ಬಡ ರೈತರ ಜಮೀನಿಗೆ ಹೋಗಿ ಬನ್ನಿ ಎಂದು ತಿಳಿಸಿ. ಈಗ ಸೀತಾಫಲದ ಹಣ್ಣು ಬೆಳೆಯುತ್ತಾರೆ, ಹಣ್ಣು ಎಲ್ಲಾ ಕಪ್ಪಾಗಿ ಬಿಡುತ್ತದೆ, ಏನು ಮಾಡಬೇಕೆಂದು ತಿಳಿಯುವುದಿಲ್ಲ. ಅವರು ಏನು ಹೇಳುವುದಿಲ್ಲ, ಕಡೆಗೆ ಬರೆದು ಕೊಡುತ್ತಾರೆ, ಆದರೆ ಅದು ಆಗುವುದಿಲ್ಲ. ಇಂತಹ ಸಮಸ್ಯೆಗಳಿಗೆ ನಾವು ವಿಶ್ವವಿದ್ಯಾಲಯದವರನ್ನು ಕೇಳಿ ತಿಳಿದುಕೊಳ್ಳಬೇಕಾಗುತ್ತದೆ. ಅವರ ಇಲಾಖೆ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಸುಧಾರಣೆಯಾಗಬೇಕಾದರೆ ಮೊದಲು ಅವರ ಅಧಿಕಾರಿಗಳಿಗೆ ತರಬೇತಿ ಕೊಟ್ಟು ರೈತರ ಜಮೀನಿಗೆ ಹೋಗಿ ಬರಲು ತಿಳಿಸಬೇಕು. ಅಧಿಕಾರಿಗಳು ಎಲ್ಲಿ ಭೇಟಿ ನೀಡುತ್ತಾರೆಂದು ಕೇಳಿ ತಿಳಿಸಿ. ಆಗ ಮಾತ್ರ ಇದು ಸುಧಾರಣೆಯಾಗುತ್ತದೆ.

**ಹಂಗಾಮಿ ಸಭಾಪತಿಯವರು:–** ಈಗ ಪ್ರಶ್ನೆ ಏನೆಂದರೆ,...

**(ಗೊಂದಲ)**

**ಹಂಗಾಮಿ ಸಭಾಪತಿಯವರು:–** ಈಗ ಮಾನ್ಯ ಸಚಿವರು ಮಾನ್ಯ ಸದಸ್ಯರುಗಳು ಕೊಟ್ಟಿರುವ ಎಲ್ಲಾ ಸಲಹೆಗಳನ್ನು ತೆಗೆದುಕೊಂಡು ನಾನು ರಚನೆ ಮಾಡುತ್ತೇನೆಂದು ಹೇಳಿದ್ದಾರೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಕೇಂದ್ರ ವಿಶ್ವವಿದ್ಯಾಲಯದಲ್ಲಿ ಇದೇ ರೀತಿಯ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಇದು ಕೇಂದ್ರ ಸರ್ಕಾರದಿಂದ ಬಂದಿರುವಂತಹ ಮಾರ್ಗಸೂಚಿ. ಈ ಮಾರ್ಗಸೂಚಿಯನ್ನು ನಾವು ಅಳವಡಿಸಿಕೊಳ್ಳಬೇಕಾಗಿದೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಸುತಾರಾಮ್ ಆಗಿ ಇದನ್ನು ಒಪ್ಪುವುದಿಲ್ಲ. ಇದರಲ್ಲಿ ರೈತರು ಇರಲೇಬೇಕು. ಬೇರೆ ಯಾರನ್ನಾದರೂ ಕಡಿಮೆ ಮಾಡಿ ನಮ್ಮದೇನೂ ಅಭ್ಯಂತರವಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾವು ಈ ವಿಧೇಯಕವನ್ನು ಪಾಸ್ ಮಾಡದಿದ್ದರೆ ಕೇಂದ್ರ ಸರ್ಕಾರದಿಂದ ಬರುವ ಸವಲತ್ತುಗಳು, ಮತ್ತೊಂದು ಬರುವುದಕ್ಕೆ ಸಮಸ್ಯೆಯಾಗುತ್ತದೆ.

**(ಮುಂದು)**

**(199)5–2–2021/2–00/ಬಿಕೆಪಿ–ಎಂಡಿ**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಬರುವ ಸೌಲಭ್ಯಗಳಿಗೆ ನಿರಾಕರಣೆ ಮಾಡುವುದಿಲ್ಲ. ರಾಜ್ಯಕ್ಕೆ ಸೌಲಭ್ಯ ಬರಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಇಡೀ ದೇಶಕ್ಕೆ ಒಂದೇ ಮಾದರಿಯ ನಿಯಮಗಳನ್ನು ಮಾಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ಹೇಳುವುದು ಇಷ್ಟೇ. ಇಲ್ಲಿ ಸೌಲಭ್ಯಗಳ ಪ್ರಶ್ನೆ ಇಲ್ಲ. ನೀವು ಸೌಲಭ್ಯಗಳನ್ನು ತೆಗೆದುಕೊಳ್ಳಬೇಕು ಮತ್ತು ಅವರ ಮಾರ್ಗಸೂಚಿಗಳನ್ನು ಪಾಲಿಸಬೇಕು. ಆದರೆ Board of Regents ಇಂದ ರೈತರ ಸಂಖ್ಯೆ ಕಡಿಮೆ ಮಾಡಬೇಡಿ. ನಮ್ಮ ಗ್ರಾಮೀಣ ಭಾಗದಲ್ಲಿನ ರೈತರು ಮಾರುತೇಶ್ವರ, ಬಸವನದೇವರು ಇತ್ಯಾದಿ ದೇವರುಗಳಿಗೆ ಹೋಗುತ್ತಾರೆ. ನನ್ನ ದೃಷ್ಟಿಯಲ್ಲಿ ವಿಶ್ವವಿದ್ಯಾಲಯಗಳೇ ರೈತರ ನಿಜವಾದ ದೇವಾಲಯಗಳಾಗಿವೆ. ಕೃಷಿ ಅಥವಾ ತೋಟಗಾರಿಕೆ ಯಾವುದೇ ವಿಶ್ವವಿದ್ಯಾಲಯವಿರಬಹುದು, ಅಲ್ಲಿನ ವಿಜ್ಞಾನಿಗಳೇ ಅವರ ದೇವರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತರ ಮತ್ತು ವಿಶ್ವವಿದ್ಯಾಲಯಗಳ ಕೊಂಡಿಯನ್ನು ಕಳಚುತ್ತೇವೆ; ರೈತರ ಸಂಖ್ಯೆಯನ್ನು ಕಡಿಮೆ ಮಾಡುತ್ತೇವೆ ; ರೈತರ ಭಾಗವಹಿಸುವಿಕೆಯು ಬೇಡ ಎಂದು ಹೇಳುವುದಾರೆ, ಇದು ರೈತರ ವಿರೋಧಿಯಾದ ತಿದ್ದುಪಡಿ ಎಂದು ಹೇಳುತ್ತಾ, ನಾವು ಸಭಾತ್ಯಾಗ ಮಾಡುತ್ತೇವೆ.

**(ಗೊಂದಲ)**

**ಶ್ರೀ ಆರ್. ಶಂಕರ್ (ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ತಿದ್ದುಪಡಿ ಅಧಿನಿಯಮಕ್ಕೆ ಇವರು ವಿರೋಧ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ರೈತರ ವಿರೋಧಿಗಳಾಗಿದ್ದಾರೆ ಹೊರತು ನಾವಲ್ಲ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾವು ರೈತರ ಪರವಾಗಿದ್ದೇವೆ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

**(ಗೊಂದಲ)**

**(ಈ ಹಂತದಲ್ಲಿ ಕಾಂಗ್ರೆಸ್‌ನ ಸದಸ್ಯರು ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ ಧಿಕ್ಕಾರ ಎಂದು ಘೋಷಣೆ ಕೂಗುತ್ತಾ ಸಭಾತ್ಯಾಗ ಮಾಡಿದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ವಿಧೇಯಕಗಳನ್ನು ತರುತ್ತಿರುವಾಗ, ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲದೆ ಅಡ್ಡಿಪಡಿಸುತ್ತಿರುವವರು ನೀವು.

**(ಗೊಂದಲ)**

ಚರ್ಚೆ ಮಾಡುವುದನ್ನು ಬಿಟ್ಟು, ಪಲಾಯನ ಸೂತ್ರ ಅನುಸರಿಸುತ್ತಿದ್ದೀರಿ. ಮಾನ್ಯ ಸಭಾಪತಿಯವರೇ, ಇವರಿಗೆ ಏನಾದರೂ ಹೇಳುವುದು ಮತ್ತು ಕೇಳುವುದು ಇದ್ದರೆ, ಇದನ್ನು ದಯಮಾಡಿ ಚರ್ಚೆ ಕೈಗೆತ್ತಿಕೊಳ್ಳಬೇಕೆಂದು ವಿನಂತಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಸ್ಪಷ್ಟೀಕರಣವೊಂದನ್ನು ನೀಡಲು ಇಷ್ಟಪಡುತ್ತೇನೆ. ನಾನು ಇದರ ಪರವಾಗಿಯೇ ಮಾತನಾಡುತ್ತೇನೆ. ಇದರ ಬಗ್ಗೆ ಏನು ಮಾತನಾಡಬೇಕೆಂದು ಗೊತ್ತಿಲ್ಲದೇ ನೀವುಗಳು ಮಾತನಾಡುತ್ತಿದ್ದೀರಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ಅದೇ ಜಿಲ್ಲೆಯಲ್ಲಿರುವವರು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ICAR (Indian Council of Agricultural Research) ನ್ನು defend ಮಾಡುವುದಕ್ಕೆ ನಿಮಗೆ ಬರಲಿಲ್ಲ. ನಮ್ಮಲ್ಲಿ UGC (University Grant Commission) ಇದೆ ಹಾಗೂ ಇದು ಸ್ವಾಯತ್ತ ಸಂಸ್ಥೆಯಾಗಿದೆ. ಅದೇ ರೀತಿಯಾಗಿ ICAR ಸಹ ಸ್ವಾಯತ್ತ ಸಂಸ್ಥೆಯಾಗಿದೆ. ಅದು ಇಡೀ ದೇಶಕ್ಕೆ direction ಕೊಟ್ಟಿದೆ. ಇದನ್ನು ಎಲ್ಲರೂ ಒಪ್ಪಬೇಕು. ಮಾನ್ಯ ಸದಸ್ಯರು ಸ್ವಲ್ಪ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು. ICAR is an Autonomous Body. ನಾನು ಬಿಲ್ ಪಾಸ್ ಮಾಡುವ ಸಲುವಾಗಿಯೇ ಕೆಲವು ಮಾಹಿತಿಗಳನ್ನು ಕೊಡುತ್ತೇನೆ. ನಮ್ಮಲ್ಲಿ UGC ಇದೆ. ಇಡೀ ದೇಶದ ವಿಶ್ವವಿದ್ಯಾನಿಲಯಗಳಿಗೆ guidelines ಕೊಡುವುದಾಗಿದೆ. ICAR grant ಕೊಡುತ್ತದೆ. ಅದು guidelines ಅನ್ನು ನಮ್ಮ ರಾಜ್ಯಕ್ಕೆ ಮಾತ್ರವಲ್ಲದೆ, ಇಡೀ ದೇಶಕ್ಕೆ ಕೊಡುವುದರಿಂದ ತಾವು ಒಪ್ಪಲೇಬೇಕಾಗುತ್ತದೆ. ನನ್ನ ಪ್ರಶ್ನೆ ಏನೆಂದರೆ, 14 ಇದ್ದುದನ್ನು 13ಕ್ಕೆ ಇಳಿಸಿದೆ. 14 ಇದ್ದರೆ ಸರಿ ಇದೆ. ಇದು ಅನಿವಾರ್ಯ. ಇದನ್ನು ಇಡೀ ದೇಶ ಒಪ್ಪಬೇಕಾಗುತ್ತದೆ. ಇದನ್ನು ನಾವು ಮಾಡೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಇದರಲ್ಲಿ ಪ್ರಗತಿಪರ ರೈತರೊಬ್ಬರನ್ನು ಹಾಕಿ. ನಿಮ್ಮ ಕಡೆ ಆ ಅಧಿಕಾರ ಇರುತ್ತದೆ. Guidelines ಪ್ರಕಾರ ಯಾರು ನೈಜ ರೈತರು ಇರುತ್ತಾರೆ, ಯಾರು ತೋಟಗಾರಿಕೆ ಮಾಡುತ್ತಾರೆ, ಅವರನ್ನು ಇದರಲ್ಲಿ ಹಾಕಿ. ಶಿಫಾರಸ್ಸಿನ ಮೇರೆಗೆ ಯಾರನ್ನೋ ಹಾಕುವುದು ಬೇಡ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ತೋಟಗಾರಿಕೆ ವಿಜ್ಞಾನಗಳ ವಿಶ್ವದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಹಂಗಾಮಿ ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಯನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಆರ್.ಶಂಕರ್ (ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಅರಬೈಲ್ ಹೆಬ್ಬಾರ್ ಶಿವರಾಂ (ಕಾರ್ಮಿಕ ಸಚಿವರು):–** ಮಾನ್ಯ ಸಭಾಪತಿಯವರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ "ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ಎರಡನೇ ತಿದ್ದುಪಡಿ) ವಿಧೇಯಕ" ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

<u>ಪ್ರಸ್ತಾವವನ್ನು ಮಂಡಿಸಲಾಯಿತು</u>

**ಶ್ರೀ ಅರಬೈಲ್ ಹೆಬ್ಬಾರ್ ಶಿವರಾಂ (ಕಾರ್ಮಿಕ ಸಚಿವರು):–** ಮಾನ್ಯ ಸಭಾಪತಿಯವರೆ, ಇಷ್ಟು ವರ್ಷ ನಾವು ಕಾರ್ಮಿಕರಿಗೆ ಪಗಾರ ಸಹಿತ 30 ದಿವಸಗಳ ರಜೆಯನ್ನು ಕೊಡುತ್ತಿದ್ದೆವು. ಈ ತಿದ್ದುಪಡಿಯಲ್ಲಿ ನಾವು 15 ದಿವಸಗಳನ್ನು ಹೆಚ್ಚು ಮಾಡಿ 30 ದಿವಸಗಳ ಬದಲಾಗಿ 45 ದಿವಸಗಳ ರಜೆಯನ್ನು ಮಾಡಿದ್ದೇವೆ. ಎರಡನೆಯದಾಗಿ ಇಷ್ಟು ವರ್ಷ 30 ದಿವಸಗಳ ರಜೆ ಮುಂದಿನ ವರ್ಷಕ್ಕೆ carry forward ಆಗುತ್ತಿರಲಿಲ್ಲ. ಈ ವಿಧೇಯಕದಲ್ಲಿ ನಾವು 45 ದಿವಸಗಳ ರಜೆಯನ್ನು ಮುಂದಿನ ವರ್ಷಕ್ಕೂ ಸಹ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಆದರೆ ರಜೆಯನ್ನು ಉಪಯೋಗಿಸಿಕೊಳ್ಳುವ ಒಟ್ಟು ಸಂಖ್ಯೆ 45 ಕ್ಕಿಂತ ಹೆಚ್ಚು ಮೀರಬಾರದು. ಈ ವರ್ಷದ್ದು 45 ದಿನಗಳ ರಜೆ, ಮುಂದಿನ ವರ್ಷ 45 ದಿನಗಳ ರಜೆ ಹೀಗೆ ಒಟ್ಟು 90 ರಜೆಗಳು ಆಗುವ ಹಾಗಿಲ್ಲ. ಕೇವಲ 45 ದಿವಸಗಳ ತನಕ ಮಾತ್ರ ಉಪಯೋಗಿಸಿಕೊಳ್ಳಬಹುದು ಹಾಗೂ ಅದನ್ನು ಮುಂದಿನ ವರ್ಷಕ್ಕೆ carry forward ಮಾಡಿಕೊಳ್ಳಬಹುದು. ಆ ರೀತಿಯ ಒಂದು ವಿಧೇಯಕವನ್ನು ನಾವು ತಂದಿದ್ದೇವೆ. ಇದರಿಂದ ನಿವೃತ್ತಿಯನ್ನು ಹೊಂದುವವರಿಗೆ, ರಜೆ ಗಳಿಕೆ ಪಗಾರವನ್ನು ತೆಗೆದುಕೊಳ್ಳತಕ್ಕಂಥವರಿಗೆ, ಆಕಸ್ಮಿಕವಾಗಿ ನಿಧನರಾದ ಕುಟುಂಬದವರಿಗೆ ಉಪಯೋಗವಾಗಬೇಕೆಂದು ನಾವು ಈ ವಿಧೇಯಕವನ್ನು ತಂದಿದ್ದೇವೆ. ಇದು ಕೇವಲ ನಮ್ಮ ರಾಜ್ಯದಲ್ಲಿ ಮಾತ್ರ ಅಲ್ಲ, ಈಗಾಗಲೇ ಮಹಾರಾಷ್ಟ್ರ ರಾಜ್ಯದಲ್ಲಿ 45 ದಿವಸಗಳ ರಜೆಯ ಅವಕಾಶವಿದೆ, ಆಂಧ್ರಪ್ರದೇಶದಲ್ಲಿ 65 ದಿನಗಳ ರಜೆ, ತಮಿಳುನಾಡಿನಲ್ಲಿ 45 ದಿನಗಳ ರಜೆ, ಗುಜರಾತ್‌ನಲ್ಲಿ 63ದಿನಗಳ ರಜೆ ಮತ್ತು ಮಧ್ಯಪ್ರದೇಶದಲ್ಲಿ 3 ತಿಂಗಳ ರಜೆಯ ಸೌಲಭ್ಯವಿದೆ. ಹಾಗಾಗಿ ನಮ್ಮ ರಾಜ್ಯದಲ್ಲಿಯೂ ಕಾರ್ಮಿಕರ ಹಿತಾಸಕ್ತಿಯ ಉದ್ದೇಶಕ್ಕಾಗಿ ಅಕ್ಕಪಕ್ಕದ ರಾಜ್ಯಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಮನದಲ್ಲಿಟ್ಟುಕೊಂಡು ಈ ವಿಧೇಯಕವನ್ನು ತಂದಿದ್ದೇವೆ. ಇದನ್ನು ಅನುಮೋದನೆ ಮಾಡಿಕೊಡಬೇಕೆಂದು ಕೋರುತ್ತೇನೆ.

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಹಂಗಾಮಿ ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಅರಬೈಲ್ ಹೆಬ್ಬಾರ್ ಶಿವರಾಂ (ಕಾರ್ಮಿಕ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಹಂಗಾಮಿ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"**ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು**"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(200) 05.02.2021 02.10 ಎಸ್‌ವಿ–ಎಂಡಿ**

**ಹಂಗಾಮಿ ಸಭಾಪತಿಯವರು:–** ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಬಗ್ಗೆ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ. ಶ್ರೀ ಆಯನೂರು ಮಂಜುನಾಥ್ ಅವರು ಪ್ರಾರಂಭಿಸಬೇಕು.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನನಗೆ ಎರಡು ಗಂಟೆಗಳ ಕಾಲಾವಕಾಶ ಸಾಕು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಎರಡು ಗಂಟೆಗಳು ಬೇಕು ಎಂದರೆ ಸೋಮವಾರ ತೆಗೆದುಕೊಳ್ಳಿ.

**ಹಂಗಾಮಿ ಸಭಾಪತಿಯವರು:–** ಈಗ ಪ್ರಾರಂಭ ಮಾಡೋಣ. ಎಲ್ಲರೂ ಒಪ್ಪಿಗೆಯನ್ನು ನೀಡಿದರೆ ಸಂಜೆಯವರೆವಿಗೂ ಸದನವನ್ನು ನಡೆಸೋಣ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್ ಅವರು ಕಡಿಮೆಯೆಂದರೆ ಒಂದು ಗಂಟೆ ಮಾತನಾಡುತ್ತಾರೆ. ಆದ್ದರಿಂದ ಸೋಮವಾರ ತೆಗೆದುಕೊಳ್ಳಿ. ಪ್ರಾರಂಭಿಸಿದ ಮೇಲೆ 10 ನಿಮಿಷಗಳಿಗೆ ನಿಲ್ಲಿಸುವುದಕ್ಕಾಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್ ಅವರು ಬಹಳ ಚೆನ್ನಾಗಿ ಮಾತನಾಡುತ್ತಾರೆ. ಅವರ flow cut ಆಗಬಾರದು.

**ಹಂಗಾಮಿ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಕಲಾಪ ಸಲಹಾ ಸಮಿತಿಯ ಸಭೆಯಲ್ಲಿ ಈ ವಿಷಯವನ್ನು ಇಂದು ತೆಗೆದುಕೊಳ್ಳಲು ನಿರ್ಧಾರವಾಗಿತ್ತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್ ಅವರು ಮಾತನಾಡಲು ಎದ್ದು ನಿಂತಿದ್ದಾರೆ. 10-15 ನಿಮಿಷಗಳ ಕಾಲ ಪ್ರಸ್ತಾಪ ಮಾಡಲಿ.

## 13. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಂಸದೀಯ ಸಂಪ್ರದಾಯದಂತೆ ಸಂಸತ್ತಿನಲ್ಲಾಗಲೀ ಅಥವಾ ವಿಧಾನ ಮಂಡಲಗಳಲ್ಲಾಗಲೀ ರಾಷ್ಟ್ರಪತಿಗಳು ಅಥವಾ ರಾಜ್ಯಪಾಲರು ಎರಡೂ ಸದನಗಳನ್ನು ಉದ್ದೇಶಿಸಿ ಮಾತನಾಡುವುದು ಪ್ರಜಾತಂತ್ರದ ಸಂಪ್ರದಾಯವಾಗಿ ಬೆಳೆದುಕೊಂಡು ಬಂದಿದೆ. ಅದೇ ರೀತಿ ಇದೇ ಜನವರಿ 28ರಂದು ನಮ್ಮ ವಿಧಾನಮಂಡಲದ ಉಭಯ ಸದನಗಳನ್ನು ಉದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರು ಭಾಷಣವನ್ನು ಮಾಡಿದ್ದಾರೆ. ಸರ್ಕಾರ ನಡೆದು ಬಂದಿರುವ ದಾರಿಯನ್ನು, ಅದರ ಮುಂದಿನ ಆಶೋತ್ತರಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಈ ಸಂದರ್ಭದಲ್ಲಿ ಇಂದಿನ ಪ್ರಸ್ತಾವ ನಮ್ಮ ಕಾರ್ಯಕಲಾಪ ಪಟ್ಟಿಯಲ್ಲಿರುವ ಒಂದು ಪದ ನನಗೆ ಇಷ್ಟವಾಗಲಿಲ್ಲ. ಈ ವ್ಯವಸ್ಥೆಯಲ್ಲಿ ನಮ್ಮ ಸಂವಿಧಾನದ custodian ಆಗಿ ಅಥವಾ ರಾಷ್ಟ್ರಪತಿಯವರ ಪ್ರತಿನಿಧಿಯಾಗಿ ರಾಜ್ಯಪಾಲರು ಇಲ್ಲಿರುತ್ತಾರೆ ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆದರೆ ಸದನದಲ್ಲಿ ಮಾಡಿದ ಭಾಷಣವನ್ನು "ಅವರು ದಯಪಾಲಿಸಿದ ಭಾಷಣ" ಎಂದು ಹೇಳಿರುವುದು ಪ್ರಜಾಪ್ರಭುತ್ವದಲ್ಲಿ ನನಗೆ ಒಪ್ಪಿಗೆಯಾಗುತ್ತಿಲ್ಲ. ಉನ್ನತ ಸ್ಥಾನ ಹೌದು. ಅವರು ಮಾಡಿದ ಭಾಷಣ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ, ಗೌರವಿಸುತ್ತೇನೆ. ಆದರೆ 'ದಯಪಾಲಿಸಿದ' ಎನ್ನುವುದು ಎಲ್ಲಿಯೋ ಒಂದು ಕಡೆ ಬ್ರಿಟಿಷ್ ಭಾಷೆ ಎನ್ನಿಸುತ್ತದೆ. ಅದು ಒಂದು ತರಹ ಗುಲಾಮಿ ಭಾಷೆಯೇನೋ ಎಂದು ನನಗೆ ವ್ಯಕ್ತಿಗತವಾಗಿ ಎನ್ನಿಸುತ್ತದೆ. ಬಹಳ ಜನ ಹಿರಿಯ ಸದಸ್ಯರಿದ್ದಾರೆ. ಅವರವರ ಮಾತಿನ ಸಂದರ್ಭದಲ್ಲಿ ಇದು ಜಿಜ್ಞಾಸೆಗೆ ಒಳಪಡಬಹುದು ಎಂದು ಭಾವಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಆಯನೂರು ಮಂಜುನಾಥ್ ಅವರೇ, ನೀವೇ ಬರೆದುಕೊಟ್ಟಿರುವುದನ್ನು ಅವರು ಓದಿದ್ದಾರೆ.

**ಶ್ರೀ ಆಯನೂರು ಮಂಜುನಾಥ್:-** ಹೌದು, ನಾನೇ ಬರೆದು ಕೊಟ್ಟಿದ್ದೇನೆ. ಆದರೆ ಅದಕ್ಕಿಂತ ಮುಂಚೆ ಸುಮಾರು 20 ವರ್ಷಗಳಿಂದ ಇಲ್ಲಿಯೇ ಇರುವ ಮಾನ್ಯ ಮರಿತಿಬ್ಬೇಗೌಡರು ಅದನ್ನು ಮಾಡಿ ಆ ಪ್ರತಿಯನ್ನು ನನ್ನ ಕೈಯಲ್ಲಿಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸದನದಲ್ಲಿ ನಗೆಯ ಅಲೆ ಎದ್ದಿತು.)**

ನಮ್ಮ ರಾಜ್ಯಪಾಲರ ಭಾಷಣದಲ್ಲಿ ಮಾನ್ಯ ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರ ಏನೇನು ಕೆಲಸಗಳನ್ನು ಮಾಡಿದೆ. ಅದರ ಆಶೋತ್ತರಗಳೇನು, ಭಾವನೆಗಳೇನು ಎಂಬುದನ್ನು ಸೂಚ್ಯವಾಗಿ ಪ್ರಕಟಿಸಿದ್ದಾರೆ. ಎಲ್ಲವನ್ನೂ ವಿವರವಾಗಿ ಹೇಳಲಿಕ್ಕೆ ಸಾಧ್ಯವಾಗಿಲ್ಲ. ದಿನಾಂಕ 26.07.2019 ರಂದು ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಪ್ರಮಾಣವಚನವನ್ನು ಸ್ವೀಕಾರ ಮಾಡಿದರು. ಅವರು ಪ್ರಮಾಣವಚನವನ್ನು ಸ್ವೀಕಾರ ಮಾಡಿದಾಗ ರಾಜ್ಯದಲ್ಲಿ ನಾಲ್ಕನೆಯ ಬಾರಿ ಮುಖ್ಯಮಂತ್ರಿಯಾದವರು ಎಂದು ದಾಖಲೆಯಾಯಿತು. ಆದರೆ ಪರಿಸ್ಥಿತಿ ಬಹಳ ವಿಕಟವಾಗಿತ್ತು. ರಾಜ್ಯದ ಅರ್ಧ ಭಾಗ ಪ್ರವಾಹ, ಅರ್ಧ ಭಾಗ ಬರಗಾಲ ಇತ್ತು. ಆಗಸ್ಟ್, ಸೆಪ್ಟೆಂಬರ್ ಮೂರು ತಿಂಗಳಂತೂ ಅತಿದೊಡ್ಡ ಪ್ರವಾಹ ಇಡೀ ರಾಜ್ಯವನ್ನೇ ಕಾಡಿತು. ಜನ ಜೀವನ ಕೊಚ್ಚಿಹೋಯಿತು. ಅದನ್ನು ಮುಗಿಸಿಕೊಂಡು ಸೆಪ್ಟೆಂಬರ್ ನಂತರ ಹೊರಬಂದರೆ ಫೆಬ್ರವರಿಯಲ್ಲಿ ಕರೋನಾ ಶುರುವಾಯಿತು. ಕರೋನಾ ಇನ್ನೂ ನಮ್ಮನ್ನು ಕಾಡುತ್ತಿದೆ.

ಎರಡು ಭಯಾನಕವಾದಂತಹ ವಿಪತ್ತುಗಳು, ಯಾರೂ ನಿರೀಕ್ಷೆ ಮಾಡದಂತಹ ವಿಪತ್ತುಗಳ ಮಧ್ಯೆ ಸರ್ಕಾರ ತನ್ನ ಸಾಧನೆಯ ಹೆಜ್ಜೆಗಳನ್ನಿಡುವಂತಹ ಪ್ರಯತ್ನವನ್ನು ಮಾಡಿದೆ. ಅಂತಹ ಸಮಯದಲ್ಲಿ ಸಂಕಷ್ಟಕ್ಕೆ ಸಿಲುಕಿದಂತಹ ರೈತರನ್ನು, ಜನ-ಜಾನುವಾರುಗಳನ್ನು ರಕ್ಷಣೆ ಮಾಡುವ ಕೆಲಸವಾಗಿದೆ. ಪ್ರವಾಹ ಮತ್ತು ಕರೋನಾದ ಈ ಅವಧಿಯಲ್ಲಿ ಜನಜೀವನವೇ ಅಸ್ತವ್ಯಸ್ತವಾಯಿತು. ಎಲ್ಲರ ಬದುಕಿನಲ್ಲಿ ಅವರ ದುಡಿಮೆಗಳ ನಷ್ಟವಾಯಿತು. ಯಾವುದೇ ಹಣಕಾಸಿನ ವಹಿವಾಟು ನಡೆಯಲೇ ಇಲ್ಲ. ಜನ ಬೀದಿಗೆ ಬರುವಂತಹ ಪ್ರಕರಣಗಳು ಪ್ರಾರಂಭವಾಯಿತು. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರಕ್ಕೆ ಬರಬೇಕಾದಂತಹ ಆದಾಯ ಕಳೆದ ಮಾರ್ಚ್‌ನಿಂದ ಸೆಪ್ಟೆಂಬರ್‌ವರೆಗೆ ನನಗೆ ಇರುವ ಮಾಹಿತಿಯ ಪ್ರಕಾರ ರೂ.64,000 ಕೋಟಿಗಳ ಕೊರತೆಯಿದೆ. ಅದರ ಪರಿಣಾಮವಾಗಿ ಹಿಂದಿನ ಅಧಿವೇಶನದಲ್ಲಿ ಸರ್ಕಾರ ತನ್ನ ನಿತ್ಯದ ಸಂಬಳ-ಸಾರಿಗೆಗಳಿಗಾಗಿ ರೂ.33,000 ಕೋಟಿಗಳ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಅನುಮತಿಯನ್ನು ನಾವೇ ಕೊಟ್ಟಿದ್ದೇವೆ. ಒಂದು ಕಡೆ ಆದಾಯ ಕುಂಠಿತವಾಯಿತು. ಉಳಿದವುಗಳ ನಿರ್ವಹಣೆ ಮಾಡುವುದಕ್ಕಾಗಿ ಸಾಲವನ್ನು ತೆಗೆದುಕೊಂಡ ಸಂದರ್ಭದಲ್ಲಿ ನಾವೇನು ಮಾಡಿದ್ದೇವೆ ಎನ್ನುವ ಈ ಚೌಕಟ್ಟಿನೊಳಗೆ ಕರೋನಾ ಮತ್ತು ಪ್ರವಾಹದಿಂದಾಗಿ ಆದಾಯ ಕುಂಠಿತಗೊಂಡಿದ್ದರೂ, ಜನಪರ ಕೆಲಸಗಳನ್ನು ನಾವು ಹೇಗೆ ಮಾಡಿದ್ದೇವೆ, ಹೇಗೆ ಕರ್ನಾಟಕದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನಾಗರಿಕರ ರಕ್ಷಣೆಯನ್ನು ಸರ್ಕಾರ ಮಾಡಿತು ಎಂಬುದನ್ನು ಬಹಳ ಸವಿಸ್ತಾರವಾಗಿ ನಾವು ಚರ್ಚೆ ಮಾಡಬೇಕಿದೆ.

ಮಾನ್ಯ ಕಾರ್ಮಿಕ ಸಚಿವರು ಈಗ ಸದನದಿಂದ ಹೊರಗೆ ಹೋದರು. ಕೋವಿಡ್ ಅವಧಿಯಲ್ಲಂತೂ ಯಾರು ನಿತ್ಯ ಬದುಕಿಗಾಗಿ ದುಡಿದು ತಮ್ಮ ರಕ್ತವನ್ನು ಬೆವರು ಮಾಡಿ ಬಸಿದೇ ಬದುಕಬೇಕಾಗಿತ್ತೋ ಅಂತಹ ಕೂಲಿಕಾರರ ಬದುಕು ನರಕವಾಗಿಬಿಟ್ಟಿತು. ಮನೆಗೆಲಸದ ಕಾರ್ಮಿಕರನ್ನು ಯಾರ ಮನೆಯಲ್ಲಿಯೂ ಸೇರಿಸುತ್ತಿರಲಿಲ್ಲ. ಹೊರಗಡೆ ಕೆಲಸವಿಲ್ಲ. ಉಪವಾಸ ನರಳುವಂತಹ ಸ್ಥಿತಿ ಎದುರಾಯಿತು. ರಸ್ತೆಯಲ್ಲಿದ್ದಂತಹ ಕಾರ್ಮಿಕರಿಗೆ ಕೆಲಸವಿಲ್ಲ. ಅಂಗಡಿ ಮುಗ್ಗಟ್ಟುಗಳು ಮುಚ್ಚಿ ಹೋಗಿವೆ, ಕೆಲಸವಿಲ್ಲ. ಸಣ್ಣ ಸಣ್ಣ ಕೆಲಸ ಮಾಡುತ್ತಿದ್ದ ಅಸಂಘಟಿತ ಬಡ ಕಾರ್ಮಿಕರ ಪರಿಸ್ಥಿತಿ ಬಹಳ ಭೀಕರವಾಗಿತ್ತು. ಹೊರಗಡೆಯಿಂದ ಬಂದಿದ್ದಂತಹ ವಲಸೆ ಕಾರ್ಮಿಕರ ರಕ್ಷಣೆಯು ಬಹು ದೊಡ್ಡ ಪ್ರಶ್ನೆ ಸರ್ಕಾರದ ಮುಂದಿತ್ತು. ಆ ಕಾಲಘಟ್ಟದಲ್ಲಿ ಈ ಸರ್ಕಾರದ ಸಕ್ಷಮತೆ ಇದರ efficiency ಬಹಳ ಪರಿಣಾಮಕಾರಿಯಾಗಿಯೇ ಸಾಬೀತಾಯಿತು. ಉತ್ತರಾಖಂಡ, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ ರಾಜ್ಯಗಳಿಗೆ ಹೋಲಿಸಿದಾಗ ಇಲ್ಲಿ ಶಕ್ತಿ ಮೀರಿ ಕಾರ್ಮಿಕರನ್ನು ರಕ್ಷಣೆ ಮಾಡಲಾಯಿತು. ಅಸಂಘಟಿತ ಕಾರ್ಮಿಕರ ಕುಟುಂಬಗಳಿಗೆ ಹಣವನ್ನು ವಿತರಿಸಲಾಯಿತು. ಆಹಾರ ಕಿಟ್‌ಗಳನ್ನು ನೀಡಲಾಯಿತು. ಬೇರೆ ರಾಜ್ಯಗಳಲ್ಲಿ ಈ ರೀತಿಯ ಕೆಲಸಗಳಾಗಲಿಲ್ಲ.

ಇಂತಹ ಎಲ್ಲಾ ಅಂಶಗಳ ಜೊತೆಗೆ ಸಂಸತ್ತಿನಲ್ಲಿ ಮಾಡಲಾಗಿದೆಯೆಂದು ನಮ್ಮ ಶಾಸಕರ ವೇತನವನ್ನು ಕಡಿತಗೊಳಿಸಲಾಯಿತು. ಆದರೆ ಇಂತಹ ಕಠಿಣ ಕಾಲದಲ್ಲಿಯೂ ಸರ್ಕಾರಿ ನೌಕರರ, ಡಿ ದರ್ಜೆ ನೌಕರರ ವೇತನವನ್ನು ಕಡಿತಗೊಳಿಸದೆ ಆ ನೌಕರರನ್ನೂ ಸಂಪೂರ್ಣವಾಗಿ ರಕ್ಷಣೆ ಮಾಡಲಾಯಿತು.

ಕೋವಿಡ್ ಅವಧಿಯಲ್ಲಿ ಆಸ್ಪತ್ರೆಗಳೂ ಕೆಲಸ ಮಾಡುತ್ತಿತ್ತು. NHM (National Health Mission) ನ 32,000ಕ್ಕಿಂತಲೂ ಅಧಿಕ ನೌಕರರು, ಆರೋಗ್ಯ ಇಲಾಖೆಯ ನೌಕರರು, ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರು ಬಹಳ ದೊಡ್ಡ ಸಮೂಹ ಇತ್ತು.

**(ಮುಂದು)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(201) 05.02.2021, 2 .20. KG.AK**

**ಶ್ರೀ ಆಯನೂರು ಮಂಜುನಾಥ್ (ಮುಂದು.,):-**

ಮಾನ್ಯ ಸಭಾಪತಿಯವರೇ, contract and outsource employees ಇದು ಬಹಳ ದೊಡ್ಡ ಒಂದು ಸಮೂಹ. ನಾವು ಅವರನ್ನು ಅಭಿನಂದಿಸಬೇಕು. ನಾವು ಅವರಿಗೆ ಈ ಸದನದಲ್ಲಿ ಧನ್ಯವಾದಗಳನ್ನು ಹೇಳಬೇಕು. ಅತ್ಯಂತ ಜೀವ ಭಯ ಕಾಡುತ್ತಿದ್ದಂತಹ ಸಂದರ್ಭದಲ್ಲಿ ನಾವೇ ಸದನದಲ್ಲಿ ಕುಳಿತು ಎಷ್ಟು ದಿವಸಗಳ ಕಾಲ ಸದನವನ್ನು ನಡೆಸುತ್ತೀರಿ, ಆದಷ್ಟು ಬೇಗ ಮುಗಿಸಿ ಇದು, covid ಎಂದು ಹೇಳುತ್ತಿದ್ದೆವು. ಅಲ್ಲಿ ಯಾರೋ ನಮ್ಮ M.P.ಯವರು ಸತ್ತಿದ್ದಾರೆ. ಇಲ್ಲಿ ಯಾರೋ ನಮ್ಮ ಸಚಿವರು ಸತ್ತಿದ್ದಾರೆಂದು ಹೇಳುತ್ತಿದ್ದೆವು. ನಾವು ಹೊರಗಡೆ ಹೋಗುವುದಕ್ಕೆ ಆ ಸಂದರ್ಭದಲ್ಲಿ ಆತಂಕ ಪಡುತ್ತಿದ್ದೆವು.

ಮಾನ್ಯ ಸಭಾಪತಿಯವರೇ, ಅಂತಹ ಸಂದರ್ಭದಲ್ಲಿ ಪ್ರತಿಯೊಬ್ಬ covid ರೋಗಿಯ ಮನೆ ಬಾಗಿಲನ್ನು ತಟ್ಟಿ ಅವರಿಗೆ ಚಿಕಿತ್ಸೆಯನ್ನು ಕೊಡಿಸುವಂತಹ ಕೆಲಸವನ್ನು ನಮ್ಮ ಆರೋಗ್ಯ ಇಲಾಖೆ ಮಾಡಿದೆ. ಅದು ಸಾವಿನ ಮನೆಯ ಬಾಗಲು ತಟ್ಟುವಂತಹ ಅನುಭವ. ಅದು ಅಷ್ಟು ಭಯಾನಕವಾಗಿತ್ತು. ಮೊದಲಂತು covid ಬಂದಿದೆ ಎಂದರೆ, ಇಡೀ ಊರನ್ನೇ seal ಮಾಡುತ್ತಿದ್ದರು. ಆ ಊರಿಗೆ ಹೋಗಿ ಬರುವುದಕ್ಕೆ ಭಯ. ಆ ನಂತರ street, ಮೊಹಲ್ಲಾ seal. ಯಾರಾದರೂ ಆಟೋದಲ್ಲಿ ಓಡಾಡಿದರೆ, ಅವರ ಜೊತೆಗೆ ಮಾತನಾಡುವಂತಿಲ್ಲ, ಅವರನ್ನು ಮುಟ್ಟುವಂತಿಲ್ಲ. ಆಗ ನಮಗೆ ಈ ಕಾಯಿಲೆ ಏನೆಂದು ಅರ್ಥವಾಗಿರಲಿಲ್ಲ. ಆಗ ಎಲ್ಲಿಗೆ ಹೋದರೂ ಸಹ ಗಾಬರಿ ಆಗುತ್ತಿತ್ತು. ಈಗ ಆ ಭಯ ಹೋಗಿದೆ. ಈಗ covid ಬಂದಂತಹವರ ಮನೆಯನ್ನು ಮಾತ್ರ seal ಮಾಡುತ್ತಿದ್ದಾರೆ. ಏಕೆಂದರೆ, ಈಗ covidನ ಪರಿಚಯವಾಗಿದೆ. ಹಾಗೆಯೇ, ಅದನ್ನು ಯಾವ ರೀತಿ ನಿಯಂತ್ರಿಸಬಹುದೆಂದು ಆರೋಗ್ಯ ಇಲಾಖೆಗೆ ಗೊತ್ತಾಗಿದೆ. ಆ ಸಂದರ್ಭದಲ್ಲಿ ಇಡೀ ಊರನ್ನು seal ಮಾಡುತ್ತಿದ್ದರು. ಅಂತಹ ದಿವಸಗಳಲ್ಲಿ ಆರೋಗ್ಯ ಇಲಾಖೆಯ ಕಾರ್ಯಕರ್ತರು, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು ಮನೆಗಳ ಬಾಗಿಲಿಗೆ ಹೋಗಿ ರೋಗಿಗಳನ್ನು ಪತ್ತೆ ಹಚ್ಚಿ ಬಂದರು. ಇವರು ಯಾವ ಸೈನಿಕರಿಗಿಂತ ಕಡಿಮೆ? ಇವರು ಯಾವ ಯೋಧರಿಗಿಂತ ಕಡಿಮೆ?

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಒಬ್ಬ ರೋಗಿ ಇದ್ದ ಮನೆಯ ಬಾಗಿಲಿಗೆ ಹೋಗಿ ಬರುವುದು ಎಂದರೆ, ಸಾವಿನ ಮನೆಯನ್ನು ಅಂದರೆ, ಅದು ಯಮನ ಮನೆಯ ಬಾಗಿಲನ್ನು ತಟ್ಟಿ ಬಂದಂತಹ ಅನುಭವ. ಅವರು duty ಗೆ ಹೋಗಿ ಮತ್ತೆ ಮನೆಗೆ ಬಂದರೆ, ಅವರನ್ನು ಮನೆಯೊಳಗೆ ಸೇರಿಸಿಕೊಳ್ಳುತ್ತಿರಲಿಲ್ಲ. Covid Duty hospital ನಲ್ಲಿ ಮಾಡಿದರೆ, ಅವರು ಯಾವುದೋ hotel ನಲ್ಲಿ ಉಳಿಯಬೇಕಾಗಿತ್ತು. ಸುಮಾರು 15 ದಿವಸಗಳು ಹೊರಗಡೆ ಉಳಿಯಬೇಕಾಗಿತ್ತು. ಅವರು ಮನೆಗೆ ವಾಪಸ್ಸು ಹೋಗುವಂತೆ ಇರಲಿಲ್ಲ. ನಾವು ಒಬ್ಬ ಆರೋಗ್ಯ ಕಾರ್ಯಕರ್ತೆಯ ಮಗು ಅಮ್ಮ ಎಂದು ಅಳುತ್ತಿರುವಂತಹ ದೃಶ್ಯವನ್ನು ಮಾಧ್ಯಮಗಳಲ್ಲಿ ನೋಡಿದ್ದೇವೆ. ಆದರೆ, ಆಕೆ ಕರ್ತವ್ಯಕ್ಕೆ ಹಾಜರಾಗಿದ್ದರಿಂದ, 15 ದಿವಸ ಮನೆಗೆ ಹೋಗುವಂತಿಲ್ಲ. ನಾವು ಇಂತಹ ಒಂದು ಭೀಕರ ದೃಶ್ಯಗಳನ್ನು ನೋಡಿರಲಿಲ್ಲ. ಆ ಸಂದರ್ಭದಲ್ಲಿ ಮನುಷ್ಯನ ಸಂಬಂಧಗಳೇ ಹೊರಟು ಹೋಯಿತು. ಯಾರು ಯಾರನ್ನು ಮುಟ್ಟುವಂತೆ ಇರಲಿಲ್ಲ. ದೂರ ಇರು, ಎಲ್ಲಿಂದ ಬಂದಿದ್ದೀರಿ, ಯಾವ ಊರಿನಿಂದ ಬಂದಿದ್ದೀರಿ ಎಂದೆಲ್ಲಾ ಪ್ರಶ್ನೆಗಳನ್ನು ಮಾಡುತ್ತಿದ್ದೆವು. ಈ ಸಂದರ್ಭದಲ್ಲಿ ಮಾನ್ಯ ತಿಮ್ಮಾಪೂರರವರೇ, ನನಗೆ ಒಂದು ಗಾಡವಾದ ಅನುಭವ ವ್ಯಕ್ತಿಗತವಾಗಿ ಆಗಿದೆ. ಅದು ಯಾವುದೆಂದರೆ, ನನ್ನನ್ನು ನೆನಪಿಸಿದ್ದು ಸುಮಾರು ಒಂದೂವರೆ ಎರಡು ತಿಂಗಳು ನಾವು ಯಾರ ಜೊತೆಗೂ ಬೇರೆಯುವಂತಿಲ್ಲ. ನಾವು ಯಾರನ್ನು ಮುಟ್ಟುವಂತಿಲ್ಲ. ನಮ್ಮ ಹೆಂಡತಿ ಮಕ್ಕಳು ನಮ್ಮ ಅಕ್ಕಪಕ್ಕ ಕುಳಿತುಕೊಳ್ಳುವಂತಿಲ್ಲ. ನಮ್ಮ ಬಂಧು ಬಾಂದವರು ಮನೆಗೆ ಬರುತೇವೆ ಎಂದರೆ ಬರಬೇಡಿ ಎಂದು ಹೇಳುತ್ತಿದ್ದೆವು. ಅದರಲ್ಲೂ ನಾನು covidಗೆ ಒಳಗಾಗಿ hospitalನಲ್ಲಿ ಏಕಾಂಗಿಯಾಗಿ ಕುಳಿತುಕೊಂಡಿದ್ದಂತಹ ಆ ಸಂದರ್ಭದಲ್ಲಿ ನನ್ನ ಹೆಂಡತಿ ಮಕ್ಕಳು ಸಹ ನನ್ನನ್ನು ನೋಡಲು ಬರುವಂತಿಲ್ಲ. ಅದೇ ಆಸ್ಪತ್ರೆಯಲ್ಲಿ ಒಬ್ಬ ಕೈಗಾರಿಕೋದ್ಯಮಿ quarantine ಆಗಿದ್ದರು. ಒಂದು ಮಾತು ಹೇಗೆ ಮನುಷ್ಯನ ಪರಿವರ್ತನೆಯ ಕಾಲಘಟ್ಟಕ್ಕೆ ಬಂದುಬಿಟ್ಟಿದೆ ಎಂದು ಅನಿಸಿತ್ತು. ನನ್ನ ಎದುರಗಡೆ ಒಬ್ಬ ಕೈಗಾರಿಕೋದ್ಯಮಿ ಇದ್ದರು. ಅವರು ನನಗಿಂತ ವಯಸ್ಸಿನಲ್ಲಿ ಚಿಕ್ಕವರು. ಅವರು ಬಹಳ ಕೋಟ್ಯಾಧೀಶ್ವರ. ಅವರು ಬಹಳ ಚೆನ್ನಾಗಿ ಕೈಗಾರಿಕೆಯನ್ನು ನಡೆಸಿಕೊಂಡು ಬಂದಿದ್ದಾರೆ. ನಾವಿಬ್ಬರು ಎದುರು-ಬದುರು ಕೊಠಡಿಗಳಲ್ಲಿ ಇದ್ದೇವು. ಅವರು ಅವರ ಕೊಠಡಿಯಲ್ಲಿ ನಿಂತುಕೊಂಡು ಮಾತನಾಡುವುದು. ನಾನು ನನ್ನ ಕೊಠಡಿಯಲ್ಲಿ ನಿಂತುಕೊಂಡು ಮಾತನಾಡುವುದು ಮಾಡುತ್ತಿದ್ದೆವು. ಆ ಸಂದರ್ಭದಲ್ಲಿ ಮಾತನಾಡುವುದಕ್ಕೆ ಜನ ಬೇಕಾಗಿತ್ತು. ಇಲ್ಲವೆಂದರೆ, ಹುಚ್ಚು ಹಿಡಿದು ಹೋಗುತ್ತಿತ್ತು. ನನಗೆ ಆಗ ಒಂಟಿತನ ಎಷ್ಟು ಭೀಕರ ಎನ್ನುವುದು ಅನುಭವಕ್ಕೆ ಬಂತು. ಆ ಕೈಗಾರಿಕೋದ್ಯಮಿ ನಾವು ಇಷ್ಟು ವರ್ಷಗಳ ಕಾಲ ದುಡಿಮೆ ದುಡಿಮೆ ಎಂದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸತ್ತುಬಿಟ್ಟೆವು, ನಾವು ಬೇಕಾದಷ್ಟು ಹಣವನ್ನು ಸಂಪಾದನೆ ಮಾಡಿದ್ದೇವೆ, ಈಗ ನನಗೆ ಅನಾರೋಗ್ಯವಾಗಿದೆ, ನನ್ನನ್ನು ನನ್ನ ಹೆಂಡತಿ ಮಕ್ಕಳು ಬಂದು ನೋಡುವಂತಿಲ್ಲ. ಆ ಕೈಗಾರಿಕೋದ್ಯಮಿ ಮಂಜಣ್ಣ ನಾನು ಸತ್ತು ಹೋದರೆ, ನನ್ನನ್ನು plastic bag ನಲ್ಲಿ ತುಂಬುಕೊಂಡು ಬಿಸಾಕುತ್ತಾರೆ, ನಾನು ಇಷ್ಟು ವರ್ಷಗಳ ಕಾಲ ದುಡಿದದ್ದು ಯಾರಿಗೆ ಎನ್ನುವಂತಹ ಪ್ರಶ್ನೆ! ಈ ದುಡಿಮೆ ಬೇಕಾ, ನಾವು ಇನ್ನು ಮುಂದೆ ಸಮಾಜದ ಮಧ್ಯೆ ಬದುಕುವುದನ್ನು ಕಲಿಯಬೇಕು ಎನ್ನುವಂತಹ ಮಾತನ್ನು ಹೇಳಿದರು. ಅವರಿಗೆ ಆ ಮಾತನ್ನು ಆ ಅನುಭವ ಹೇಳಿಸಿತು. ನಾನು ಇದಕ್ಕಿಂತ ಸಾಮಾಜಿಕವಾಗಿ ಗುರುತಿಸಿಕೊಂಡಿದ್ದೆ. ನನ್ನ ಕಾರ್ಮಿಕ ಹಿನ್ನೆಲೆ ಮತ್ತು ನನ್ನ ಸಂಘಟನೆಯ ಹಿನ್ನೆಲೆಯ ಕಾರಣಕ್ಕೆ ಬಹು ದೊಡ್ಡ ಪ್ರಶ್ನೆ ನನ್ನ ಕಣ್ಮುಂದೆ ಬಂತು. ಆ ಒಂಟಿತನ. ನಾವು ಯಾರನ್ನು ಮುಟ್ಟುವಂತಿಲ್ಲ. ಈ ಆಧುನಿಕ ಅಸ್ಪೃಶ್ಯತೆಯನ್ನು ಒಂದೂವರೆ ತಿಂಗಳು ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಇದನ್ನು ಒಂದು ಜನಾಂಗ ಶತ ಶತಮಾನಗಳ ಕಾಲ ಹೇಗೆ ತಡೆದುಕೊಂಡಿತ್ತು? ನಾನು ಯಾರನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ನನಗೆ ಕೊರೋನಾದ ಅನುಭವ ಆಗುತ್ತಿತ್ತು. ಆ ಅಸ್ಪೃಶ್ಯತೆ ಇದೆಯಲ್ಲ, ಅದು ಒಂದು ತಿಂಗಳೂ ಅಥವಾ ಎರಡು ತಿಂಗಳದ್ದು, ಅದು ನಮ್ಮ ಆರೋಗ್ಯದ ಕಾರಣಕ್ಕೆ, ನಮ್ಮ ಹೆಂಡತಿ ಮಕ್ಕಳು ಜೊತೆಯಲಿಲ್ಲ. ಅಲ್ಲಿ ಮುಟ್ಟ ಬೇಡ, ಅಲ್ಲಿ ಇರುತ್ತೇ, ಇಲ್ಲಿ ಮುಟ್ಟ ಬೇಡ, ಇಲ್ಲಿ ಇರುತ್ತೇ, glass ಮುಟ್ಟ ಬೇಡ. Lift ಮುಟ್ಟಬೇಡ, ಅಲ್ಲಿ ಇರುತ್ತೇ ಎನ್ನುವಂತಹ ಆ ಒಂದು ಪ್ರಚಾರವನ್ನು ಕೇಳಿ ಕೇಳಿ ಸಾಕಾಗಿತ್ತು, ಆಗ ನನಗೆ ಇದೊಂದು ಆಧುನಿಕತೆಯ ಅಸ್ಪೃಶ್ಯತೆಯ ಅನುಭವವನ್ನು ಅನುಭವಿಸುತ್ತಿದ್ದೇನೆಂದು ಅನಿಸುತ್ತಿತು. ನಮಗೆ ಭಗವಂತ ಈ ಅಸ್ಪೃಶ್ಯತೆಯ ಗಾಡ ಅನುಭವ ಹೇಗಿರುತ್ತದೆಂದು ಪಾಠ ಕಲಿಸುವುದಕ್ಕೆ ಕೊರೋನಾವನ್ನು ಸಮಾಜಕ್ಕೆ ಕೊಟ್ಟಿದ್ದಾನೆಂದು ಅನಿಸಿತ್ತು. ನಮ್ಮ ಕೈಯಲ್ಲಿ ಒಂದೂವರೆ/ಎರಡು ತಿಂಗಳು ಒಂಟಿಯಾಗಿ ಇರುವುದಕ್ಕೆ ಸಾಧ್ಯವಾಗಲಿಲ್ಲ. ನಮ್ಮ ಕೈಯಲ್ಲಿ ಯಾರನ್ನು ಮುಟ್ಟುವುದಕ್ಕೆ ಸಾಧ್ಯವಾಗಲಿಲ್ಲ. ಒಂದು ಸಮುದಾಯ ಸಾಹಸ್ರಾರು ವರ್ಷಗಳ ಕಾಲ ಹೇಗೆ ಬದುಕಿರಬೇಡ? ನೀನು ಅಲ್ಲಿಗೆ ಬರಬೇಡ. ನೀನು ಇಲ್ಲಿ ಹೋಗಿಬೇಡ. ನೀನು ಇಲ್ಲಿ ಕಾಲು ಇಡಬೇಡ, ಈಗ ಯಾವ ರೀತಿ ಒಬ್ಬ ಕರೋನಾ ರೋಗಿಗೆ ಹೇಳುತ್ತಿದ್ದರೋ, ಅದೇ ಸ್ಥಿತಿಯನ್ನು ಆ ಒಂದು ಸಮಾಜ ಅನುಭವಿಸಿತ್ತಲ್ಲ ಎಂದು ನನಗೆ ಅವತ್ತು ಅನಿಸುವಾಗ, ಆ ಒಂದು ರೀತಿಯ ಅನುಭವ ಹೇಗಿರಬಹುದೆಂದು ಕಲ್ಪನೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಯಿತು. ಏಕೆಂದರೆ, ನಾವು ಅನುಭವಿಸಿರುವವಲ್ಲ. ಇದನ್ನು ಅನುಭವಿಸಿರುವಂತಹವರ ನೋವು ಏನಿರಬಹುದೆಂದು ಊಹೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಯಿತು. ನಮಗೆ ಕರೋನಾ ಒಂದು ಪಾಠವನ್ನು ಕಲಿಸಿದೆ. ಅಸ್ಪೃಶ್ಯತೆ ಮಾಡಬಾರದೆಂದು ಅನಿಸಿತು. ಇಂತಹ ಒಂದು ಅಗಾಧವಾದಂತಹ ಅನುಭವಗಳ ಚಿತ್ರಣವನ್ನು ಬಿಚ್ಚಿ ಇಡುವುದಕ್ಕಿದೆ. ನಮ್ಮ employees, ASHA workers,

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Anganwadi ರವರು ಮತ್ತು Health Department ರವರು ಏನೇನು ಮಾಡಿದರು, ಈ ವ್ಯವಸ್ಥೆಯೊಳಗೆ ಅವರಿಗೆ ಏನೇನು ಸಂಬಳ ಕೊಟ್ಟಿದ್ದೇವೆ ಎನ್ನುವುದನ್ನು ಸಹ ಹೇಳಬೇಕಾಗಿದೆ. ಏಕೆಂದರೆ, ಮುಂದೆ ಬರುವಂತಹ budget ನಲ್ಲಿ ಅದು improvementಗೆ ಬೇಕಾಗಿದೆ. ಕೆಲವೊಮ್ಮೆ ward ಒಳಗೆ ವೈದ್ಯರು ಹೋಗುತ್ತಿರಲಿಲ್ಲ. ವೈದ್ಯರು ಸಹ ಗಾಬಾರಿ ಬಿದ್ದು ಹೋಗಿದ್ದರು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಬಾಗಲಕೋಟೆ Covid designated ಆಸ್ಪತ್ರೆಗೆ ಭೇಟಿ ಕೊಡುತ್ತೇನೆಂದು ಹೇಳಿಕೆ ಕೊಟ್ಟುಬಿಟ್ಟೆ. ಆಮೇಲೆ SP, DC ಮತ್ತು ಅಲ್ಲಿನ ಉಸ್ತುವಾರಿ ಸಚಿವರು request ಮಾಡಿಕೊಂಡರು. ಆದರೆ, ನನಗೆ ಅನಿವಾರ್ಯ. 'I can't eat my words' ಎಂದು ಹೇಳಿ ನಾನು PPE Kit ಅನ್ನು ಧರಿಸಿಕೊಂಡು ಆಸ್ಪತ್ರೆಯ ಒಳಗಡೆ ಹೋದರೆ, District Surgeon ರವರು ಪಾಟೀಲ್‌ರವರೇ ನಾನು ಬರುವುದಿಲ್ಲ. ನೀವೇ ಹೋಗಿ ಎಂದು ಹೇಳಿದರು. Viral load ಬಹಳ ಇದೆ, ನಿಮಗೆ ಏನಾದರೂ ಹೆಚ್ಚುಕಡಿಮೆಯಾದರೆ ಅದಕ್ಕೆ ನಾನು ಜವಾಬ್ದಾರಲ್ಲವೆಂದು ಹೇಳಿದರು. ಈಗ ಮಾನ್ಯ ಸದಸ್ಯರು ಹೇಳಿದಂತೆ ಕೆಳಹಂತದ ಸಿಬ್ಬಂದಿಯವರು, nurse, ward boys ಒಳಗೆ ಬಂದರು. ಆದರೆ, ವೈದ್ಯರು ಬರಲಿಲ್ಲ. ಇದೊಂದು ದುರಂತ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರೇ, ತಾವು ಮಾತನಾಡಲು ಇನ್ನೂ ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತೀರಿ?

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾನೀಗ ಇಲ್ಲಿಗೆ ನಿಲ್ಲಿಸುತ್ತೇನೆ. ನನಗೆ ಸೋಮವಾರಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, At least, ಈ Governor's Speech ನಲ್ಲಿ ಅವರಿಗೆ ಒಂದು ಕೃತಜ್ಞತೆ ಹೇಳುವಂತಹ ಸೌಜನ್ಯ ಸಹ ಅವರ ಸರ್ಕಾರಕ್ಕೆ ಬರಲಿಲ್ಲ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಮಾತೇ ಮುಗಿಸಿಲ್ಲ. ಮಾನ್ಯ ಸದಸ್ಯರು ಆರ್.ಬಿ.ತಿಮ್ಮಾಪೂರರವರು ಹಿರಿಯ ಸಚಿವರಾಗಿದ್ದವರು. ಅವರಿಗೆ ಏನು ಅವಸರ. ಅವರು ನನ್ನಂಗೆ 9 ತಿಂಗಳಿಗೆ ಹುಟ್ಟಬಾರದಾಗಿತ್ತೇ;

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರೇ, ತಮಗೆ ಮಾತನಾಡಲು ಇನ್ನೂ ಎಷ್ಟು ಕಾಲವಕಾಶ ಬೇಕು?

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಸಮಗ್ರವಾಗಿ ಮಾತನಾಡಬೇಕು. ಹಾಗಾಗಿ, ನನಗೆ ಇನ್ನೂ ಸಾಕಷ್ಟು ಕಾಲವಕಾಶ ಬೇಕಾಗಿದೆ.

**ಹಂಗಾಮಿ ಸಭಾಪತಿಯವರು:–** ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರೇ, ಹಾಗಾದರೆ, ತಮಗೆ ಸೋಮವಾರದಂದು ಅವಕಾಶ ಕೊಡುತ್ತೇನೆ. ಅಂದು ತಮ್ಮಿಂದಲೇ ಈ ವಿಷಯವನ್ನು ಪ್ರಾರಂಭ ಮಾಡೋಣ. ಈಗ ಎರಡೂವರೆ ಗಂಟೆಯಾಗಿದೆ. ನಮ್ಮಲ್ಲಿ ಸಾಕಷ್ಟು ಶಾಸಕರು ಊರಿಗೆ ಹೋಗಬೇಕೆಂದು ಆಪೇಕ್ಷೆಪಟ್ಟಿದ್ದಾರೆ. ಹಾಗಾಗಿ, ಈಗ ಸದನವನ್ನು ದಿನಾಂಕ 08.02.2021 ರ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 2 ಗಂಟೆ 28 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 8ನೇ ಫೆಬ್ರವರಿ ಮಾಹೆ 2021ರ ಸೋಮವಾರದಂದು ಪೂರ್ವಾಹ್ನ 11-00 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”